
# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ -2021

**ನಾವು ಹಳ್ಳಿಗೆ ಹೋಗಿ ಕೆಟ್ಟೆವೋ**
**ಅಥವಾ**
**ಪಟ್ಟಣಕ್ಕೆ ಹೋಗಿ ಕೆಟ್ಟೆವೋ..?**



ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 38**

**ಸಂಚಿಕೆ - 9**

**ಜೂನ್ - 2021**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಮೂರು ಪಂಚಾಂಗಗಳು | ಪಾಲಹಳ್ಳಿ ವಿಶ್ವನಾಥ್ | 5 |
| ಕೋಪಗೃಹವಾರ್ತೆಗಳು | ಜಯಶ್ರೀ ದೇಶಪಾಂಡೆ | 9 |
| ಫೂಲ್ ಆದೆ | ಸಹನ ಪ್ರಸಾದ್ | 13 |
| ಬೊಕ್ಕ ತಲೆ ಕಸಿ ಪುರಾಣ! | ಜಿ.ಎಸ್.ಟಿ. ಪ್ರಭು | 15 |
| ಪುನರ್ಜನ್ಮ ಬೇಕೇ ಬೇಕಾ? | ಎಚ್. ಗೋಪಾಲಕೃಷ್ಣ | 22 |
| ಒಗ್ಗರಣೆ | ಗೌತಮ | 25 |
| ಪಾತ್ರೆಗಳೊಂದಿಗಿನ... | ಸವಿತ ನಾಗೇಶ್ | 27 |
| ಒಂದು ಗುಬ್ಬಚ್ಚಿಯ ನಂಬಿಕೆಯ ಕಥೆ | ಸುಧೀಂದ್ರ | 30 |
| ನ್ಯೂ ವರ್ಷನ್ | ವಾಟ್ಸ್‌ಪ್ | 33 |
| ಹಿಂದಿನ ದಿನಗಳಲ್ಲಿ ಮನೋರಂಜನೆ | ಕಮಲ ಸಿಡೆನೂರ್ | 35 |
| ತುಂತುರು | ದಂನಆ | 37 |
| ಪುಸ್ತಕ ಪರಿಚಯ | ಆರತಿ ಘಟಿಕಾರ್ | 38 |


ಮುಖಪುಟ ವ್ಯಂಗ್ಯಚಿತ್ರ:
**ಗುಜ್ಜಾರ್ / ಆನಂದ**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

ದ್ರಾವಿಡ್ ಅವರಿಗೆ ಗ್ರೆಗ್ ಚಾಪೆಲ್ ಅಭಿನಂದನೆ

ಕ್ರೀಡಾ ಸುದ್ದಿ

**ಇದರಿಂದ ಚಾಪೆಲ್ ಅವರ ಘನತೆ ಹೆಚ್ಚಾಗಿದೆ ಅಂತ ಅಪರಂಜಿ ನಕ್ಕಳಂತೆ !!**

************

ನಗುವು ಸಹಜ ಧರ್ಮ , ಆದರೆ ಮಿತಿ ಇರಲಿ  ಪತ್ರಿಕೆ ಹೇಳಿಕೆ

**ಬಂಗಾರದ ತರಹ ಮಾತು ಎಂದು ಅಪರಂಜಿ ನಸುನಗುತ್ತ ತಲೆದೂಗಿದಳಂತೆ !**

************

ನ್ಯಾಯಾಧೀಶರು ಸರ್ವಜ್ಞರಲ್ಲ –  ದಿನಪತ್ರಿಕೆ

**ಸರ್ವಜ್ಞ ಬೆಚ್ಚಿ ಬಿದ್ದನಂತೆ !!!**

************

"ಬದುಕಿನ ದಣಿವು ನೀಗಿಸುವ ಕಥೆಗಳು" – ಜಯಂತ ಕ್ಯಾಕಿಣಿ ಅವರ "ಅನಾರ್ಕಲಿಯ ಸೇಫ್ಟಿ ಪಿನ್" ಪುಸ್ತಕ ವಿಮರ್ಶೆ

**ಆಹ್ಹ ! ವಿಮರ್ಶೆ ಅಂದರೆ ಹೀಗಿರಬೇಕು !!**

***********

ಆಮ್ಲಜನಕ ಕೊರತೆ; ಭೂತಾನ್ ಭಾರತಕ್ಕೆ ನೆರವು.  ಸುದ್ದಿ

**ದೇಶ ಪುಟ್ಟದಾದರೂ ಹೃದಯ ದೊಡ್ಡದು !!**

**********

ಕೋವಿಡ್ ವೈರಸ್ ಕೂಡ ಒಂದು ಜೀವಿ ; ಅದಕ್ಕೂ ಜೀವಿಸಲು ಹಕ್ಕಿದೆ  ಪತ್ರಿಕೆಯಲ್ಲಿ ಹೇಳಿಕೆ

**ಅಪಪ್ರಚಾರದ ಪರಾಕಾಷ್ಠೆ ಎಂಬುದಕ್ಕೆ ಕರಾಳ ಉದಾಹರಣೆ !!**

**********

ಭಾರತದಲ್ಲಿ ಸೋಲು; ; ಆಸ್ಟ್ರೇಲಿಯಾ ನಾಯಕ ಪೇಯ್ನ್ ಸಿಡಿಮಿಡಿ !! – ಕ್ರೀಡಾ ಸುದ್ದಿ

**ಅವರ ಮನದಾಳದ ನೋವು ಶಮನವಾಗಲಿ ಅಂತ ಅಪರಂಜಿ ಸಂತಾಪ ಪಟ್ಟಳಂತೆ !!**

********

# "ನಮ್ಮ ನಿಮ್ಮಲ್ಲಿ"

♦ಶಿವಕುಮಾರ್

ಹಲವು ದಿನಗಳ ಹಿಂದೆ ಸಾಹಿತಿ ಮಿತ್ರ ಶ್ರೀಯುತ ಕೆ. ಸತ್ಯನಾರಾಯಣರವರು ತಮ್ಮ "ಸ್ವಭಾವ ಚಿತ್ರಗಳು" ಎಂಬ ನೂತನ ಸಂಕಲನವನ್ನು ನನಗೆ ಕಳಿಸಿ ನನ್ನ ಅಭಿಪ್ರಾಯವನ್ನು ತಿಳಿಸಿರೆಂದು ಬಿನ್ನವಿಸಿದ್ದರು.

ಈ ಸಂಕಲನದ ವ್ಯಕ್ತಿ ಚಿತ್ರಗಳನ್ನು ಓದಿದಾಗ, ಸ್ವಲ್ಪ ಕಾಲ ಮನದಲ್ಲಿ ನಿಂತು ಚಿಂತಿಸುವಂತೆ ಮಾಡುವ ಲೇಖನ ಪೋಸ್ಟ್‌ಮ್ಯಾನ್ ಪದ್ಮನಾಭಯ್ಯ. ಭಾರತೀಯ ಅಂಚೆ ಇಲಾಖೆಯ ಸೇವಾ ದಕ್ಷತೆಗೆ ಮುಖ್ಯ ಕಾರಣವೆಂದರೆ ಗ್ರಾಮಾಂತರ ಪ್ರದೇಶಗಳಿಗೆ ಅಂಚೆ ವಿಲೇವಾರಿ ಮಾಡುವ Extra Departmental Delivery Agent ಎಂಬ ನಾಮಧೇಯವನ್ನು ಹೊತ್ತ ಅಂಚೆಯಣ್ಣಂದಿರು. ಅಂತಹ ಒಬ್ಬ ಅಂಚೆಯಣ್ಣ ಪದ್ಮನಾಭಯ್ಯ. ದಶಕಗಳ ಕಾಲ ಕೆಲಸಮಾಡಿದರೂ ಇವನಿಗೆ ಕೆಲಸ ಖಾಯಂ ಆಗಿರಲಿಲ್ಲ. ತೀರ ಬಡತನದಲ್ಲಿದ್ದ ಈತನ ಜೀವನ ಸಾಗುವುದಕ್ಕೆ ಹೆಂಡತಿಯ ಅಕ್ಕನಿಗಿದ್ದ ಶಿಶುವಿಹಾರದ ಮೇಡಂ ಕೆಲಸವೇ ಆಧಾರ. ಪದ್ಮನಾಭಯ್ಯನಿಗೆ ಬರುತ್ತಿದ್ದ ಪುಡಿಕಾಸು ಪಗಾರ, ಯೂನಿಯನ್‌ಗಳ ಚಂದಾ ಕಟ್ಟುವುದಕ್ಕೇ ಹೋಗುತ್ತಿತ್ತು. ಸ್ವಭಾವದಿಂದ ಸಾತ್ವಿಕನಾಗಿದ್ದರಿಂದ ಸಹಜವಾಗಿಯೇ ಈತ ಜನಪ್ರಿಯತೆಯನ್ನೂ ಗಳಿಸಿದ್ದ. ಇಂತಹ ವ್ಯಕ್ತಿಯ ಬಗ್ಗೆ ಒಂದು ಸೊಗಸಾದ ನುಡಿಚಿತ್ರವನ್ನು ಈ ಪ್ರಬಂಧದಲ್ಲಿ ಕಾಣಬಹುದು. ಕೊನೆಯಲ್ಲಿ ಒಬ್ಬ ಬಡ ಶಾಲಾಬಾಲಕನಿಗೆ ಸ್ಕೂಲ್ ಬ್ಯಾಗ್ ಕೊಡಿಸಲು ಆತ ಲೇಖಕರಿಗೆ ದುಂಬಾಲು ಬೀಳುವುದರಲ್ಲಿ ಲೇಖನ ಮುಗಿಯುತ್ತದೆ. ಮನಸ್ಸಿನಲ್ಲಿ ನಿಲ್ಲುವ ಇನ್ನೊಂದು ವ್ಯಕ್ತಿಯಂದರೆ ಖಾದ್ರಿ ಎಂಬ ಇಂಗ್ಲೀಷ್ ಮೇಷ್ಟರು. ಇದನ್ನು ಓದಿದಾಗ ನನಗೆ ನನ್ನ ಹೈಸ್ಕೂಲಿನಲ್ಲಿ ಇಂಗ್ಲಿಷ್ ಪಾಠ ಹೇಳುತ್ತಿದ್ದ ಖುದ್ದೂಸ್ ಮೇಷ್ಟರು ನೆನಪಿಗೆ ಬಂದರು. ಅವರದ್ದೂ ಇಂತಹದೇ ವ್ಯಕ್ತಿತ್ವ. ಖಾದ್ರಿಯವರ ಅವಿಸ್ಮರಣೀಯ ಸ್ವಭಾವಚಿತ್ರವನ್ನು ಈ ಬರಹದಲ್ಲಿ ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಸಂಕಲನದ ಕೊನೆಯ ಪ್ರಬಂಧ 'ಸ್ವಭಾವ ಪದಗಳು". ಇದರಲ್ಲಿ ಲೇಖಕರು ನಸುಗುನ್ನಿ, ಗುರುಮ ಘಾತಕ ಮತ್ತು ಮಿಣ್ಣನೆಯ ಮನುಷ್ಯ ಎಂಬ ಮೂರು ಪದಗಳನ್ನು ವಿಶ್ಲೇಷಣೆ ಮಾಡಿರುವ ರೀತಿ ತಿಳಿಹಾಸ್ಯದ ಶೈಲಿಗೆ ಮಾದರಿಯಾಗಬಲ್ಲುದು.

ಒಟ್ಟಿನಲ್ಲಿ ಹೇಳುವುದಾದರೆ ಈ ಚಿಂತಾಜನಕ ದಿನಗಳಲ್ಲಿ, ಇಂತಹ ಲಘು ಓದುಗಳು ಮನಸ್ಸಿನ ಮುದವನ್ನು ಕಾಯ್ದುಕೊಳ್ಳಲು ಸಹಾಯಕ ಎಂಬುದು

ನನ್ನ ಅನಿಸಿಕೆ.

ಲಾಕ್ ಡೌನ್ ಕಾರಣಗಳಿಂದ ಅಪರಂಜಿಯ ಮುದ್ರಣಕಾರ್ಯ ಸ್ಥಗಿತಗೊಂಡಿದೆ. ಅಂಚೆ ವಿಲೇವಾರಿಯೂ ಏರುಪೇರಾಗಿದೆ. ಅಂತರ್ಜಾಲದಲ್ಲಿ ಮತ್ತು ಇತರ ಡಿಜಿಟಲ್ ಮಾಧ್ಯಮಗಳಲ್ಲಿ ಪತ್ರಿಕೆಯನ್ನು ಓದುಗರಿಗೆ ತಲುಪಿಸಲು ಸಾಹಸ ಮಾಡುತ್ತಿದ್ದೇವೆ. ಇಂತಹ ದಿನಗಳಲ್ಲಿ ನಿಮ್ಮೆಲ್ಲರ ಸಹಕಾರ , ಸಹಾನುಭೂತಿಗಳನ್ನು ಅಪರಂಜಿ ಕೋರುತ್ತಾಳೆ.

ಬಹು ಬೇಗನೆ ಸಾಮಾನ್ಯ ಸ್ಥಿತಿ ಹಿಂದಕ್ಕೆ ಬರಲಿ ಎಂಬುದೇ ಅಪರಂಜಿಯ ಪ್ರಾರ್ಥನೆ.

■

---

## ಫೇವರಿಟ್ ಜೋಕ್

ನೀವು ನೂರಾರು ಜೋಕುಗಳನ್ನು ಕೇಳಿರುತ್ತೀರಿ. ಆದರೆ ಯಾವುದೋ ಒಂದು ಜೋಕ್ ನಿಮಗೆ ಅತ್ಯಂತ ಪ್ರಿಯವಾಗಿರುತ್ತದೆ. ಅದು ನಿಮ್ಮ ಫೇವರಿಟ್ ಜೋಕ್. ಅದನ್ನು ಇತರರೊಂದಿಗೆ ಹಂಚಿಕೊಳ್ಳಲು ಅಪರಂಜಿ ನಿಮಗೆ ಒಂದು ಅವಕಾಶ ನೀಡುತ್ತಿದೆ. ಬನ್ನಿ, ಆ ನಿಮ್ಮ ಮೆಚ್ಚಿನ ಜೋಕನ್ನು ನಮಗೆ ಬರೆದು ಕಳುಹಿಸಿ. ಅದು ಚಿಕ್ಕ ಚೊಕ್ಕವಾಗಿರಬೇಕು. ಇತರರಿಗೆ ಮುಜುಗರ ತರುವಂತಿರಬಾರದು. ದ್ವಂದ್ವಾರ್ಥಗಳಿಂದ ಕೂಡಿರಬಾರದು. ಇಷ್ಟೇ ನಮ್ಮ ಕಂಡೀಷನ್. ಹಾ! ಅದು ನಿಮಗೆ ಏಕೆ ಮೆಚ್ಚುಗೆ ಆಯಿತು ಎನ್ನುವುದನ್ನು ಎರಡೇ ಎರಡು ವಾಕ್ಯಗಳಲ್ಲಿ ಬರೆಯಿರಿ. ನಿಮ್ಮ ಜೋಕುಗಳನ್ನು 31.7.2021 ರ ಒಳಗೆ ಅಪರಂಜಿಯಲ್ಲಿರುವ ಇಮೇಲ್ ಐಡಿಗೆ ಕಳುಹಿಸಿ

---

# ಮೂರು ಪಂಚಾಂಗಗಳು

**। ಪಾಲಹಳ್ಳಿ ವಿಶ್ವನಾಥ್**

(ಖ್ಯಾತ ಯಹೂದಿ ಲೇಖಕ ಶಲೋಮ್ ಅಲೆಖೆಮ್ (Sholem Aleichem ( 1859 – 1916), ಅವರ ಒಂದು ಕಥೆಯ ಭಾವಾನುವಾದ)

ಅಲ್ಲ, ನನ್ನಂತಹವನು, ಹತ್ತು ಮಕ್ಕಳ ತಂದೆ, ದಿನ ಪತ್ರಿಕೆಗಳನ್ನು ಮಾರುತ್ತಿದ್ದವನು, ಈಗ ಈ ತರಹ ಕದ್ದು ಅಶ್ಲೀಲ ಪುಸ್ತಕಗಳನ್ನು ಏಕೆ ಮಾರುತ್ತಿದ್ದಾನೆ ಎಂದು ನಿಮಗೆ ಕುತೂಹಲವಿರಬೇಕಲ್ವೇ? ನನ್ನ ಜೀವನಾನೇ ಬದಲಾಯಿಸಿ ಹೋಯಿತು! ಎಲ್ಲಾ ಆ ಮಿಲಿಟರಿಯವನಿಂದ ! ಹಾಳಾಗಿಹೋಗಲಿ ಅವನು! ಇದೆಲ್ಲ ಬಹಳ ಹಿಂದೆ ನಡೆದಿದ್ದು. ಈಗ ಆ ಸೇನಾಪತಿ ಎಲ್ಲಿದ್ದಾನೋ ಗೊತ್ತಿಲ್ಲ. ದಿನಪತ್ರಿಕೆಗಳನ್ನು ಮಾರುವವನಿಗೂ ಸೇನಾಪತಿಗೂ ಏನು ಸಂಬಂಧ ಅಂತ ಕೇಳ್ತಾ ಇದ್ದೀರಲ್ಲವೆ? ಸಾವಧಾನ.

ಬಹಳ ಹಿಂದಿನ ಕಥೆ ಇದು. ಆಗಿನ ರಷ್ಯದಲ್ಲಿ, ನಾವು ಯಹೂದಿಗಳು ಯಾರಿಗೂ ಹೆದರಿಕೊಳ್ತಾ ಇರಲಿಲ್ಲ. ಆಗೆಲ್ಲ ನಾನು ಈ ದೊಡ್ಡ ನಗರದ ಮೊಹಲ್ಲಾನಲ್ಲಿ ದಿನಾ ಪತ್ರಿಕೆ ಮಾರ್ತಾ ಇದ್ದೆ. ಆಗೆಲ್ಲ ಇಷ್ಟು ದಿನಪತ್ರಿಕೆಗಳಿರಲಿಲ್ಲ. ಪತ್ರಿಕೆಗಳಲ್ಲದೆ ನಾನು ಶ್ಲೋಕದ ಪುಸ್ತಕಗಳನ್ನು ಮಾರ್ತಾ ಇದ್ದೆ. ಯೆಹೂದೀ ಪಂಚಾಂಗಗಳು ಕೂಡ. ನಮ್ಮ ಮೊಹಲ್ಲಾನ ಅಂಗಡಿ ಬೀದಿಗೆ ಹೋದರೆ ನನ್ನ ಸಾಮಾನುಗಳು ಎಲ್ಲಾ ಖರ್ಚಾಗಿ ಹೋಗ್ತಿದ್ವು.

ಆಗ ನಾನು ಪಂಚಾಂಗಗಳನ್ನು ಮಾರ್ತಿದ್ದೆ ಅಲ್ವಾ. ವರ್ಷ ಪ್ರಾರಂಭ ಆಗೋ ಮೊದಲು ಸಾಮಾನ್ಯವಾಗಿ ನೂರು ಖರೀದಿಸಿ ಅವೆಲ್ಲವನ್ನ ಮಾರ್ತಿದ್ದೆ. ಆದರೆ ಒಂದು ಸತಿ ಏನಾಯ್ತು ಅಂದರೆ ವರ್ಷ ಶುರುವಾಗಿ ಮೂರು ತಿಂಗಳಾದರೂ ನನ್ನ ಹತ್ತಿರ ಮೂರು ಪಂಚಾಂಗಗಳು ಖರ್ಚಾಗಿರಲಿಲ್ಲ, ಉಳಿದುಕೊಂಡು ಬಿಟ್ಟಿದ್ದವು. ಒಂದಲ್ಲ, ಎರಡಲ್ಲ, ಮೂರು! ಹೇಗೆ ಇವನ್ನು ಮಾರುವುದು ? ಈಗಲೇ ಕಷ್ಟ, ಮುಂದೆ ಯಾರು ತೊಗೋತಾರೆ? ಈ ಮೊಹಲ್ಲದವರೆಲ್ಲಾ ಆಗಲೇ ತೊಗೊಂಡುಬಿಟ್ಟಿದಾರೆ. ಅವರ್ಯಾಕೆ ಎರಡನೆಯದು ತೊಗೋತಾರೆ?

ಹೀಗೇ ಅಂಗಡಿಬೀದೀಲಿ ಓಡಾಡ್ತಾ ಇದ್ದಾಗ ಒಬ್ಬ ಮಿಲಿಟರಿಯವನು ಕಾಣಿಸಿದ, ಅನೇಕ ಪದಕಗಳಿದ್ದವು ಅವನ ಎದೆಯ ಮೇಲೆ. ಸೇನಾಪತಿ ಇರಬೇಕಲ್ವಾ? ಅಲ್ಲಿ ಒಂದು ಕೆಫೆಯ ಹೊರಗಡೆ ಕಾಫಿ ಕುಡೀತಾ ಕುಳಿತಿದ್ದ. ಹಾಗೇ ಅಲ್ಲಿ ಇದ್ದ ಸೇವಕನೊಬ್ಬನಿಗೆ ಏನೋ ಜೋರಾಗಿ ಹೇಳುತ್ತಿದ್ದ. "ನೆನಪಿಟ್ಕೊ ! ನಮ್ಮ ಮನೆ ಇರುವುದು 3ನೇ ಕ್ರಾಸಿನಲ್ಲಿ 6ನೆ ನಂಬರ್ ! ನನ್ನ ಹೆಂಡತಿಗೆ ಹೇಳಬೇಕು ಪುಷ್ಕಿನ್ ರಾಯರು ರಾತ್ರಿ ಭೋಜನಕ್ಕೆ ಬರ್ತಿದಾರೆ ಅಂತ. ತಿಳೀತ." ಸೇನಾಪತಿ ಹೀಗೆಯೇ ಕೂಗ್ತಾ ಇದ್ದ. ಆ ಸೇವಕ ಅರ್ಥ ಆಯಿತು ಎಂದರೂ ಮೂರು ನಾಲ್ಕು ಬಾರಿ ಸೇನಾಪತಿ ಹೇಳಿದ್ದನ್ನೇ ಹೇಳ್ತಾ ಇದ್ದ: "3ನೆ ಕ್ರಾಸ್, 6ನೆ ನಂಬರು, ಪುಷ್ಕಿನ್ ರಾಯರು"

ಸರಿ, ಸೇನಾಪತಿ ಮತ್ತೆ ಕಾಫಿ ಕುಡಿಯಲು ಶುರುಮಾಡಿದ. ನಾನು ಅಲ್ಲೇ

ನಿಂತಿದ್ದನ್ನು ದುರುಗುಟ್ಟಿಕೊಂಡು ನೋಡಿದ. ಸ್ವಲ್ಪ ಹೆದರಿದೆ, ಆದರೂ ಅಲ್ಲೇ ನಿಂತಿದ್ದೆ.

"ನೀನು ಏನಯ್ಯಾ ಹೋಗತಾನೇ ಇಲ್ಲ. ಏನು ಬೇಕು ನಿನಗೆ "

" ಸೇನಾಪತಿಯವರೆ ! ಒಂದು ಯಹೂದಿ ಪಂಚಾಂಗ ತೆಗೆದುಕೊಳ್ಳಿ"

"ನಾನು ಏನು ಮಾಡಲಯ್ಯ ನಿನ್ನ ಯಹೂದಿ ಪಂಚಾಂಗ ಇಟ್ಟುಕೊಂಡು? ನಾನು ಯಹೂದಿ ಅಲ್ಲ, ಗೊತ್ತಾಗುತ್ತಲವ? ಅದೂ ವರ್ಷ ಶುರುವಾಗಿ 3 ತಿಂಗಳಾದವು"

"ಇನ್ನೂ 9 ತಿಂಗಳುಗಳಿವೆ. ಎಲ್ಲಾ ಹಬ್ಬಗಳೂ ಇವೆ. ಯಹೂದೀ ಹಬ್ಬಗಳು."

"ಯಹೂದಿ ಹಬ್ಬ ತೊಗೊಂಡು ನಾನೇನು ಮಾಡಲಿ? ಹೋಗು ಹೋಗು"

"ತೊಗೋಳಿ ಸಾರ್, ಮನೇಲಿ ಮಕ್ಕಳಿದಾರೆ. ಹಣ ಬೇಕು"

"ಹೋಗು, ಹೋಗು "

ಇದೂ ಪ್ರಯತ್ನಿಸಿಬಿಡೋಣ ಅಲ್ಲವೇ ?

"ನೀವು ಪಂಚಾಂಗ ತೊಗೊಳ್ಳದಿದ್ರೂ ಪರವಾಗಿಲ್ಲ, ಸಾರ್! ನಿಮ್ಮನ್ನು ನೋಡುವುದೇ ಖುಷಿ ! ದೇಶಕ್ಕಾಗಿ ಎಷ್ಟು ಹೋರಾಡಿದ್ದೀರಿ !.. ನಾನು ಬರ್ತೀನಿ"

ಸ್ವಲ್ಪ ದೂರ ಹೋಗುವುದಲ್ಲೇ 'ಬಾ ಇಲ್ಲಿ ' ಎಂದು ಕೇಳಿಸಿತು. ನೋಡಿದರೆ ಅದೇ ಸೇನಾಪತಿ. 'ಸರಿ, ಒಂದು ಪಂಚಾಂಗ ಕೊಡು' ಅಂದರು. ಹಣಕ್ಕೆ ಚೌಕಾಶಿ ಏನೂ ಮಾಡಲಿಲ್ಲ. ಏನೂ ಮಾತು ಆಡಲಿಲ್ಲ. ಇಂತಹವರು ಎಲ್ಲಿ ಸಿಗ್ತಾರೆ! ನಾನು ಸ್ವಲ್ಪ ಜಾಸ್ತೀನೇ ಕೇಳಿದ್ದೆ. ಆದರೂ ಸೇನಾಪತಿ ಏನೂ ಹೇಳಲಿಲ್ಲ. ನಮಸ್ಕಾರ ಹೇಳಿ ಈ ಕಡೆ ಹೊರಟೆ.

ಇನ್ನೂ ಎರಡು ಪಂಚಾಂಗ ಉಳಿದುಕೊಂಡಿದೆಯಲ್ಲಾ? ಏನು ಮಾಡುವುದು? ಮತ್ತೆ ಆ ಸೇನಾಪತಿಯ ಹತ್ತಿರವೆ ಹೋಗಲೇ? ಏನೋ ಒಂದು ಸತಿ ಕರುಣೆಯಿಂದ ತೆಗೆದುಕೊಂಡ. ಪಾಪ, ಒಂದು ಯಹೂದಿ ಪಂಚಾಂಗವೇ ಸಾಕು ಅವನಿಗೆ. ಇನ್ನು ಎರಡು ತೊಗೋತಾನಾ? ಹಾಗೇ ಯೋಚಿಸುತ್ತಿದ್ದಾಗ ಒಂದು ಒಳ್ಳೆಯ ಆಲೋಚನೆ ಬಂದಿತು. ಆ ಸೇನಾಪತಿ ಹೇಳುತ್ತಿದ್ದ ಅವನ ಮನೆಯ ವಿಳಾಸ ನೆನಪಿಗೆ ಬಂದಿತು '3ನೆಯ ಕ್ರಾಸ್, 6ನೆಯ ಮನೆ " ಅಂಗಡಿ ಬೀದಿಯಿಂದ ಓಡಿದೆ. ಮೂರನೇ ಕ್ರಾಸೂ ಸಿಕ್ತು. ಮನೇನೂ ಸಿಕ್ತು. ವಾವ್! ಬಹಳ ಚೆನ್ನಾಗಿದೆ ಎಂದುಕೊಂಡೆ.

ಮನೆ ಮುಂದೆ ಇದ್ದ ಗಂಟೆಯನ್ನು ಒತ್ತಿದೆ. ಯಾರೂ ಬರಲಿಲ್ಲ. ಯಾರಾದರೂ ಸೈನಿಕ ಬಂದು ನನ್ನ ಹೊಡೆದು ಓಡಿಸಿದರೆ? ಮತ್ತೆ ಒತ್ತಿದೆ. ಯಾರೂ ಬರಲಿಲ್ಲ. ಏನು ಮಾಡೋಣ ಅಂತ ಯೋಚಿಸುತ್ತಿದ್ದಾಗ, ಬಾಗಿಲು ತೆಗೀತು. ಕೆಲಸದವಳು ಅಂತ ಕಾಣಿಸ್ತು; ಕೈನಲ್ಲಿ ಪರಕೆ ಇಟ್ಟುಕೊಂಡಿದ್ದಳು. ಹೊಡೆಯೋ ಹಂಗೇ ಕಾಣಿಸಿದಳು ಸೇನಾಪತಿಯವರ ಪತ್ನಿಯನ್ನು ನೋಡಬೇಕು ಎಂದು ಹೇಳಿದೆ. ಪರಕೆ ನೋಡಿದರೆ ಭಯವೇ ಆಗ್ತಿತ್ತು. ಆಕೆ ಹಾಗೇ ನನ್ನ ಒಂದು ನಿಮಿಷ ನೋಡಿ ಬಾಗಿಲು ಮುಚ್ಚಿದಳು. ಸರಿ, ಹೋಗೋಣ ಎಂದುಕೊಂಡಾಗ ಶಬ್ದ ಆಯಿತು. ಮನೆ ಬಾಗಿಲು ತೆಗೆಯಿತು. ಒಬ್ಬ ಸುಂದರ ಯುವತಿ ನಿಂತಿದ್ದಳು. ಸೇನಾಪತಿಯ ಹೆಂಡತಿಯೇ ? ಇಲ್ಲ, ಈಕೆ

ಇನ್ನೂ ಚಿಕ್ಕವಳು. ಸೇನಾಪತಿಯ ಮಗಳೆ? ಇಲ್ಲ, ಅವನಿಗೆ ಅಷ್ಟು ವಯಸ್ಸಾಗಿರಲಿಲ್ಲ. ಈ ತರಹ ಆಲೋಚನೆಯಲ್ಲಿದ್ದಾಗ ಆಕೆ "ಏನು ಬೇಕು ನಿಮಗೆ ?" ಎಂದಳು. ಅವಳನ್ನು ಹೇಗೆ ಸಂಬೋಧಿಸಬೇಕೋ ಗೊತ್ತಾಗಲಿಲ್ಲ. "ಏನಿಲ್ಲ. ಅಂಗಡಿಬೀದಿಯಲ್ಲಿ ಸೇನಾಪತಿಯವರು ಸಿಕ್ಕಿದ್ದರು. ನನ್ನ ಹತ್ತಿರ ಪಂಚಾಂಗ ಇರೋದು ನೋಡಿದರು. ಒಂದು ಪಂಚಾಂಗಾನ ಮನೇಗೆ ಕೊಟ್ಬಿಡು. ಅವರು ದುಡ್ಡು ಕೊಡ್ತಾರೆ. ಅದಲ್ಲದೆ ಮುಷ್ಕಿನ್ ರಾಯರು ರಾತ್ರಿ ಭೋಜನಕ್ಕೆ ಬರ್ತಾರೆ ಅಂತ ನಿಮಗೆ ಹೇಳಿ ಅಂದರು" "ಮುಷ್ಕಿನ್ ರಾಯರು ಅಲ್ಲ. ಪುಷ್ಕಿನ್ ರಾಯರು " ಎಂದು ನಕ್ಕಳು. ಆಕೆ ನಗೋದು ನೋಡಿ ನನಗೂ ಆರಾಮ ಎನ್ನಿಸಿತು "ಎಲ್ಲಿ ಪಂಚಾಂಗ ಕೊಡಿ, ಎಷ್ಟು ದುಡ್ಡು?" ನಾನು ಹೇಳಿದಾಗ, ಮತ್ತೆ ನಗೆ ಬೀರಿ ಒಳಗೆ ಹೋಗಿ ಹಣ ತಂದುಕೊಟ್ಟಳು. ವಿದಾಯ ಹೇಳಿ ಬಾಗಿಲು ಹಾಕಿಕೊಂಡಳು. ಸಿಕ್ಕಿದರೆ ಈ ತರಹ ಗಿರಾಕಿ ಸಿಗಬೇಕು ಎಂದು ಕೊಂಡೆ. ಅಂತೂ ಎರಡು ಪಂಚಾಂಗಗಳನ್ನ ಮಾರಿಯಾಯಿತು.


ಕಡೆಗೂ ಒಂದು ಪಂಚಾಂಗ ಉಳಿದುಕೊಂಡಿತು. ಮತ್ತೆ ಸಂಜೆ ಅಂಗಡಿಬೀದಿಗೆ ಹೋದೆ. ದೂರದಲ್ಲಿ ಒಬ್ಬ ಮಿಲಿಟರಿಯವನು. ಸುಮಾರು ಪದಕಗಳು ಎದೆಯ ಮೇಲೆ. ಸದ್ಯ, ಕಡೆಯ ಪಂಚಾಂಗವನ್ನೂ ಮಾರಬಹುದು. ಆದರೆ ಓ ! ಅವನೇ ! ಅದೇ ಆ ಪದಕಧಾರಿ ಹಳೆಯ ಸೇನಾಪತಿ ! ಅವನೂ ನನ್ನನ್ನು ಗುರುತಿಸಿರಬೇಕು ಏಕೆಂದರೆ ನನ್ನನ್ನು ಕರೆಯುತ್ತಿದ್ದಾನೆ. ಏನು ಮಾಡೋಣ! ಸಿಕ್ಕಿ ಹಾಕಿ ಕೊಂಡುಬಿಟ್ಟೆನಲ್ಲ. ಸರಿ, ಓಡಲು ಶುರುಮಾಡಿದೆ. ಜೋರಾಗಿಯೇ ಓಡಿದೆ. ಅದರೆ ಯಾರೋ ನನ್ನನ್ನು ಕರೆಯುತ್ತಿದ್ದಾರಲ್ಲ! ನಿಲ್ಲಿ, ನಿಲ್ಲಿ ಎಂದು ಕೂಗುತ್ತಿದ್ದಾರೆ ! ಯಾರಿರಬಹುದು? ಆ ಸೇನಾಧಿಪತಿ ಇರಬಹುದೇ ? ಏನೋ ಒಬ್ಬ ಬಡ ಯಹೂದಿ ಒಂದು ಪಂಚಾಂಗ ಜಾಸ್ತಿ ಮಾರಿದ ಮಾತ್ರಕ್ಕೆ ಇಷ್ಟು ಅಲ್ಲೋಲಕಲ್ಲೋಲ! ! ಇನ್ನೂ ಜೋರಾಗಿ ಓಡಿದರೆ? ಪೋಲೀಸರನ್ನೂ ಕರೆಯಬಹುದು. ಹಾಗೇ ನಿಂತರೂ ಕಷ್ಟವೇ ! ಅಷ್ಟರಲ್ಲಿ ಯಾರೋ ನನ್ನ ಕೈ ಹಿಡಿದುಕೊಂಡರು. ಆ ಸೇನಾಪತೀನೇ ಇರಬೇಕು ! ತಿರುಗಿ ನೋಡಿದರೆ ಅವನಲ್ಲ. ಕೆಫೆಯಲ್ಲಿ ಕೆಲಸಮಾಡುವ ಸೇವಕ ! ಬೆವರ್ತಾ ಇದ್ದಾನೆ. "ಅಲ್ಲಯ್ಯ ! ಯಾಕೆ ಈ ತರಹ ಓಡ್ತಾ ಇದ್ದೀಯ. ಆ ಸೇನಾಪತಿ ನಿನ್ನ ನೋಡಬೇಕಂತೆ"

"ಯಾವ ಸೇನಾಪತಿ? ಅವನಿಗೆ ನಾನೇ ಬೇಕು ಅಂತ ನಿನಗೆ ಹೇಗೆ ಗೊತ್ತು?"

"ಏನದರ ಅರ್ಥ? ನನಗೇನು ಕಿವಿ ಇಲ್ಲವಾ? ಸೇನಾಪತಿ ಹೇಳಿದ್ದು ನನಗೆ ಕೇಳಿಸಲಿಲ್ಲವಾ?" ಅಲ್ಲಿ ಹೋಗ್ತಾ ಇದ್ದಾನೆ ನೋಡು. ಪಂಚಾಂಗ ಮಾರ್ತಾ ಇರೋ ಯಹೂದಿ ! ಅವನ್ನ ಹಿಡುಕೊಂಡು ಇಲ್ಲಿಗೆ ಕರಕೊಂಡು ಬಾ" ಅಂದ.

ತಕ್ಷಣ ಏನೋ ಯೋಚನೆ ಬಂತು ನೋಡಿ, ಅವನಿಗೆ ಹೇಳಿದೆ "ಆ ಸೇನಾಪತಿ ಕಳಿಸಿದಾನೆ ಅಂತ ಮೊದಲೇ ನೀನು ಹೇಳಬೇಕಿತ್ತು ! ವಿಚಿತ್ರಾನಪ್ಪ ಅವನು ! ಈ ಪಂಚಾಂಗಕ್ಕೆ ಬೆಳಿಗ್ಗೆಯಿಂದ ಚೌಕಾಶಿ ಮಾಡ್ತಾ ಇದ್ದಾನೆ. ಇದು ಒಂದು ರೂಬಲ್ ಅಂತ ಹೇಳಿದರೆ ಅರ್ಧ ಕೊಡ್ತೀನಿ ಅಂತಾನೆ. ಸ್ವಲ್ಪ ಕಡಿಮೆ ಮಾಡೋಕೆ ತಯಾರಿದ್ದೆ, ಅದರೆ ಅರ್ಧ ರೂಬಲ್, ಅರ್ಧ ರೂಬಲ್ ಅಂತ ಗಲಾಟೆ ಮಾಡ್ತಾ ಇದ್ದಾನೆ. ಏನು ಮಾಡೋಣ ಬಿಡು ! ಬಗ್ಗಬೇಕು ! ಅಧಿಕಾರ ಇರೋವರಲ್ವಾ? ತೊಗೊ, ಅರ್ಧ ರೂಬಲ್ ಕೊಡು. ಓಡಿ ಹೋಗಿ ಅವನಿಗೆ ಪಂಚಾಂಗ ಕೊಟ್ಟು ಅವನ ಹತ್ತಿರ ದುಡ್ಡು ಇಸ್ಕೊ"

ಈವತ್ತಿಗೂ ಆ ಎರಡನೆಯ ಸೇನಾಪತಿ ಯಾರು ಅಂತ ತಿಳಿದಿಲ್ಲ. ಮೊದಲನೆಯವನೇ ಇರಬೇಕು ಅಂತ ಕಾಣಿಸುತ್ತೆ. ಏಕೆಂದರೆ ಬಡ ಯಹೂದಿ ಪತ್ರಿಕಾ ಮಾರಾಟಗಾರರ ಮೇಲೆ ಸರ್ಕಾರ ಏಕೆ ಅಷ್ಟು ಕೋಪ ತೋರಿಸ್ಬೇಕು. ಈಗ ನಮ್ಮ ಮೊಹಲ್ಲನಲ್ಲಿ ಯಾರೂ ಯಹೂದಿ ಪಂಚಾಂಗಗಳನ್ನು, ಪತ್ರಿಕೆಗಳನ್ನ ಮಾರೋಕೆ ಆಗೋದೇ ಇಲ್ಲ. ಮಾರಲೇ ಬೇಕಾದರೆ ಮುಚ್ಚಿಮುಚ್ಚಿ ಮಾಡಬೇಕು. ಅದಕ್ಕೇ ನಾನು ಈ ಪೋಲಿ ಪುಸ್ತಕಗಳನ್ನು ಮಾರಬೇಕಾಗಿ ಬಂದಿದೆ. ನನಗೆ ಗೊತ್ತು ಇದು ಒಳ್ಳೆದಲ್ಲ ಅಂತ ! ಆದರೆ ಏನು ಮಾಡೋದು ಯಹೂದಿಯೂ ಬದುಕಬೇಕಲ್ಲವೆ? ಮನೇಲಿ ಹಸಿದು ಕುಳಿತಿರುವ ಮಕ್ಕಳಿಗೆ ಏನು ಕೊಡೋಣ? ದೇವರು ನನ್ನನ್ನು ಕ್ಷಮಿಸಲಿ ಎಂದು ಕೋರುತ್ತೇನೆ. ಪ್ರತಿದಿನ ಆ ಸೇನಾಪತೀನ ನಾನು ಬಯ್ಕೊತೀನಿ. ಏನು ಮಾಡೋದು ನಾವು ಕೇಳಿಕಂಡು ಬಂದಿದ್ದು. ಅದಿರಲಿ, ಈ ತಿಂಗಳ 'ರತಿರಹಸ್ಯ' ಬಂದಿದೆ, ಕೊಡಲೆ ?


ಟೈಂ ಪಾಸ್ ವಿಳಾಸ

ವಿಳಾಸ ಹುಡುಕಿಕೊಂಡು ಬರುತ್ತಿದ್ದವರು ಎದುರಿಗೆ ಕಂಡ ವ್ಯಕ್ತಿಯನ್ನು ಸರ್ ಇಲ್ಲಿ ನಲವತ್ತೇಳನೇ ಕ್ರಾಸ್ ಎಲ್ಲಿ ಬರುತ್ತೆ ಅಂತ ಕೇಳಿದರು. ಅದಕ್ಕೆ ಆ ವ್ಯಕ್ತಿ [illegible] [illegible] ನಲವತ್ತಾರನೇ ಕ್ರಾಸ್ ಪಕ್ಕದ್ದೇ ನಲವತ್ತೇಳನೇ ಕ್ರಾಸ್ ಅಂದರು. ವಿಳಾಸ ಕೇಳಿದ ವ್ಯಕ್ತಿ ದಂಗಾದರು ಹಾಗಾದರೆ ನಲವತ್ತಾರನೇ ಕ್ರಾಸ್ ಎಲ್ಲಿ ಅಂತ ಕೇಳಿದರು. ಅದಕ್ಕೇ ಅದೇನು ಸರ್, ನಲವತ್ತೇಳು, ನಲವತ್ತಾರು, ನಲವತ್ತೈದು ಎಲ್ಲ ಪಕ್ಕ ಪಕ್ಕದಲ್ಲೇ ಇರುತ್ತವೆ ಅಂದರು. ವ್ಯಕ್ತಿಗೆ ಯಾಕಾದರೂ ಇವರನ್ನು ವಿಳಾಸ ಕೇಳಿದೆನೋ ಅನಿಸಿತು. ಆದರೂ ತಾಳ್ಮೆಯಿಂದ ಸರ್. ಅದು ನನಗೂ ಗೊತ್ತು. ಆದರೆ [illegible] ಹೇಳಿ ನಲವತ್ತೇಳನೇ ಕ್ರಾಸ್ ಎಲ್ಲಿ ಬರುತ್ತೆ ಅಂತ ಕೇಳಿದರು. ಮತ್ತೆ ಆ ವ್ಯಕ್ತಿ ನಲವತ್ತೇಳನೇ ಕ್ರಾಸ್ ನಲವತ್ತಾರು ಮತ್ತು ನಲವತ್ತೆಂಟರ ಮಧ್ಯೆ ಬರುತ್ತೆ ಅಂದರು. ಇವನ್ಯಾರೋ [illegible] ಅಂದ್ಕೊಂಡು [illegible] ಹೊರಟಾಗ ವ್ಯಕ್ತಿ ಕರೆದು [illegible] ಕ್ರಾಸ್ ನೋಡಿ ಅಂದರು. [illegible] ಬೋರ್ಡ್ ನೋಡಿ ನಲವತ್ತಾರನೇ ಕ್ರಾಸ್. ಅಂದರು. ಹಾಗೇ ಎಣಿಸಿಕೊಂಡು ಹೋಗಿ ನಿಮ್ಮ ನಲವತ್ತೇಳನೇ ಕ್ರಾಸ್ ಸಿಗುತ್ತೆ ಅಂದರು. ಇದನ್ನು ಮೊದಲೇ ಹೇಳೋದಲ್ವೆ ಅಂದರೆ ಅದಕ್ಕೆ ಮೊದಲೇ ಹೇಳಿದ್ರೆ ನನಗೆ ಟೈಂ ಪಾಸ್ ಎಲ್ಲಿ ಆಗುತ್ತೆ ಅಂದು ನಗುತ್ತಾ ಹೊರಟು ಹೋದರು.

# ಕೋಪಗೃಹವಾರ್ತೆಗಳು...

। ಜಯಶ್ರೀ ದೇಶಪಾಂಡೆ

ಮಟಮಟ ಮಧ್ಯಾಹ್ನದ ಒಂದೂವರೆಯ ಸಮಯ, ಹೊರಗೆ ಬಿಸಿಲು ಬೆಂಕಿಯ ತಮ್ಮನಾಗಿ ಝಗ್ ಅಂತ ಕೈ ಕಾಲು ಬಿಚ್ಚಿ ಹಬ್ಬಿ ಮಲಗಿರುವ ಹೊತ್ತಿನಲ್ಲಿ ನಡೀತಿತ್ತು ನಮ್ಮ ತರಗತಿಯ ಮೂರನೆಯ ಪೀರಿಯಡ್, ಕನ್ನಡ ಕಾವ್ಯ ಪಾಠ ಆಹಾ!

"ಬಿದರ್ದೆತ್ತಿ ಖಟ್ವಾಂಗಮಂಬರವು ಕವ್ವಳಿಸೆ
ಕೋಟಿ ರವಿ ಕಾಂತಿಯಂ ವದನವದು ಸೂಸುತಿರೆ
ತಾನಾಡೆಯುಮೆಯಾಡೆ ಹರಿಯಜರ್ ಸುರರಾಡೆ
ಆಡುತಿರ್ದಾ ಗಣಂಗಳ್ ನೋಡಲಮ್ಮಮ್ಮಾ "

ತರಗತಿಯಲ್ಲಿ ಶಿವತಾಂಡವದ ಈ ಘನಗಂಭೀರ ಶ್ಲೋಕವನ್ನು ಅಷ್ಟೇ ರಭಸದೋದ್ರೇಕದಿಂದ ಹೇಳುತ್ತ ಅಂಗೋಪಾಂಗದಲ್ಲಿ ಶಿವನೇ ಆವಿರ್ಭವಿಸಿದಂತೆ ಕಾಣ್ತಿದ್ದ ನಮ್ಮ ಮೇಷ್ಟ್ರ ಕಡೆಗೆ ಬಿಟ್ಟ ಕಣ್ಣು ಬಿಟ್ಟ ಬಾಯಿ ಎರಡನ್ನೂ ಮುಚ್ಚದೆ ಕೂರುತ್ತಿದ್ದೆವು ನಾವು. ಕಾವೇರಿದ ಕೋಪದ ಕಂಪು ಸೂಸುವ ಅವರ ವಾಗ್ಝರಿಯಲ್ಲಿ ದಕ್ಷರಾಜ ಮತ್ತವನ ಅರಮನೆ, ಅಲ್ಲಿನ ವೈಭವಾಡಂಬರಗಳು, ಎಲ್ಲ ಭರ್ಜರಿಯಾಗಿದ್ದರೂ ಅನಾಹ್ವಾನಿತಳಾಗಿ, ಶಿವ ತಡೆದರೂ ಕೇಳದೆ ತವರಿಗಾಗಿ ಕರುಳು ಕರಗಿ ಓಡಿ ಬಂದಿದ್ದ ಶಿವೆ, ದಾಕ್ಷಾಯಿಣಿಗೆ ದಕ್ಕಿದ್ದೇನು? ಅವಮಾನ, ಭರ್ತ್ಸನೆ, ನಿಂದನೆ ತಾನೇ? ಅಪ್ಪನ ಅಹಂಕಾರಕ್ಕೆ, ಶಿವನ ಮಾತು ತಾ ಕೇಳದ್ದಕ್ಕೆ ಪ್ರತಿಫಲ ಅನಿಸಿ ಧಡಾರನೆ ಹೋಮಕುಂಡಕ್ಕೆ ಜಿಗಿದು ಭಸ್ಮೀಭೂತಳಾದ ದಾಕ್ಷಾಯಿಣಿಯ ಸಮಾಚಾರ ಸಿಕ್ಕೊಡನೆ ಕಾಲರುದ್ರನಾಗಲಿಲ್ಲವೇ ಶಿವ? ಅದನ್ನೇ ಶಿವನ ತಾಂಡವವಾಗಿ ಬಣ್ಣಿಸಿದ ಪದ್ಯ ಕೋಪ ಅಂದರೆ ಏನು ಅನ್ನುವುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿತ್ತು ನಮಗೆ. ಇಲ್ಲಿ ಮುಖ್ಯ ಏನು ? ಹಾಂ ಕೋಪ.

'ದೂರ್ವಾಸ' ಎಂದಾಕ್ಷಣ ಏನು ನೆನಪಾಗುತ್ತೆ? ಅದೇ –ಸಿಟ್ಟು. ಅವನನ್ನು ತಡವಿ ಎಲ್ಲಾದರೂ ಸ್ವರ್ಗದಿಂದಲೇ ಒಂದು ಶಾಪವನ್ನು ಟೆಲಿಪಥಿ ಮೂಲಕ ಭೂಮಿಗೆ ರವಾನಿಸಿಬಿಟ್ಟರೆ? ಇನ್ನು ಜಮದಗ್ನಿ, ವಿಶ್ವಾಮಿತ್ರ, ಪರಶುರಾಮ, ಕೌಶಿಕ.. ಒಬ್ಬರೇ? ಇಬ್ಬರೇ?ಮನ್ವಂತರಗಳು ಅಖಂಡ ತಪ್ಪಸನ್ನಾಚರಿಸಿ ಎಂಥೆಂತಾ ದೇವತೆಗಳನ್ನೂ, ಅದ್ಭುತಾನೇಕ ಶಕ್ತಿಗಳನ್ನೂ ಕೈವಶಪಡಿಸಿಕೊಂಡ ಇವರುಗಳೇ ಕೋಪವನ್ನು ಗೆಲ್ಲದಿದ್ದಾಗ ಇನ್ನು ನಮ್ಮ ನಿಮ್ಮಂಥವರು ಏನು ಲೆಕ್ಕ ಬಿಡಿ!

ಈ ಕೋಪ ನಮ್ಮ ತಲೆ ಕೆಡಿಸುವಷ್ಟು ಇನ್ನಾವುದೂ ಕೆಡಿಸದು ಅನ್ನುವುದು ಜಗಜ್ಜಾಹೀರು. 'ಅರಿಷಡ್ವರ್ಗಗಳಲ್ಲಿ ಒಂದೆಂಬ ಗರಿಮೆಯುಳ್ಳ 'ಕ್ರೋಧವು ಆವರಿಸದೇ ಇರುವ ನರ..' ಅಥವಾ ಇದನ್ನೇ ಸರಳಗನ್ನಡದಲ್ಲಿ ಹೇಳಲೇ? 'ಕೋಪ ಬಾರದಿರುವ ಮನುಷ್ಯರು ' ಇದ್ದಾರೆ ಎಂದರೆ ನಂಬೋದು ಕಷ್ಟವೇ. ಅದೂ ಈಗಿನ ಕಾಲದಲ್ಲಿ! ಅಲ್ಲ, ಯಾವ ಕಾಲವಾದರೇನು? ಕೋಪವೇ ಬರಲ್ಲ ಅನ್ನುವವರು ಇರಲಾರರು. ಅಥವಾ ಬಂದ ಕೋಪವನ್ನು ತೋರಗೊಡದವರು ಇರಲಿಕ್ಕೂ ಸಾಕು. ಹಾಗೆಂದು ಅವರಿಗೆ ಕೋಪವೇ ಬಾರದು ಎಂದು ಖಚಿತವಾಗಿ ಹೇಳಲಿಕ್ಕಾಗದು. ಕೋಪ

ಬರುವುದು ಬೇರೆ ಅದನ್ನು ಪ್ರಕಟಪಡಿಸುವುದೇ ಬೇರೆ ಅಲ್ಲವೇ? ಕೋಪಕ್ಕೆ ಕಾರಣವೇ? ಎಣಿಸಹೋದರೆ ಚುಕ್ಕಿಗಳು ಸಾಲದಾದಾವು ಬಿಡಿ.

ಈಗ ನಮ್ಮ ಕೈಕೇಯಿಯನ್ನೇ ತೊಗೊಳ್ಳಿ, ತೊಗೊಳ್ಳಿ ಅಂದರೆ ಉದಾಹರಣೆಗೆ ಅಷ್ಟೇ. ಅವಳ ಕೋಪ ಮಾಡಿದ ಅನಾಹುತ ಎಂಥದ್ದೆಂದು ಅರಿಯದವರಾರಿದ್ದಾರೆ? ಅದೆಂದೋ ಅದಾವುದೋ ಯುದ್ಧದಲ್ಲಿ ದಶರಥನ ರಥಕ್ಕೆ ಸಾರಥಿಯಾಗಿ ಕೂತು ಕುದುರೆಗಳಿಗೆ ಚಾಟಿ ಬೀಸಿದವಳು ಆ ಚಾಟಿಯ ಪ್ರಭಾವವೋ ಏನೋ ರಥಾಶ್ವಗಳೂ ರಥವೂ ದಶರಥನಿಗೆ ಅನುಕೂಲವಾಗಿ ಯುದ್ಧವನ್ನೇ ಗೆಲಿಸಿದಾಗ ತಡಮಾಡದೇ ಎರಡು ವರಗಳನ್ನು ಕೊಟ್ಟೇಬಿಟ್ಟನಾ ಸಾಮ್ರಾಟ– ಇಗೊಳ್ಳಿ ತುಂಬ ಖುಶಿಯೋ ತುಂಬಾ ದು:ಖವೊ ಆದಾಗ ವಚನ ಕೊಡಬಾರದು ಮತ್ತು ಪ್ರತಿಜ್ಞೆಗಳನ್ನು ಮಾಡಬಾರದು ಎಂದು ಹಿರಿಯರು ಹೇಳಿರುವುದು ಸುಳ್ಳೆ?

ಇನ್ನು ದಶರಥನ ವಚನ "ಪ್ರಾಣ್ ಜಾಯೇ ಪರ್ ವಚನ್ ನ ಜಾಯೇ" ಪ್ರಕಾರದ್ದಾಗಿ ಪರಿಣಮಿಸಿದ್ದು ಹೇಗೆಂದು ಬಲ್ಲಿರಷ್ಟೇ? ಅದೇ ಕೋಪಗೃಹ ವಾರ್ತೆ. ಆಭರಣ ಗೀಭರಣ ಎಲ್ಲ ಬಿಚ್ಚೆಸೆದು ಕೊಳಕು ಬಟ್ಟೆ ಉಟ್ಟು ಕೂದಲು ಬಿರಿಹುಯ್ದುಕೊಂಡು ಅಲ್ಲಿ ಕೋಪದ ಮಡುವಿನಲ್ಲಿನ ಪ್ರೀತಿಯ ಹೆಂಡತಿ ಉರುಳಾಡ್ತಾ ಇದ್ದರೆ ಸಹಿಸದಾದನಲ್ಲ ಚಕ್ರವರ್ತಿ?! ಮುಂದಿನದು ತ್ರೇತಾಯುಗದ ಕರುಣಕಥನ. ಮನೆಯ ಹಿರಿಮಗ ಸೊಸೆ ಕಲ್ಲು ಮುಳ್ಳು ಚುಚ್ಚಿಸಿಕೊಂಡು ಅರಣ್ಯ ಅರಣ್ಯ ಅಲೆದಲೆದದು ಬಳಲಿದ್ದು.

ಕೋಪದ ಸಹೋದರರಾದ ಲೋಭ, ಮೋಹ, ಕಾಮ, ಮದ, ಮತ್ಸರಗಳಿಗಿಂತ ಕೋಪವೇ ಪ್ರಕಟಿಸಲು ಹೆಚ್ಚು ಸುಲಭ ಅನಿಸುತ್ತದೆ. ಇಂಥ ಪ್ರಕಟಣೆಯಲ್ಲಿಯೂ ಹಲವು ಹತ್ತು ವಿಧಗಳಿರಬಹುದು. ಮುಖ ಗಂಟಿಕ್ಕಿ, ಕಣ್ಣು ಕೆಕ್ಕರಿಸಿ, ಹಲ್ಲು ಕಚ್ಚಿ – ಕಪ್ಪಗಿದ್ದರೂ– ಮುಖವನ್ನು ಕೆಂಪಗಾಗಿಸಿಕೊಂಡು ತಾರಕಕ್ಕೆ ಸ್ವರವನ್ನೊಯ್ದು,ಗರ್ಜಿಸುವ ಸಿಂಹಗಳಿರಬಹುದು... ವಟ ವಟ ವಟವೆನ್ನುತ್ತ ಅಲ್ಲಲ್ಲೇ ಅಷ್ಟಷ್ಟೇ ಬೈದು ಅಸಮಾಧಾನ ತೋರ್ಪಡಿಸುವವರು ಇದ್ದಾರೆ ಯಾರದೋ ಮೇಲಿನ ಸಿಟ್ಟನ್ನು ಇನ್ನಾರನ್ನೋ ಬೈಯುವ ಮೂಲಕ ಪ್ರಕಟಿಸುವವರಿರುವಂತೆ ಸಿಟ್ಟಿಗೆದ್ದ ನಾರಿಯರು ಕಿಚನ್ನಿನ ಸಲಕರಣೆಗಳನ್ನು ಬೀಸಿಯೋ ಕುಕ್ಕಿಯೋ ಕೋಪವನ್ನು ಬಹಿರ್ಗತಗೊಳಿಸುವುಂಟು. 'ಅತ್ತೆಯ ಮೇಲಿನ ಕೋಪ ಕೊತ್ತಿಯ ಮೇಲೆ' ಎಂಬ ಗಾದೆ ಹುಟ್ಟಿಕೊಂಡದ್ದೇ ಹೀಗಂತೆ.

ತನ್ನ ಕೈಯೊಳಗಿನ ಆಟಿಕೆಯನ್ನೋ ಬೊಂಬೆಯನ್ನೊ ನೆಲಕ್ಕೆ ಟುಕ್ ಠಕ್ಕೆಂದು ಕುಟ್ಟುತ್ತ ಭೋರೆಂದಳುವ ಕಂದನೂ ತನ್ನ ಕೋಪವನ್ನೇ ತೋರುತ್ತಿರುತ್ತೆ.ಇತ್ತೀಚಿನ ಮಕ್ಕಳಲ್ಲಂತೂ ಮಾತು ಮಾತಿಗೆ ಕೋಪ...ಕೆಲವರಲ್ಲಿ ಕೈಕೆಯಿಯೇ ಮೈದಾಳಿ ಕೋಣೆ ಹೊಕ್ಕು ಮಂಚದ ಮೇಲೆ (ಬೋರಲು?) ಬಿದ್ದು ಅತ್ತು ತೋರ್ಪಡಿಸುವ ಕೋಪವೂ ಬಲು ಮೆಚ್ಚಿನ ವಿಧಾನ. ಕೋಪಕ್ಕೂ ಅಳುವಿಗೂ ತುಂಬ ಹತ್ತಿರದ ಸಂಬಂಧವಂತೆ. ಬಯಸಿದ್ದು ಸಿಕ್ಕಲಿಲ್ಲ, ಸಿಕ್ಕಿದರೂ ದಕ್ಕಲಿಲ್ಲ ಇಂಥ ಪ್ರಸಂಗವಂತೂ ಕೋಪಕ್ಕೆ ಆಹ್ವಾನ ನೀಡುವುದು ಖಚಿತ.

ನಮ್ಮ ರಾಮಣ್ಣ ಇದ್ದಾನಲ್ಲ ಅವನ ಕೋಪದ ವೈಖರಿಯೇ ಭಿನ್ನ. ಅದೊಂದು ಬಗೆ ತಣ್ಣನೆಯ ಕೋಪ ಅನ್ನಿ ಬೇಕಾದರೆ... ಏನೋ ಉಪದ್ವ್ಯಾಪ, ಕಿತಾಪತಿ ನಡೆಸಿದ ಮಗನಿಗೆ ಕುರ್ಚಿಯಲ್ಲಿ ಆರಾಮು ಕಾಲು ನೀಡಿ ಒರಗಿ ಕೂತು "ನನಗ

ಭಾಳ ಸಿಟ್ಟು ಬಂದದನೋ ಬಾಳಾ.. " ಅನ್ನುವವ. ಈ "ಬಾಳಾ" ಅಂಬೋದು ಭಯಂಕರ ಚೂಟಿ. "ಏನಂದೀ?ಸಿಟ್ ಬಂತೂ? ಬರ್ಲಿ ಬರ್ಲಿ..' ಅಂತ ಕಿಸಿಕಿಸಿ ನಕ್ಕು ಓಟ ಕಿತ್ತಿದರೆ ರಾಮಣ್ಣ "ನನಗ ಭಾಳ ಸಿಟ್ಟು ಬಂದದನೋ ಬಾಳಾ, ಹಿಂಗ್ಯಾಕ ಮಾಡ್ತೀಯೋ.." ಅಂತನ್ನುವ ರಾಗಾಧಾರೀ ಕೋಪ ಮುಂದುವರಿದಿರ್ತಿತ್ತು. ಬಾಳಾ ಎಲ್ಲಿ? ನಾಪತ್ತೆ.

ಅಲ್ಲ, ಇದನ್ನೂ ಕೋಪ ಅಂತೀರಾ?

ಕೆಲವರ ಕೋಪದ ಪರಿಣಾಮ ಅವರ ಸ್ಥಾನಮಾನ, ಸಾಮರ್ಥ್ಯ, ಆರ್ಥಿಕ ವರಮಾನ,ಅಧಿಕಾರ ಅಂತಸ್ತುಗಳನ್ನವಲಂಬಿಸಿ ರೂಪ ಪಡೆದೀತು. ಉದಾಹರಣೆಗೆ ಜವಾನನಿಗೆ ಬರುವ ಕೋಪಕ್ಕೂ ದಿವಾನನಿಗೆ ಬರುವ ಕೋಪಕ್ಕೂ ಒಂದೇ ರಿಸಲ್ಟ್ ಬಂದೀತೆ? ಆ ಕಲ್ಪನೆ ಮಾಡಲು ಸಾಧ್ಯವೇ?

ಇನ್ನು ಅಂತಸ್ತುಗಳುಳ್ಳ ಕೋಪಗಳು ಹೀಗಂತೆ ಇಗೊಳ್ಳಿ, ಪ್ರಿನ್ಸಿಪಾಲರ ಕೋಪಕ್ಕೂ ಹೆಡ್ ಮಾಸ್ಟರ್ ಕೋಪಕ್ಕೂ 'ಡಿಗ್ರಿ'ಯಲ್ಲಿ ವ್ಯತ್ಯಾಸವುಂಟು.ಅಷ್ಟೇ ಅಲ್ಲ ಬಿಡಿ, ಕೆಲವು ಮನೆಗಳಲ್ಲಿ ಯಜಮಾನ ಮತ್ತು ಯಜಮಾನ್ತಿಯ ಸಿಟ್ಟಿಗೆ ನೀಡಬೇಕಾದ ಬೆಲೆಯನ್ನೂ, ಇಂಪಾರ್ಟನ್ಸ್ ಅನ್ನೂ ನಿರ್ಧರಿಸುವವರು ಆ ಮನೆಯ ಜ್ಯೂನಿಯರ್ ಮೆಂಬರುಗಳು ಅರ್ಥಾತ್ ಮಕ್ಕಳು ಮತ್ತು ಕೆಲಸದವರು! ಅಪ್ಪನ ಕೋಪಕ್ಕೆ 'ಅಯ್ಯೋ ಅಪ್ಪಾ ತಾನೇ? ಐದ್ ನಿಮಿಷ ಕೂಗಿ ಸುಮ್ನಾಗ್ತಾರೆ ಬಿಡು' ಅಂತ ತಮ್ಮ ಪಾಡಿಗೆ ಟಿವೀನೋ ಮೊಬೈಲೊ ಎಂಬ ಲೋಕದಲ್ಲಿ ಮುಳುಗೋದು, ಆದರೆ ಅದೇ ಯಜಮಾನ್ತಿಯ ಒಂದೇ ಒಂದು 'ಏನೋ ಅದೂ ?" ಅನ್ನುವ "ಹುಂ"ಕಾರ ಎಂಥಾ ಗಲಿಬಿಲಿ ಎಬ್ಬಿಸೀತೋ? ಅಶಿಸ್ತನ್ನು ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಸರಿಪಡಿಸೀತೋ ಗೊತ್ತಲ್ಲ?! ಛೇಛೇ, ಹೋಗಲಿ, ಮನೆಮನೆಯ ಕತೆ ಅಂತ ತಳ್ಳೋಣವೇ? ಅದಾಗದು 'ಅಮ್ಮಾವ್ರ ಗಂಡ' ಇರುವಂತೆ ಅಪ್ಪಾವ್ರ 'ಹೆಂಡತಿ'ಯೂ ಇರುವ ಸಾಧ್ಯತೆಗಳಿಲ್ಲವೇ? ಯಾಕೆಂದರೆ ಪ್ರತಿಯೊಂದಕ್ಕೂ ಅಪವಾದ ಇದ್ದೇ ಇರುತ್ತೆ.

ಮೊನ್ನೆ ಜಾನಪದ ಕವಿತೆಗಳನ್ನೋದುವಾಗ ಇದು ಎಲ್ಲೋ ಕಾಣಿಸಿಕೊಂಡಿತ್ತು.

ರೇಡಿಯೋ, ಯೂಟ್ಯೂಬುಗಳೂ ಆಗಾಗ ಹಾಡ್ತಿರುತ್ವೆ. ನೋಡಿ ಹೀಗೊಂದು ಸೊಗಸುಗೋಪ.

"ಸಿಟ್ಯಾಕೋ ಸಿಡುಕ್ಯಾಕೋ
ನನ ಜಾಣಾ, ಇಟ್ಟಾಯ್ತು
ನಿನ ಮ್ಯಾಲೆ ನನಪ್ರಾಣ
ಒಟ್ಟಿಗೆ ಇರುವಾ ಒಟ್ಟಾರೆ
ಮಡಿವಾ ಕಟ್ಟಾಣಿ ಕೊಟ್ಟೆನ್ನ ಕೈಗೊಳ್ಳೋ..."

ಮುನಿದ ಪ್ರಿಯನನ್ನೋ ಅಥವಾ ಪತಿಯನ್ನೋ ಅನುನಯಿಸಿ ಸಿಟ್ಟಳಿಯುವಂತೆ ಮಾಡುವ ಆಕೆಯ ಜಾಣ್ಮೆಗೊಂದು ಮೆಚ್ಚುಗೆ ಸಲ್ಲತಕ್ಕದ್ದು ತಾನೇ?

ಹೆಮ್ಮಕ್ಕಳ ಕೋಪ ಎಂಬುದು ಅಳು ಎಂಬ ಬ್ರಹ್ಮಾಸ್ತ್ರವಾಗಿ ಪರಿವರ್ತಿತವಾಗುವುದು ಬಲು ಬೇಗ ಅಂತಾರೆ. ಕೋಪಕ್ಕೆ ಜಪ್ಪೆನ್ನದ ಗಂಡು ಕೊನೆಗೂ ಅಳು ಎನ್ನುವ ಅಸ್ತ್ರಕ್ಕೆ ಶರಣಾಗದಿರನೇ? ಅಲ್ಲಿಗೆ ಕೊನೆ!

ಇನ್ನು ಗದ್ಯದಲ್ಲೂ 'ಕೆಂಡಾಮಂಡಲ' ಕೋಪವನ್ನು ವರ್ಣಿಸುವ ಸಾಹಿತಿಗಳು ನಾನಾ ವಿಧದ ಪದಪುಂಜಗಳನ್ನು ಬಳಸುವುದುಂಟು. ಬದ್ಧ ಭೃಕುಟಿ, ಉದ್ದಿಪ್ತ ನೇತ್ರದ್ವಯಗಳು.. ರಂಜಿತ ನಾಸಿಕಾಗ್ರ.. ಜ್ವಲಿತಾಕ್ಷಿಗಳು.. ಅರ್ಥಾತ್ ಗಂಟಿಕ್ಕಿದ ಹುಬ್ಬು, ಉದ್ರೇಕಿತ ಕಣ್ಣುಗಳು, ಕೆಂಪು ಕೆಂಪಾದ ಮೂಗಿನ ತುದಿ (ಕೋಪದಿಂದ), ಉರಿಯುವ ಕಣ್ಣುಗಳು..ಇತ್ಯಾದಿ. ಇನ್ನು ಸ್ತ್ರೀಯರಲ್ಲಾದರೆ 'ಏರಿಳಿಯುವ ಎದೆ' ಎಂಬ ಇನ್ನೊಂದು ವಿಶೇಷಣವೂ ಸೇರಿಕೊಂಡೀತು!

ಗಂಡಸರ ಕೋಪವನ್ನು ನಾರ್ಮಲ್ ಗೆ ತರಲು ಅವರಿಗೆಂದೇ ಮೀಸಲಾದ 'ಶಮನಕಾರಿ'ಗಳ ಮೊರೆ ಹೋಗುವರಂತೆ. ಅದೂ ಕೂಡ ವಿಥ್ ಎಕ್ಸೆಪ್ಷನ್ಸ್ ಕೆಟಗರಿಯಲ್ಲಿ ಬರುತ್ತೆ ಬಿಡಿ.

'ಕೋಪ' ಎನ್ನುವುದು ಅನರ್ಥಸಾಧನ ಎನ್ನುತ್ತಾರಾದರೂ ಒಳಮನಸ್ಸಿನ ಒತ್ತಡಗಳನ್ನು ಕಳಚಿಕೊಳ್ಳಲು ಇದು ಸಾಧನವೂ ಅಂತೇ. ಆದರೆ 'ಅತಿ ಸರ್ವತ್ರ ವರ್ಜ್ಯಯೇತ್'! ಅತಿ ಕೋಪ ಖಂಡಿತ ಅನರ್ಥಕಾರಿ..

"ಉತ್ತಮೇಸ್ಯಾತ್ ಕ್ಷಣಂಕೋಪಂ
ಮಧ್ಯಮೇ ಘಟಿಕಾದ್ವಯಮ್
ಅಧಮೇಸ್ಯಾದಹೋರಾತ್ರಮ್
ಪಾಪಿಷ್ಠೇ ಮರಣಾಂತಿಕಮ್"

ಉತ್ತಮರಲ್ಲಿ ಕೇವಲ ಒಂದು ಕ್ಷಣ ಕೋಪವಿದ್ದರೆ ಸಾಧಾರಣದವರಲ್ಲಿ ಎರಡು ಗಳಿಗೆ, ಕೀಳು ಜನರಲ್ಲಿ ಇಡೀ ದಿನ ಕೋಪವಿದ್ದರೆ ಮಹಾಪಾಪಿಗಳಲ್ಲಿ ಸಾಯುವ ವರೆಗೂ ಕೋಪವಿರುತ್ತದಂತೆ!

ಆಯ್ತಪ್ಪಾ,

ಇನ್ನು ಯಾರು ಯಾವ ಕೆಟಗರಿಗೆ ಸೇರಿದವರು ಎಂಬುದನ್ನು ನಾವು ನಾವೇ ನಿರ್ಧರಿಸಿಕೊಳ್ಳಬೇಕೆಂದು ಹೇಳಿದರೆ ಕೋಪವಿಲ್ಲ ತಾನೇ? ■




**ಅವರು ಹೀಗೆ ಹೇಳಿದ್ದಾಳೆ ಅಂತ ನೀವು ಹೋಗಿ ಈರೀತಿ ಹೇಳಿಕೆ ಕೊಡೊದಕ್ಕೆ ಹೋಗಬೇಡಿ ತಿಳಿತಾ.....**

# ಫೂಲ್ ಆದೆ...

**ಸಹನಾ ಪ್ರಸಾದ್**

## ಕೆಲಸ ಹೇಗಾದ್ರೂ ಇರ್ಲಿ, ಊಟ ಚೆನ್ನಾಗಿರಲಿ.

"ನಾಳೆ ಮಧ್ಯಾಹ್ನ ಊಟ ತರಬೇಡಿ. ಇಲ್ಲೇ ಅರೇಂಜ್ ಆಗಿದೆ." ಅಡ್ಮಿನ್ ಮೆಸೇಜು ನೋಡಿ ಖುಷಿಯಾಯ್ತು. ಮಾಡಿದುಣ್ಣೋ ಮಹಾರಾಣಿ ಅನ್ನೋತರ ದಿನಾಗಲೂ ನಾನೇ ಮಾಡಿದ ಅಡುಗೆ ತಿಂದು ನಾಲಿಗೆ ಕೆಟ್ಟುಹೋಗಿತ್ತು. ಬೇರೆಯವರ ಲಂಚ್ ಬಾಕ್ಸ್ ಕದ್ದು ನೋಡುವುದು, ಬಾಯಲ್ಲಿ ನೀರೂರುವುದು ಅಭ್ಯಾಸ ಆಗಿತ್ತು. ಇವರಿಗೆ ಕಾಂಟೀನ್ ಆದರೂ ಇದೆ. ನಂಗೆ ಆಫೀಸಲ್ಲಿ ಕೂರೋಕ್ಕೆ ಜಾಗ ಇದ್ದರೆ ಸಾಕು, ಅಷ್ಟು ಕಿಷ್ಕಿಂದ.

ಮರುದಿನ ಖುಷಿಯಾಗಿ ಬರೀ ವ್ಯಾನಿಟಿ ಬ್ಯಾಗ್ ಅಲ್ಲಾಡಿಸುತ್ತ ಮನೆಬಿಟ್ಟೆ. ಎಲ್ಲರೂ ಸಂತಸದಿಂದ ಕೆಲಸಮಾಡಿ, ಊಟದ ಟೈಮ್ಯಾವಾಗ ಬರುತ್ತೋ ಅಂತ ಕಾಯ್ತಾ ಇದ್ವಿ. ಹೆಂಗಸರ ಮನೆಯಲ್ಲಿ ಅವತ್ತು ಚಿತ್ರಾನ್ನ ಮಾಡಿ ಎಲ್ಲ ಡಬ್ಬಿ ಕಟ್ಟಿದ್ದರೆ, ಗಂಡಸರು ಸುಮಾರು ಜನ ಟಿಫಿನ್ ಸಹಮಾಡದೆ ಬಂದಿದ್ದರು. ಸಡನ್ ಆಗಿ ಗ್ರೂಪ್ ವಾಟ್ಸಪ್ ಬಂತು. "ಸಾರಿ, ಸ್ವಲ್ಪ ಹುಷಾರಿಲ್ಲ. ಮನೆಗೆ ಹೊರಟಿದೀನಿ" ಅಡ್ಮಿನ್ ಮೆಸೇಜ್ ನೋಡಿ ಎಲ್ಲರೂ ಶಾಕ್. ಇನ್ನೂ ಸಂಬಳ ಬಂದಿಲ್ಲ, ಹೋಟೆಲ್ ಖರ್ಚು ಬಂತಲ್ಲ ಎಂದು ಎಲ್ಲರೂ ಬೇಜಾರಾದ್ರು. 12.30ಗೆ ಎಲ್ಲರೂ ಸಪ್ಪೆ ಮೋರೆ ಹಾಕಿಕೊಂಡು ಎದ್ದರು. ಯಾವ ಹೋಟೆಲ್ಗೆ ಹೋಗೋದು ಅನ್ನೋ ಚರ್ಚೆ ಶುರುವಾಯ್ತು. ಅಷ್ಟರಲ್ಲಿ ಮತ್ತೆ ಮೆಸೇಜು "ನಾ ಮನೆಗೆ ಹೊರಟೆ. ಆದರೆ ಮೊದಲೇ ಆರ್ಡರ್ ಮಾಡಿದ ಊಟ ಮೀಟಿಂಗ್ ರೂಮಲ್ಲಿ ಕಾಯ್ತಾ ಇದೆ. ಪ್ಲೀಸ್ ಎಲ್ಲರೂ ಊಟ ಮಾಡಿ. ಸಾರಿ ಒನ್ಸ್ ಅಗೇನ್" ಎಲ್ಲರ ಬಾಯೂ ಚಾಲನೆಗೊಂಡಿತು. ಅಡ್ಮಿನ್ ಅವರನ್ನು ಬೈಯ್ಯುವವರು ಹಲವರು, ಮೊದಲೇ ಹೇಳೋದಲ್ವಾ ಅಂತ, ಇನ್ನುಕೆಲವರು, ಸಧ್ಯ ಊಟ ಸಿಕ್ಕುತ್ತ ಇದೆ ಅಂತ ಖುಷಿಯಾಗಿ ಮೀಟಿಂಗ್ ರೂಮ್ ಕಡೆ ನಡೆದರು. ಭರ್ಜರಿ ಊಟ ಕಾದಿರುತ್ತೆ ಅಂದುಕೊಂಡು ಆಸೆಯಿಂದ ರೂಮ್ ಹೊಕ್ಕವರಿಗೆ  ಕಂಡಿದ್ದು ಬಿಸಿಬೆಳೆಭಾತ್, ಮೊಸರನ್ನ ಹಾಗು ಒಂದು ಬರ್ಫಿ ಮಾತ್ರ. ಮುಗಿಸೋ ಅಷ್ಟರಲ್ಲಿ ಸಾಕಷ್ಟು ಟೀಕೆಗಳು, ಗೊಣಗಾಟಗಳು ಕೇಳಿ ಬಂದಿದ್ದವು. ಅಷ್ಟರಲ್ಲಿ ಅಡ್ಮಿನ್ಮೆಸೇಜು "ಎಲ್ಲರೂ ನನ್ನನ್ನು ಸಾಕಷ್ಟು ಬೈದುಕೊಂಡಿದೀರ. ಈಗ ದಯವಿಟ್ಟು ನಿಮ್ಮನಿಮ್ಮ ಸೀಟ್ಗಳಿಗೆ ಹೊರಡಿ. ಕೊರೊನ ದೆಸೆಯಿಂದ, ಬ್ಯುಸಿನೆಸ್ ಡೌನ್ ಆಗಿರುವುದರಿಂದ, ಸುಮಾರು ಜನರನ್ನು ಕೆಲಸದಿಂದ ತೆಗೆಯಬೇಕೆಂದು ಮಾನೇಜ್ಮೆಂಟ್ ನಿರ್ಧಾರ ಮಾಡಿದೆ. ನಾಳೆ ವಿವರಗಳು ತಿಳಿಸುತ್ತೇವೆ".

ಅದಾದ ನಂತರ ಜನರ ಮನಸ್ಥಿತಿ ಬಗ್ಗೆ ಹೇಳುವುದೇ ಬೇಡ. ಮಾರನೆಯ ದಿನ ಹಸನ್ಮುಖಿ ಅಡ್ಮಿನ್ ಎಲ್ಲರಿಗೂ ಶೇ10% ಸಂಬಳ ಜಾಸ್ತಿ ಆಗುವುದು, ಬ್ಯುಸಿನೆಸ್ ಸಾಕಷ್ಟು ಚೆನ್ನಾಗಿ ನಡೆಯುತ್ತಿದೆ. ಆದರೆ ಏಪ್ರಿಲ್ ಫೂಲ್ಮಾಡಿದ್ದು ಹೇಗಿತ್ತು? ಎಂದಾಗ ಎಲ್ಲರೂ ಸುಸ್ತು. "ಏನೇ ಇರಲಿ ಸರ್, ಊಟ ಮಾತ್ರ ಕಳಪೆ ಇಡಬಾರದಿತ್ತು" ಅಂತ ಕಾಮೆಂಟ್ ಬಂದಾಗ ನಗೆಬುಗ್ಗೆ ಉಕ್ಕಿತು!!

## ಚಿನ್ನ ಬಿಡಬೇಡ ನನ್ನ

" ಹಾಯ್ಕಣೋ.. ಎನ್ಸಮಾಚಾರ" ಕರೆ ಸ್ವೀಕರಿಸಿ, ಬಿಂಕಬಿನ್ನಾಣದಿಂದ ಉತ್ತರಿಸಿದ ದನಿ ಕೇಳಿ ರೋಮಾಂಚನವಾಯಿತು. ಬಿಗಿದಪ್ಪಿ ಮುದ್ದುಮಾಡೋ ತೀವ್ರ ಬಯಕೆ ಹತ್ತಿಕ್ಕುತ್ತ ಗಂಭೀರವಾಗಿ ನುಡಿದೆ " ಶಾಲು.. ಸಾರಿ. ನಿನಗೊಂದು ವಿಷಯ ಹೇಳಬೇಕು"

ಒಂದು ಕ್ಷಣ ಮೌನ. "ಹೇಳು" ಅಧೀರನಾದೆ. " ಅದು..ಅದು.." ಅವಳು ಕಿರಿಕಿರಿಗೊಂಡಳು. "ಬೇಗ ಹೇಳೋ. ಕೊಲ್ಲಬೇಡ ಈ ತರ" ಉಗುಳು ನುಂಗಿದೆ ನಾನು" ನನ್ನ ವಿಷಯ ಗೊತ್ತೇ ಇದೆ. ಕೆಲಸ ಸರಿ ಇಲ್ಲ. ಮನೇಲಿ ದುಡ್ಡಿನ ತಾಪತ್ರಯ. ನಿನ್ನ ಮದುವೆಯಾದರೆ ನೀನೂ ಸಹ ಕಷ್ಟದಲ್ಲೇ ಬದುಕಬೇಕು. ಇನ್ನೆರಡು ವರುಷ ಮದುವೆ ಸಾಧ್ಯವೇ ಇಲ್ಲ. ನಿನಗೂ 30 ಆಗಿಬಿಡುತ್ತೆ. ಆದ್ದರಿಂದ, ಆದ್ದರಿಂದ..ನಾವಿಬ್ಬರೂ ಬೇರೆ ಆಗೋದೇ ಒಳ್ಳೆಯದು. ಪ್ಲೀಸ್ ಬೇಜಾರಾಗಬೇಡ. ಸ್ನೇಹಿತರಾಗಿ ಮುಂದುವರೆಯೋಣ. ಪ್ರಣಯಿಗಳಾಗಿ ಕಷ್ಟ"

ಅತ್ತ ಕಡೆಯಿಂದ ಅಳುವ, ಬಿಕ್ಕುವದನಿಗಾಗಿ ಕಾಯ್ದೆ. ನಿಟ್ಟುಸಿರು ಕೂಡ ಇಲ್ಲ! ಕ್ಷಣ ಮೌನದ ನಂತರ ಮೇಲುದನಿ ಕೇಳಿಬಂತು. ಖುಷಿಯೂ ಇತ್ತು ಸ್ವರದಲ್ಲಿ

"ಒಳ್ಳೆಯದೇ ಆಯಿತು ಬಿಡು. ನಿನ್ನನ್ನು ಮದುವೆಯಾಗಿ, ಬಡತನದಲ್ಲಿ ಬೇಯೋದು ನನಗೂ ಇಷ್ಟವಿಲ್ಲ. ಅಪ್ಪ ಶ್ರೀಮಂತ ಸಂಬಂಧ ಹುಡುಕಿದರೆ. ಒಪ್ಪಿಗೆ ಕೊಟ್ಟು ಬಿಡುವೆ"

ಹೌಹಾರಿದೆ ನಾನು "ಶಾಲು, ಶಾಲು" ಕರೆ ಕಟ್ ಆಯಿತು. ಈಗ ಅಳುವ, ಗೋಳಾಡುವ ಸರದಿ ನನ್ನದು. "ನನಗೆ, ತಮ್ಮನಿಗೆ ಒಟ್ಟಿಗೆ ಕೆಲಸಸಿಕ್ಕಿದೆ. ಮನೆಕಷ್ಟಗಳೆಲ್ಲ ಇನ್ನು ತೀರಿತು. ಆದಷ್ಟು ಬೇಗ ಮದುವೆಯಾಗೋಣ" ಎಂದುಹೇಳೋಣ ಅಂತ ಫೋನ್ಮಾಡಿದಾಗ ಏನೋ ತರ್ಲೆ ಯೋಚನೆ ಹೊಳೆದು ಶಾಲುಗೆ ಫೂಲ್ಮಾಡಲು ಹೋಗಿ ಈ ರೀತಿ ಆಯಿತು. ಅಳುತ್ತಲೇ, ಬೀರ್ ಕುಡಿಯುತ್ತಾ 4 ದಿನ ಉರುಳಿತು. ತಡೆಯಲಾಗದೆ ಗೆಳೆಯನ ಮೊಬೈಲ್ ತೆಗೆದುಕೊಂಡು ಕರೆಮಾಡಿದೆ. ಯದ್ವಾತದ್ವಾ ಬಯ್ಯೋಣ ಅಂದುಕೊಂಡವನಿಗೆ ಮಾತೇಹೊರಡಲಿಲ್ಲ. ಮೋಸಗಾರ್ತಿ, ದ್ರೋಹಿ ಇತ್ಯಾದಿ ಪದಗಳು ಗಂಟಲಲ್ಲೇ ಉಳಿದವು. ಕಾಲ್ ಕಟ್ಮಾಡಿ ಮುಖ ಮುಚ್ಚಿಕೂತೆ. ಅವಳನ್ನು ಇಷ್ಟೊಂದು ಹಚ್ಚಿಕೊಂಡಿದ್ದೇನೆ ಅಂತ ಈಗಲೇ ಅರಿವಾಗಿದ್ದು. ಸ್ವಲ್ಪ ಸಮಯದ ನಂತರ ಬೆಲ್ ಶಬ್ದ, ಅಮ್ಮ ಯಾರ ಹತ್ತಿರವೋ ಮಾತಾಡಿದ್ದು ಕೇಳಿಸಿತು. ರೂಮ್ ಲೈಟ್ ಕೂಡಾ ಹಾಕದೆ ಕುಳಿತಿದ್ದೆ ನಾನು. ಯಾರೋ ಹತ್ತಿರ ಬಂದು ಮೆಲ್ಲಗೆ ಕೈಹಿಡಿದರು. ಅಷ್ಟೇ, ಮುಖ, ಕತ್ತಿನ ಮೇಲೆ ಮುತ್ತಿನ ಮಳೆ!! " ನಿನ್ನ ಬಿಟ್ಟು ಬದುಕೊಕ್ಕೆ ಆಗುತ್ತೇನೋ ನನಗೆ? ನೀನು ಫೂಲ್ಮಾಡಿದೆ, ನೀನೂ ಫೂಲ್ ಆದೆ. ನಾನು ಫೂಲ್ಮಾಡಿದೆ ಆದರೆ ಫೂಲ್ ಆಗಲಿಲ್ಲ"

ಮತ್ತೇನೂ ಮಾತನಾಡದಂತೆ ಅವಳ ತುಟಿಗಳು ತಡೆದವು!!

■

# ಬೊಕ್ಕತಲೆ ಕಸಿ ಪುರಾಣ!

। ಜಿ.ಎಸ್.ಟಿ.ಪ್ರಭು

ನಾನು ಬೊಕ್ಕತಲೆ, ಬೊಳುತಲೆ, ಬೊಕ್ಕಮಂಡೆ, ಬಾಂಡ್ಲಿ, ಮೈದಾನ, ಬೋಳ, ಕುದುರೆ ಲಾಳ ಇನ್ನೂ ಮುಂತಾಗಿ ಕರೆಸಿಕೊಳ್ಳುವವರ ವಿರೋಧಿಯಲ್ಲ. ಇದನ್ನು ಮೊದಲೇ ಸ್ಪಷ್ಟಪಡಿಸಿಬಿಡುತ್ತೇನೆ. ಅವರೂ ಎಲ್ಲರಂತೆಯೇ ಕೂದಲಿದ್ದವರು. ಹಲವರಿಗೆ ಕಪ್ಪಾದ ಸೊಂಪಾದ ಕೂದಲು, ಕೆಲವರಿಗೆ ಒತ್ತಾದ ಗುಂಗುರು ಕೂದಲು, ಇನ್ನು ಕೆಲವರಿಗೆ ತಲೆಗೆ ಎಣ್ಣೆಹಾಕಿ ಬಾಚಿದರೂ ಕೂರದ ಮಾತು ಕೇಳದ ಕೆದರಿದ ಕೂದಲು, ಜೀವನದ ಬಹುಪಾಲು ವರ್ಷಗಳು ಇದ್ದವರೇ. ಕೇಶರಾಶಿ ನೋಡಿ ಬಾಚಿ, ತೀಡಿ ಹೆಮ್ಮೆ ಪಟ್ಟವರೆ, ಫೋಟೋ ತೆಗೆಸಿಕೊಂಡು ಮೆರೆದವರೆ. ಹಲವಾರು ಕಾರಣಗಳಿಗೆ ತಮ್ಮ ಕೇಶವನ್ನು ಕಳೆದುಕೊಂಡು ಆ ಕೇಶವನನ್ನು ನಿಂದಿಸಿದವರೆ!. ಕೆಲವರಿಗೆ ಕಾಯಿಲೆಯಾಗಿ, ಹಲವರಿಗೆ ವಂಶವಾಹಿನಿಗಳ ಫಲವಾಗಿ, ಇನ್ನೂ ಕೆಲವರಿಗೆ ಹೆಚ್ಚಿನ ಚಿಂತೆಯಿಂದ ಕೂದಲು ಉದುರಿ ಹೋಗುತ್ತದೆ. ಅವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುವುದು ಬಿಟ್ಟರೆ ನಾವು ಅವರಿಗಾಗಿ ಏನನ್ನು ಮಾಡಲು ಸಾಧ್ಯ? ಮುಂದೆ ನಾವೂ ಬೋಳು ಮಂಡೆಯವರಾದರೆ ಅವರ ಸಂಘಕ್ಕೆ ಸದಸ್ಯರಾಗಬೇಕಲ್ಲ. ಅದಕ್ಕೆ ಈಗಲೇ ಒಂದು ಟವೆಲ್ ಹಾಸಿಬಿಡುತ್ತೇನೆ, ಜಾಗ ಕಾದಿರಿಸಲು ಮತ್ತು ಅನುರಾಗ ಗಳಿಸಲು.

ಕೆಲವರು ತಮ್ಮ ಕೂದಲಿಗೆ ಎಷ್ಟು ದಾಸರಾಗಿರುತ್ತಾರೆಂದರೆ ಅವರ ಕೂದಲು ಉದುರಿದ ಮೇಲೆ ಮೊದಲು ಕೂದಲು ಹೇಗಿತ್ತೋ ಹಾಗೆಯೇ ವಿಗ್ ಮಾಡಿಸಿ ಹಾಕಿಕೊಂಡು ಸಂಭ್ರಮ ಪಡುತ್ತಾರೆ. ಈ ಗುಂಪಿನಲ್ಲಿ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಘಟಾನುಘಟಿಗಳು ಇದ್ದಾರೆ. ಅವರು ಅದನ್ನು – ವಿಗ್ ಹಾಕುವುದನ್ನು – ಗೌಪ್ಯವಾಗಿ ಇಟ್ಟಿದ್ದಾರೆ. ನಾವೂ ಸಹ ಅವರುಗಳ ಹೆಸರನ್ನು ಗೌಪ್ಯವಾಗಿ ಇಡೋಣ!

ಮಳೆ ಬರುವ ಮುಂಚೆ ಕಾರ್ಮೋಡ ಕವಿಯುವಂತೆ, ಬೊಕ್ಕತಲೆಯ ಕಸಿ ವಿಚಾರಕ್ಕೆ ಮುನ್ನ ಕೆಲ ಬೊಕ್ಕತಲೆ ವಿಶೇಷಣಗಳನ್ನು ಸವಿಯೋಣ.

ತಲೆಗೆ ಎಣ್ಣೆಹಾಕಿ ಬಾಚಿದ್ದು ಅಂತಾ ಏಕೆ ಒತ್ತು ಕೊಟ್ಟು ಬರೆದಿದ್ದೀರಿ ಅಂತಾ ಅನೇಕರಿಗೆ ಸಂಶಯ ಬರಬಹುದು. ನನ್ನ ಸ್ನೇಹಿತನೊಬ್ಬ ಇದ್ದಾನೆ. ಬ್ರಹ್ಮಚಾರಿ ಅನ್ನಬೇಕೋ ಅಥವಾ ಅವಿವಾಹಿತ ಅನ್ನಬೇಕೋ ಅನ್ನುವ ಗೊಂದಲದಲಿದ್ದೇನೆ! ಆ ವಿಷಯ ಬಿಡೋಣ. ಮೊದಲು ಕಪ್ಪಾದ ಸೊಂಪಾದ ಗುಂಗುರು ಕೂದಲು ಇದ್ದವನೆ. ಕೆಲದಿನ ಪೂಜ್ಯ ಸತ್ಯಸಾಯಿ ರೀತಿ ಕೂದಲು ಬೆಳಸಿದವನೆ. ಅಚಾನಕ್ಕಾಗಿ ಅವನ ಕೂದಲು ಉದುರುತ್ತ ಹೋಯಿತು. ಮಲ್ಲುಗಳ ಕೈಗೆ ಸಿಕ್ಕ ಮಲೆನಾಡ ಕಾಡಿನಂತೆ ಬರಡಾಗುತ್ತ ಸಾಗಿತು. ಚಿಂತಿತನಾದ ಮಿತ್ರ ಎಲ್ಲ ರೀತಿಯ ಸ್ನೇಹಿತರ ಸಲಹೆಗಳನ್ನು ಸ್ವೀಕರಿಸಿದ. ಮೆಂತ್ಯ, ಜೀರಿಗೆ ಅರೆದು ಹಾಲಿನಲ್ಲಿ ಸೇರಿಸಿ ತಲೆಗೆ ಹಚ್ಚಿಕೊಂಡು ಅರ್ಧಗಂಟೆ ಬಿಟ್ಟು ತಲೆತೊಳೆದು ನೋಡಿದರೆ ಇನ್ನಷ್ಟು ಕೂದಲು ಉದುರಿತ್ತು. ಎಲ್ಲ ರೀತಿಯ ಬ್ರಾಮ್ಹೀ ತೈಲಗಳ ಪ್ರಯೋಗವೂ ಆಯಿತು. ಏನೂ ಪ್ರಯೋಜನ ಆಗಲಿಲ್ಲ. ಸಮಸ್ಯೆ ಉಲ್ಬಣಿಸುತ್ತ ಹೋಯಿತು. ಈ ಪ್ರಯೋಗಗಳಲ್ಲಿ ಇದ್ದ ನಾಲ್ಕಾರು ಕೇಶಗಳೂ ಹರಿಪಾದ ಸೇರಿದವು. ಬಕ್ಕ ಮಂಡೆಯ ಸಂಘದ

ಅಧ್ಯಕ್ಷನ ಮಾಡಿದವು. ಒಮ್ಮೆ ಸಿಕ್ಕ ಪೂರಾ ಬಕ್ಕತಲೆಯ ಮಿತ್ರ. ತೂರಾಡುತ್ತಿದ್ದ. ಏಕೋ ಎಂದು ಕೇಳಿದೆ. ಜೀವನ ಬೇಸರ ಅನಿಸಿದೆ. ಯಾವ ಹೆಣ್ಣೂ ಒಪ್ಪುತ್ತಿಲ್ಲ ಅಂದ. ಅದಕ್ಕೆ ಸ್ವಲ್ಪ ಕೋಪ ಮಿಶ್ರಿತ ಧ್ವನಿಯಲ್ಲಿ ಅವನಿಗೆ ಗದರಿದೆ. ಕುಡಿದು ತೂರಾಡಿದರೆ ಸಮಸ್ಯೆಗೆ ಪರಿಹಾರ ಸಿಗುತ್ತದೆಯೇ ಅಂದೆ. ಅಂಜಲೀಬದ್ಧನಾಗಿ ಹೇಳಿದ ನೀನೂ ನನ್ನ ಅನುಮಾನಿಸುತ್ತಿ ಮತ್ತು ಅವಮಾನಿಸುತ್ತಿದ್ದೀಯಾ? ನೀನು ನನ್ನ ಹಿತೈಷಿ ಎಂದು ಎಣಿಸಿದ್ದೆ. ನನ್ನ ನಿರೀಕ್ಷೆ ತಪ್ಪಾಯಿತು. ನಾನೇಕೆ ಕುಡಿಯುತ್ತೇನೆ ಎಂದು ಕೇಳು ಹೇಳುತ್ತೇನೆ ಅಂದ. ನಾನು ಕೇಳದಿದ್ದರೂ ಅವನೇ ಮಾತನ್ನು ಮುಂದುವರೆಸಿದ. ತಲೆಗೆ ಎಣ್ಣೆ ಹಚ್ಚಿದರೆ ಕೂದಲು ಸೊಂಪಾಗಿ ಬೆಳೆಯುತ್ತದೆ ಎಂದು ಬಾಲ್ಯದಲ್ಲಿ ಅವರಮ್ಮ ಹೇಳಿದ ಮಾತು ಜ್ಞಾಪಿಸಿಕೊಂಡು ಹೇಳಿದ್ದನ್ನು ಮುಂದೆ ಮಹಾಭಾರತದ ಸಂಜಯನಂತೆ ನಿಮಗೆ ಹೇಳುತ್ತಿದ್ದೇನೆ. ಅದು ಫಲ ನೀಡದಿದ್ದಾಗ ಇನ್ನೊಂದು ಆಲೋಚನೆ ಮಿಂಚುಳ್ಳಿಯಂತೆ ಮನದಲ್ಲಿ ಮೂಡಿತಂತೆ. ಸ್ವಲ್ಪ ತೀರ್ಥ ಸೇವನೆ ಪಚನಕ್ರಿಯೆಗೆ ಆರೋಗ್ಯಕರ ಎಂದು ಅವನ ವೈದ್ಯಮಿತ್ರ ಹೇಳಿ, ಬಾರಿನಲ್ಲಿ ಎರಡು ಸಾವಿರ ಪೀಕಿಸಿ, ವಿಲಾಯಿತಿ ಮಾಲು ಸೇವಿಸಿ, ಪಾರ್ಥನಿಗೆ ಸಾರಥಿ ಉಪದೇಶ ಮಾಡಿದಂತೆ, ಬಿಟ್ಟಿ ಅಲ್ಲ ಕಾಣಿಕೆ ರೂಪದಲ್ಲಿ ತೀರ್ಥಸೇವಿಸಿಯೆ ಹೇಳಿದ್ದನಂತೆ. ಹೊರಗಿನಿಂದ ಎಣ್ಣೆ ಹಾಕಿದರೆ ಉಪಯೋಗ ಆಗಲಿಲ್ಲ, ಎಣ್ಣೆಯನ್ನು ಹೊಟ್ಟೆಗೆ ಹಾಕಿಕೊಂಡು ಅದು ರಕ್ತದ ಮೂಲಕ ದೇಹದ ಎಲ್ಲ ಭಾಗಗಳಿಗೂ ಹೋಗುವಂತೆ, ತಲೆಗೂ ಪೋಷಕಾಂಶಗಳಿಂದ ಹೋಗಿ ಸೇರಿ ಕೂದಲು ಬೆಳೆಯಬಹುದು ಎಂದು ಅವನೇ ತರ್ಕಿಸಿದ್ದ. ಸುಳ್ಳಿಗೆ ನೆಂಟರ ಕೊರತೆಯಿಲ್ಲ ಸತ್ಯ ಮಾತ್ರ ಒಂಟಿ ಅನ್ನುವ ಮಾತಿದೆ. ಕುಡಿಯುವವನ ಕುಡಿತಕ್ಕೆ ಕಾರಣ ಕೇಳಿದರೆ ಸುಳ್ಳಿನ ಅಲ್ಲಲ್ಲ ಸುಳ್ಳನ ಅಪ್ಪಿಕೊಂಡಂತೆಯೆ ಸರಿ. ಅವನಿಗೆ ಅದು ಹಾಗಲ್ಲ ಎಂದು ತಿಳಿಹೇಳಲು ಹೋಗಿ ನಾನು ಸುಸ್ತಾಗಿ ಅವನಿಂದ ಕಳಚಿಕೊಂಡು ಪಾರಾದೆ. ಈಗ ಹೇಳಿ ಎಣ್ಣೆ ತಲೆಗೊ ಅಥವಾ ಹೊಟ್ಟೆಗೊ, ಆಯ್ಕೆ ನಿಮಗೆ ಬಿಡುತ್ತೇನೆ!.

ನಮ್ಮ ಸೋದರತ್ತೆ ಹೇಳುತ್ತಿದ್ದರು ಹಣೆ ದೊಡ್ಡದಿದ್ದಷ್ಟು ಮಕ್ಕಳು ಬುದ್ಧಿವಂತರಾಗಿರುತ್ತಾರೆ ಎಂದು. ಆದ್ದರಿಂದ ಚಿಕ್ಕ ಮಕ್ಕಳಿಗೆ ತಲೆಗೆ ನೀರು ಹಾಕುವಾಗ ಬೆಚ್ಚಗೆ ಕಾಯಿಸಿದ ಕೊಬ್ಬರಿ ಎಣ್ಣೆ ಮುಖ ಮೈಕೈ ಜೊತೆಗೆ ತಲೆಗೆ ಹಚ್ಚಿ ಹಣೆಯಿಂದ ಹಿಮ್ಮುಖವಾಗಿ ತೀಡುತ್ತಿದ್ದರಂತೆ. ಹಾಗಾದರೆ ಬೊಕ್ಕತಲೆಯವರು ಅತಿ ಬುದ್ಧಿವಂತರು ಅನ್ನುವುದನ್ನು ಒಪ್ಪಿಕೊಳ್ಳಲೇಬೇಕು! ಒಮ್ಮೆ ವಿಲಿಯಂ ಶೇಕ್ಸ್ ಪಿಯರ್, ಜವಾಹರ್ ಲಾಲ್ ನೆಹರು, ಶ್ಯಾಮಪ್ರಸಾದ್ ಮುಖರ್ಜಿ, ಮಧುದಂಡವತೆ, ನಿಜಲಿಂಗಪ್ಪ, ಅಮಿತಾಬ್, ರಾಕೇಶ್ ರೋಷನ್, ದೇವೇಗೌಡರನ್ನು ಮತ್ತು ನಿಮಗೆ ಗೊತ್ತಿರುವವರ ನೆನೆಸಿಕೊಳ್ಳಿ, ಸತ್ಯದರ್ಶನ ಆದೀತು!

ನಾವು ಶಿವಮೊಗ್ಗದ ಆಚಾರ್ಯ ತುಳಸಿ ರಾಷ್ಟ್ರೀಯ ವಾಣಿಜ್ಯ ವಿದ್ಯಾಲಯದಲ್ಲಿ ಅಂದರೆ ಕಾಲೇಜಿನಲ್ಲಿ ಓದುವಾಗ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಆರಿಸಿಕೊಂಡು ವ್ಯಾಸಂಗ ಮಾಡಿದವನು. ನಮಗೆ ಕನ್ನಡ ಪಾಠ ಮಾಡುತ್ತಿದ್ದವರು ಉಪನ್ಯಾಸಕರಾದ ಪೂಜನೀಯ ಶ್ರೀ ಎಂ.ಬಿ.ನಟರಾಜ್ ಗುರುಗಳು. ಅವರಿಗೆ ಹಳೆಗನ್ನಡ, ಹೊಸಗನ್ನಡ ಎರಡರ ಮೇಲೂ ಪೂರ್ಣ ಹಿಡಿತವಿತ್ತು. ಪಾಂಡಿತ್ಯಪೂರ್ಣ ವಿವರಣೆಯೊಂದಿಗೆ ಪಾಠ ಮಾಡುತ್ತಿದ್ದರು. ಅವರು ಪಾಠ ಮಾಡುವಾಗ ಅವರ ವಿವರಣೆ ಕೇಳಲು, ನಮ್ಮ ಸಹಪಾಠಿಗಳಾಗಿ ಸಂಸ್ಕೃತ, ಹಿಂದಿ ಮತ್ತು ಉರ್ದು ಕಲಿಯುವವರು ಸಹ

ಕೊಠಡಿಯ ಹೊರನಿಂತು ಆಲಿಸುತ್ತಿದ್ದುದು, ಅವರ ಬಗ್ಗೆ ಗೌರವ ಇಮ್ಮಡಿಯಾಗುವಂತೆ ಮಾಡಿದ್ದು ಸುಳ್ಳಲ್ಲ. ಈಗ ಪ್ರೊಫೆಸರ್ ಆಗಿ ನಿವೃತ್ತಿ ಹೊಂದಿ ಕನ್ನಡದ ಸಾಹಿತ್ಯ ಕೃಷಿ ಜೊತೆಗೆ ನಿಜ ಕೃಷಿಕರಾಗಿಯೂ ಹುರುಪಿನಿಂದ ಜೀವನ ನಡೆಸುತ್ತಿದ್ದಾರೆ. ಅವರು ಪಾಠ ಮಾಡುವಾಗ ಬೋಳುತಲೆ ಬಗ್ಗೆ ಹೇಳಿದ ಪ್ರಸಂಗವನ್ನು ಯಥಾವತ್ತಾಗಿ ನಿಮ್ಮ ಮುಂದೆ ಇಡುತ್ತೇನೆ.

ಒಮ್ಮೆ ಮನೆಗೆ ಯಾರೋ ಅತಿಥಿಗಳು ಬಂದರಂತೆ. ಮನೆ ಯಾಜಮಾರು ಸ್ವಾಗತಿಸಿ ಕುಳ್ಳಿರಿಸಿದರು. ಉಭಯ ಕುಶಲೋಪರಿಯಾಯಿತು. ಮಡದಿ ಮತ್ತು ಮಗಳನ್ನು ಪರಿಚಯ ಮಾಡಿಸಿದರು . ಮೂರು ವಯಸ್ಸಿನ ಮಗಳು ಬಲು ಚೂಟಿ ಮತ್ತು ವಾಚಾಳಿ. ಮನೆ ಯಜಮಾನರಿಗೆ ಒಳ್ಳೆಯ ಕಪ್ಪಗಿನ ಗುಂಗುರು ಕೂದಲಿತ್ತು. ಈಗ ಬೋಳು ಮಂಡೆ ಮಹಾದೇವ ಆಗಿದ್ದರು. ಮಹಾದೇವ ಇಲ್ಲೇಕೆ ಬಂದ ಅನ್ನುತ್ತೀರಾ? ಉತ್ತರ ಭಾರತದಲ್ಲಿ ಅವನಿಗೆ ಭೋಲಾನಾಥ ಅನ್ನುತ್ತಾರೆ. ಅದನ್ನು ಕನ್ನಡೀಕರಿಸಿದರೆ ಬೋಳನಾಥ ಅನ್ನಬಹುದು. ಬೋಳು ತಲೆ ಲಿಂಗದಂತೆಯೆ ಉರುಟಾಗಿದ್ದು ಹೊಳೆಯುತ್ತಿರುತ್ತದೆ. ಅದಕ್ಕೆ ಮಂಡೆ ಮಹಾದೇವ ಅನ್ನಬಹುದು ಎನ್ನುವುದು ನನ್ನ ಅಭಿಮತ!, ಇರಲಿ. ಬಂದ ಸ್ನೇಹಿತ ಮನೆ ಯಜಮಾನನನ್ನು ಕೇಳಿದ ತಲೆ ಏಕೆ ಬೋಳಾಯಿತೆಂದು? ತಕ್ಷಣ ಅಲ್ಲೇ ನಿಂತಿದ್ದ ಪೋರಿ ನಾನು ಹೇಳುತ್ತೇನೆ ಅಂದಳು. ಇಬ್ಬರೂ ಆ ಮಗುವಿನ ಮುಖ ನೋಡಿದರು. ವಿಶಾಲಾಕ್ಷಿ ಕಣ್ಣು ಮಿಟುಕಿಸದೆ ನೋಡುತ್ತಿದ್ದಳು. ಇಬ್ಬರೂ ಹೇಳು ಎಂದು ಮಗುವನ್ನು ಪುಸಲಾಯಿಸಿದರು. ಮಗು ಮುದ್ದಾಗಿ ಹೇಳಲಾರಂಬಿಸಿತು. ಅದಕ್ಕೆಲ್ಲ ಅಮ್ಮನೇ ಕಾರಣ. ಅಪ್ಪ ಬೇಡ ಅಂದರೂ ಬಿಡದೆ ವಾರಕ್ಕೆರಡು ಬಾರಿ ಅಮ್ಮ ಅಪ್ಪನ ತಲೆಗೆ ಎಣ್ಣೆ ಹಚ್ಚಿ ಕೈಯಿಂದ ತಲೆಮೇಲೆ ಪಟಪಟನೆ ಚಚ್ಚುತ್ತಾಳೆ. ಹಾಗೆ ಚಚ್ಚಿದ್ದರಿಂದ ಕೂದಲೆಲ್ಲ ಉದುರಿಹೋಗಿ ಬೋಳುತಲೆಯಾಗಿದೆ ಎಂದು ಎಣ್ಣೆ ಹಚ್ಚುವಾಗ ಅಮ್ಮನ ಕೈಗೆ ಅಂಟಿರುತ್ತಿದ್ದ ಕೂದಲನ್ನು ನೋಡಿದ್ದ ಮಗು ಒಂದೇ ಉಸುರಿಗೆ ಹೇಳಿ ನಿಲ್ಲಿಸಿತು. ಆಗ ನಗುವ ಸರದಿ ಎಲ್ಲರದ್ದಾಗಿತ್ತು!

ಪ್ರಸ್ತಾವನೆಯೆ ಇಷ್ಟಾದರೂ ಇನ್ನೂ ಬೋಳು ಮಂಡೆ ಕಸಿ ವಿಷಯಕ್ಕೆ ಬರಲಿಲ್ಲವಲ್ಲ ಅಂದುಕೊಳ್ಳುತ್ತಿದ್ದೀರಾ? ಇಗೋ ಬಂದೆ.

ನಮ್ಮ ಬೊಕ್ಕತಲೆ ವೀರ ಹುಬ್ಬಳ್ಳಿಯವ. ವಿದ್ಯಾವಂತ ಹೆಚ್ಚಾಗಿ ಬುದ್ಧಿವಂತ. ಮೊದಲು ಅಂತರರಾಷ್ಟ್ರೀಯ ಖಾಸಗಿ ವಲಯದ ಹಣಕಾಸು ಸಂಸ್ಥೆಯಲ್ಲಿದ್ದು ನಂತರ ಐ ಎ ಎಸ್ ತೇರ್ಗಡೆಯಾಗಿ ಕೇಂದ್ರಸರ್ಕಾರದ ಸೇವೆಯಲ್ಲಿ ಇರುವುದಾಗಿ ಅವನು ಹೇಳಿದ್ದಾಗಿ ನಮಗೆ ಪರಿಚಯವಿದ್ದ ಚಾರ್ಟರ್ಡ್ ಅಕೌಂಟೆಂಟ್ ಅವನನ್ನು ನಮ್ಮ ಕಂಪೆನಿಗೆ ಪರಿಚಯಿಸಿದ್ದರು. ನಾನು ಬೆಂಗಳೂರಿನಲ್ಲಿರುವ ಒಂದು ಪ್ರಸಿದ್ಧ ಕಟ್ಟಡ ನಿರ್ಮಾಣ ಸಂಸ್ಥೆಯಲ್ಲಿ ಹಣಕಾಸು ಮತ್ತು ಲೆಕ್ಕಪತ್ರ ನಿಯಂತ್ರಕನಾಗಿ ಕೆಲಸ ಮಾಡುತ್ತಿದ್ದ ದಿನಗಳವು. ಅವರ ಪರಿಚಯ ವ್ಯವಹಾರಕ್ಕೆ ತಿರುಗಿತು. ಐ ಎ ಎಸ್ ಮಾಡಿದ್ದ ವ್ಯಕ್ತಿ ಕೇಂದ್ರ ಸರ್ಕಾರದ ಆಶಯದಂತೆ ಒಂದು ಸಂಸ್ಥೆಯನ್ನು ಹುಟ್ಟು ಹಾಕಿ ಕರ್ನಾಟಕದಲ್ಲಿ ಅದರ ಮುಖ್ಯಸ್ಥನಾಗಿ ಇರುವುದಾಗಿಯೂ, ಅನೇಕ ಯೋಜನೆಗಳನ್ನು (ಪ್ರಾಜೆಕ್ಟ್) ಕೈಗೆತ್ತಿಕೊಂಡಿರುವುದಾಗಿಯೂ, ಕೆಲವು ನಿರ್ಮಾಣ ಕಾಮಗಾರಿ ಕೆಲಸಗಳನ್ನು ನಮಗೆ ಕೊಡಲು ಉತ್ಸುಕರಾಗಿರುವುದಾಗಿ ನಮ್ಮ ಸಂಸ್ಥೆಯ ಮುಖ್ಯಸ್ಥರಿಗೆ (ಮಾಲೀಕರು) ತಿಳಿಸಿದರು. ಹೆಚ್ಚಿನ ಲಾಭಾಂಶದ ಅಭಯ ದೊರೆತ

ನಂತರ ವ್ಯವಹಾರ ಕುದುರಿತು. ಮೇಲಾಗಿ ನಮ್ಮ ಸಂಸ್ಥೆ ಮುಖ್ಯಸ್ಥರು ಮತ್ತು ಐಎಎಸ್ ವ್ಯಕ್ತಿ ಕುಲಬಾಂಧವರು. ಅರ್ಥವಾಯಿತಲ್ಲ! ಹೆಚ್ಚಿಗೆ ಹೇಳಲಾರೆ. ಕೆಲಸಕ್ಕಾಗಿ ಟೆಂಡರ್ ಇಲ್ಲದೆ ನೇರವಾಗಿ ನಮಗೆ ಕೊಡುವುದಾಗಿ ಹೇಳಿ ಅದಕ್ಕಾಗಿ ಮೂಲ ಠೇವಣಿ ಹಣ ಪಾವತಿಸಬೇಕು ಎಂದು ಹೇಳಿ ಹಲವು ಲಕ್ಷಗಳನ್ನು ಪೀಕಿಸಿಕೊಂಡಿದ್ದ, ಅದೂ ಹಲವಾರು ಕಾಮಗಾರಿಗಳ ಬಾಬ್ತು. ಎಲ್ಲ ಸೇರಿ ಕೋಟಿಗಳನ್ನು ದಾಟಿತ್ತು. ಆಗಾಗ ಮೀಟಿಂಗ್ ಕರೆಯುತ್ತಿದ್ದ . ಅಶೋಕ ಹೋಟೆಲ್ನಲ್ಲಿ ಕರ್ನಾಟಕ ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳನ್ನು ಕರೆಸಿ ಅನೇಕ ಸೆಮಿನಾರ್ ನಡೆಸುತ್ತಿದ್ದ. ವಿದೇಶಿ ತಜ್ಞರು, ಗಣ್ಯರೂ ಭಾಗವಹಿಸುತ್ತಿದ್ದರು. ನಾನೂ ಸಹ ಅಂತಹ ಎರಡು ಮೂರು ಸಭೆಯಲ್ಲಿ ನಮ್ಮ ಕೆಲ ಅಧಿಕಾರಿಗಳ ಜೊತೆ ಭಾಗವಹಿಸಿದ್ದೆ. ಎಲ್ಲವೂ ಆತನೊಬ್ಬ ಬಹಳ ಪ್ರಭಾವಿ ಮನುಷ್ಯ ಎಂಬುದನ್ನು ಸಾರಿಸಾರಿ ಹೇಳುತ್ತಿತ್ತು. ಸಭೆಗಳಲ್ಲಿ ವಿಷಯ ಮಂಡನೆ ಚೆನ್ನಾಗಿ ಮಾಡುತ್ತಿದ್ದ. ಅಂತರ್ ರಾಷ್ಟ್ರೀಯ ಇಂಟಲೆಕ್ಚುಯಲ್ ಪ್ರಾಪರ್ಟಿ ಕಾಯ್ದೆಯ ರೂಪುರೇಷೆಗಳು ಭಾರತದಲ್ಲಿಯೂ ಜೀವ ಪಡೆಯಬೇಕು ಅಂತಾ ಹೇಳುತ್ತಿದ್ದ. ಅದಕ್ಕಾಗಿ ದೊಡ್ಡಬಳ್ಳಾಪುರದ ಹತ್ತಿರ ಜಮೀನು ಖರೀದಿ ಮಾಡಿರುವುದಾಗಿಯೂ ಅಲ್ಲಿ ಕೈಗಾರಿಕಾ ಸಮೂಹಗಳನ್ನು (Industrial Cluster) ಒಂದೇ ಚಾವಡಿ ಅಡಿ ತರುವ ಉದ್ದೇಶ ಇದೆ ಅನ್ನುತ್ತಿದ್ದ. ಸಿನಿಮಾ ಯುವಪ್ರತಿಭೆ ಒಬ್ಬಳನ್ನು ಕರೆದೊಯ್ದು ಇಲ್ಲಿ ಫಿಲ್ಮ್ ಸಿಟಿ ಸಹ ಮಾಡುತ್ತೇನೆ ಎಂದು ಹೇಳಿ ಸುತ್ತಿಸಿಕೊಂಡು ಬಂದಿದ್ದ. ಅವನ ನಡವಳಿಕೆ ಎಲ್ಲರನ್ನೂ ಆಕರ್ಷಿಸಿತ್ತು. ಈ ದೊಡ್ಡಬಳ್ಳಾಪುರದ ಜಮೀನನ್ನು ಅಭಿವೃದ್ಧಿ ಪಡಿಸುವ ಕೆಲಸವನ್ನು ನಮಗೆ ಕೊಟ್ಟಿದ್ದ. ಇನ್ನೊಂದೆಡೆ ಶೀಟ್ ಮೆಟಲ್ ಕ್ಲಸ್ಟರ್ ಎಂದು ನಾಮಾಂಕಿತ ಹೊಂದಿದ್ದ ವಾಹನದ ರಕ್ಷಾ ಕವಚ, ವಿದ್ಯುತ್ ಯಂತ್ರಗಳ ರಕ್ಷಾ ಕವಚ, ತಾಂತ್ರಿಕ ಯಂತ್ರಗಳ ರಕ್ಷಾ ಕವಚ ಮತ್ತು ಇನ್ನೂ ಅನೇಕ ರಕ್ಷಾಕವಚಗಳ ತಯಾರಿಕೆಗಾಗಿ ಬೇಕಾದ ಮೂಲ ಕಟ್ಟಡದ ಕಾಮಗಾರಿ ಕೆಲಸವನ್ನು ನಮ್ಮ ಕಂಪೆನಿಗೆ ಕೊಟ್ಟಿದ್ದ. ಎಲ್ಲವೂ ಕಾನೂನುಬದ್ಧ ಕಾಗದ ಪತ್ರದ ಮೂಲಕ.

ಆ ಜಾಗದ ಮಾಲೀಕ ಕೇರಳದವ. ಅವನು ಮೇಲೆ ಹೇಳಿದ ಶೀಟ್ ಮೆಟಲ್ ಕಾರ್ಯಾಗಾರ ಹೊಂದಿದ್ದವ. ನಾವೆಲ್ಲ ಭೇಟಿ ನೀಡಿ ಮಾತುಕತೆ ಆಡಿ ವಿಚಾರ ವಿನಿಮಯ ಮಾಡಿಕೊಂಡಿದ್ದೆವು. ಎಲ್ಲಿಯೂ ಅವರಿಗೆ ಮತ್ತು ನಮಗೆ ನೇರವಾಗಿ ವ್ಯವಹಾರದ ನಂಟಿರಲಿಲ್ಲ. ನಮ್ಮದೇನಿದ್ದರು ಇವನು ಹುಟ್ಟು ಹಾಕಿದ್ದ ಸಂಸ್ಥೆಯೊಂದಿಗೆ ವ್ಯವಹಾರ. ಕಾಮಗಾರಿ ಬಿಲ್ಲನ್ನು ಅವನ ಸಂಸ್ಥೆಗೆ ಸಲ್ಲಿಸಿ ಹಣ ಪಡೆಯ ಬೇಕಿತ್ತು. ಅದರಂತೆ ಕೆಲಸ ಶುರುಮಾಡಿ ಮೊದಲ ಬಿಲ್ಲನ್ನು ಒಂದು ಕೋಟಿಗಿಂತ ಅಧಿಕ ಮೊತ್ತಕ್ಕೆ ಸಲ್ಲಿಸಲಾಯಿತು. ಹಣ ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಮಂತ್ರಾಲಯ ಬಿಡುಗಡೆ ಮಾಡುತ್ತದೆ. ಸ್ವಲ್ಪ ತಡ ಆಗಬಹುದು ಎಂದು ಸಬೂಬು ಹೇಳಿ ಹಣ ಕೊಡುವುದನ್ನು ಮುಂದಕ್ಕೆ ಹಾಕುತ್ತಿದ್ದ. ಎರಡನೇ ಬಿಲ್ಲಿನ ಕಥೆ ಏನು ಬದಲಾಗಲಿಲ್ಲ. ಬದಲಿಗೆ ನಮ್ಮಲ್ಲಿ ಅನುಮಾನ ಮೂಡಿಸಲು ನಾಂದಿ ಹಾಡಿತು. ಕಾಮಗಾರಿ ನಿಲ್ಲಿಸಿ ಮೂರನೇ ಬಿಲ್ಲನ್ನು ಸಹ ಕೊಟ್ಟಾಯಿತು. ಕೈಯಿಂದ ಸುಮಾರು ಕೋಟಿ ಹಣ ಹಾಕಿ ಅದು ವಾಪಸ್ಸು ಬಾರದಿದ್ದಾಗ ಅದರ ಬಿಸಿ ನಮಗೆ ತಟ್ಟಲು ಶುರುವಾಯಿತು. ಅನೇಕ ಬಾರಿ ಆತನ ಕಛೇರಿಗೆ ಅಲೆದರೂ ಬರೀ ಆಶ್ವಾಸನೆ ಕೊಡುತ್ತಿದ್ದ. ಅವನ ಸರ್ಕಾರದೊಂದಿಗಿನ ಪತ್ರ ವ್ಯವಹಾರ ತೋರಿಸಿ ನಂಬಿಸುತ್ತಿದ್ದ.

ಅನುಮಾನ ಬಂದು ಅವನ ಬಗ್ಗೆ ವಿಷಯ ಸಂಗ್ರಹಣೆಗೆ ಮುಂದಾದೆವು. ನಮ್ಮ ಊಹೆ ಸರಿಯಾಗಿತ್ತು. ಅವನೊಬ್ಬ ವಂಚಕನೆಂಬ ಪ್ರಾಥಮಿಕ ಮಾಹಿತಿ ದೊರೆಯಿತು. ಅವನು ಐ ಎ ಎಸ್ ಅಧಿಕಾರಿ ಅಲ್ಲವೆಂದು ಗೊತ್ತಾಯಿತು. ಇದೇ ರೀತಿ ಅನೇಕರಿಗೆ ಮೋಸ ಮಾಡಿರುವ ವಿಷಯ ಗೊತ್ತಾಯಿತು. ಎಲ್ಲರಿಂದ ಕೋಟಿಗಟ್ಟಲೆ ಹಣ ಪಡೆದು ಗುಳುಂ ಮಾಡಿದ್ದ. ಇವನು ಮೋಸಗಾರನೆಂಬುದು ಅವನ ಬಳಿ ಕೆಲಸ ಮಾಡುತ್ತಿದ್ದ ನೌಕರರಿಗೂ ಗೊತ್ತಿರಲಿಲ್ಲ. ಅವರಿಗೆಲ್ಲ ಸಮಯಕ್ಕೆ ಸರಿಯಾಗಿ ಸಂಬಳ ಸಾರಿಗೆ ಕೊಟ್ಟು ಚೆನ್ನಾಗಿ ನೋಡಿಕೊಂಡಿದ್ದ. ಎಲ್ಲರೂ ಅವನಿಗೆ ಹೆದರುತ್ತಿದ್ದರು. ಎಲ್ಲರೂ ಪೊಲೀಸ್ ಸ್ಟೇಷನ್ ಗಳಲ್ಲಿ ಇದ್ದ ದಾಖಲೆಗಳ ಸಮೇತ ದೂರು ದಾಖಲಿಸಿದರು. ನಾವೂ ಅದನ್ನೇ ಮಾಡಿದೆವು. ಎಲ್ಲ ನೌಕರರೂ ಕೆಲಸ ಕಳೆದುಕೊಂಡು ಆದಾಯವಿಲ್ಲದೆ ಒದ್ದಾಡ ತೊಡಗಿದರು. ಕಛೇರಿಗೆ ಬೀಗ ಬಿತ್ತು. ಅವನು ತಲೆ ಮರೆಸಿಕೊಂಡು ಓಡಿಹೋದ.

ಹೀಗೆ ಅನೇಕ ಕಾಮಗಾರಿಗಳನ್ನು ಅವನಿಂದ ಪಡೆದು ಮೋಸ ಹೋಗಿದ್ದ ಏಳೆಂಟು ಆಸಾಮಿಗಳಿದ್ದರು. ಏಳರ ಜೊತೆ ಎಂಟು ಅನ್ನುವ ಪರಿಸ್ಥಿತಿ ನಮ್ಮದು. ವಿಧಾನಸೌಧ ಕಾರ್ಯಾಲಯದಲ್ಲಿದ್ದವರು, ಮುಖ್ಯಮಂತ್ರಿಗಳ ಆಪ್ತರು ಈ ಗುಂಪಿನಲ್ಲಿ ಇದ್ದರು. ಸಹಜವಾಗಿ ಪೊಲೀಸ್ ಇಲಾಖೆ ಮೇಲೆ ಅಸಾಮಿಯನ್ನು ಬಂಧಿಸಲು ಒತ್ತಡ ಹೆಚ್ಚಾಯಿತು. ಪೊಲೀಸ್ ಕಾರ್ಯಾಚರಣೆ ಚುರುಕಾಯಿತು. ಪತ್ರಿಕೆಗಳಲ್ಲಿ ಅವನ ಫೋಟೋ ಸಮೇತ ಮೋಸದ ವಿವರಗಳು ಪ್ರಕಟವಾದವು.

ಎಲ್ಲ ಕೆದಕಿದಾಗ ಪೊಲೀಸರಿಗೆ ಹೊಸ ವಿಷಯಗಳು ದೊರಕಲಾರಂಬಿಸಿದವು. ಆತನ ಹೆಂಡತಿ ಹುಬ್ಬಳ್ಳಿ ಮಹಾನಗರ ಪಾಲಿಕೆ ಸದಸ್ಯಳಾಗಿದ್ದವಳು, ರಾಷ್ಟ್ರೀಯ ಪಕ್ಷದ ಕಾರ್ಯಕರ್ತೆ ಮತ್ತು ಹುಬ್ಬಳ್ಳಿಯ ಮಾಜಿ ಮಂತ್ರಿಯ ಅನುಯಾಯಿ ಎಂದು ತಿಳಿಯಿತು. ಹೇಗೋ ಕಷ್ಟಪಟ್ಟು ಆಕೆಯ ಮೊಬೈಲ್ ನಂಬರ್ ಪಡೆದು ಕರೆ ಮಾಡಿ ವಿಷಯ ತಿಳಿಸಿದೆವು. ಅಳಲಾರಂಭಿಸಿದಳು. ತನ್ನ ಮರ್ಯಾದೆ ಮೂರಾಬಟ್ಟೆ ಆಯಿತೆಂದು ತನ್ನ ದುಃಖ ತೋಡಿಕೊಂಡಳು. ತಾನೂ ಸಹ ಮೋಸ ಹೋಗಿರುವುದಾಗಿಯೂ, ಇನ್ನು ತನಗೆ ಸಾವೇ ಗತಿಯೆಂದು ಚಡಪಡಿಸಿದಳು. ಮನೆಗೆ ಬಂದರೆ ನಮಗೆ ತಿಳಿಸಲು ಹೇಳಿ ಫೋನ್ ಸಂಪರ್ಕ ಕಡಿದೆವು. ಕೊನೆಗೂ ಪೊಲೀಸರು ಆರೋಪಿಯನ್ನು ಬಂಧಿಸಿದರು. ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ಗೆ ಕರೆತಂದು ಎಲ್ಲಾ ದೂರುದಾರರನ್ನು ಅಲ್ಲಿಗೆ ಬರಲು ಹೇಳಿದರು. ನಾನು ನಮ್ಮ ಕಂಪೆನಿಯ ಲಾಯರ್ ಮತ್ತು ಕಂಪೆನಿಯ ಮುಖ್ಯಸ್ಥರೊಂದಿಗೆ

ಶೇಷಾದ್ರಿಪರಂ ಪೊಲೀಸ್ ಸ್ಟೇಷನ್ ಗೆ ಹೋದೆ. ಅವನನ್ನು ತೋರಿಸಿ ಇವನೇ ಮೋಸಮಾಡಿದ ವ್ಯಕ್ತಿಯೇ ಎಂದು ಕೇಳಿದರು. ಹೌದೆಂದು ಹೇಳಿ ಎಲ್ಲ ವಿಷಯ ವಿವರವಾಗಿ ಹೇಳಿ ದೂರಿನ ಪ್ರತಿ ಕೊಟ್ಟು ಬಂದೆವು. ಆಮೇಲೆ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ ಎಂದು ತಿಳಿದುಬಂತು.

ಇಷ್ಟರ ಮಧ್ಯೆ ತಿರುಳಿನ ವಿಷಯಕ್ಕೆ ತಿರುಗಲೆ ಬೇಕು. ಏನಪ್ಪಾ ಅಂದರೆ ಕೂದಲು ಕಸಿ ವಿಷಯ. ಈ ಡುಪ್ಲಿಕೇಟ್ ಐಎಎಸ್ ಸರಿ ಸುಮಾರು ಎರಡು ವರ್ಷ ನಮ್ಮ ಸಂಪರ್ಕದಲ್ಲಿದ್ದ. ಸ್ಫುರದ್ರೂಪಿ ಮೈಕಟ್ಟಿನ ಸುಮಾರು ಮೂವತ್ತೈದರ ಆಸುಪಾಸಿನ ವಯಸ್ಸಿನ ಯುವಕ. ಸಾಧಾರಣ ಮೈಕಟ್ಟಿನವ, ಗೌರವವರ್ಣ ಹೊಂದಿದ್ದ ಚೆಲುವ.

ಮುಂದಲೆ ಕುದುರೆ ಲಾಳದಂತೆ ಬೋಳಾಗಿತ್ತು . ಯಾವಾಗಲೂ ಮಿರಮಿರ ಮಿಂಚುತ್ತಿತ್ತು. ಬಹುಶಃ ಯಾರನ್ನು ಯಾವ ರೀತಿ ಏಮಾರಿಸಬೇಕೆಂದು ಯೋಚಿಸಿ ಕೂದಲು ಉದುರಿ ಹೋಗಿರಬಹುದು. ಏಕೆಂದರೆ ಬಹಳ ಚಿಂತೆ ಮಾಡುವವರಿಗೆ ಕೂದಲು ಉದುರುತ್ತದೆ ಅಂತಾ ಹಿರಿಯರು ಹೇಳುತ್ತಿದ್ದ ಮಾತು ಕೇಳಿದ್ದೇನೆ.

ಆಗ ತಾನೇ ತಲೆ ಕೂದಲು ಕಸಿ ತಂತ್ರಜ್ಞಾನ ಭಾರತಕ್ಕೆ ಬಂದಿತ್ತು. ಸುಮಾರು ಒಂದೂವರೆ ಲಕ್ಷ ರೂಪಾಯಿಗೆ ಕೂದಲು ಕಸಿ ನಡೆಯುತ್ತಿತ್ತು. ಅವನು ಸಿಕ್ಕಿಹಾಕಿಕೊಳ್ಳುವ ವರ್ಷದ ಮೊದಲು ಈ ಹಣ ಪೀಕಿ ತಲೆಯ ಕೂದಲು ಕಸಿ ಮಾಡಿಸಿಕೊಂಡಿದ್ದ. ಎರಡು ತಿಂಗಳಿಗೆ ತಲೆಯಲ್ಲಿ ಕೂದಲು ಚೆನ್ನಾಗಿ ಬೆಳೆದಿತ್ತು. ಅದಕ್ಕೇನು ಅವನು ಕೈಯಿಂದ ಹಣ ಖರ್ಚು ಮಾಡಿರಲಿಲ್ಲ. ಕೋಟಿಗಟ್ಟಲೆ ದೋಚಿದ್ದರಲ್ಲಿ ಒಂದು ಸಣ್ಣ ಭಾಗ ವಿನಿಯೋಗಿಸಿದ್ದ. ಅವನ ತಲೆಯಲ್ಲಿ ಬೆಳೆಯುತ್ತಿದ್ದ ಕೂದಲ ಹೊರೆ ಇನ್ನಾರದೋ ಜೇಬಿಗೆ ಹೊರೆಯಾಗಿತ್ತು!

ನಮ್ಮ ಕಂಪೆನಿಯ ಆಫೀಸು ಇದ್ದದ್ದು ಜಯನಗರ ಬಡಾವಣೆಯಲ್ಲಿ. ನಮಗೆ ಅಲ್ಲಿ ದೂರು ದಾಖಲಿಸುವಂತೆ ಸೂಚನೆ ಪೊಲೀಸ್ ಇಲಾಖೆಯಿಂದ ಬಂತು. ನಾವು ದೂರು ಸಲ್ಲಿಸಿದವು. ಪೊಲೀಸರು ಪುನಃ ಆರೋಪಿಯನ್ನು ಬಂಧಿಸಿ ಜಯನಗರ ಸ್ಟೇಷನ್ ಗೆ ಕರೆತಂದರು. ಮಾರನೇ ದಿನ ನಮಗೆ ಸ್ಟೇಷನ್ ಗೆ ಬುಲಾವ್ ಬಂತು. ನಾನು ಮತ್ತು ಇತರ ಮೂವರು ಅಧಿಕಾರಿಗಳು ಅಲ್ಲಿಗೆ ಹೋದೆವು. ವೃತ್ತ ನಿರೀಕ್ಷಕರೊಂದಿಗೆ (CPI) ವಿಷಯ ಹಂಚಿಕೊಂಡೆವು. ಅವನನ್ನು ಸೆಲ್‌ನಲ್ಲಿ ಕೂಡಿ ಬೀಗ ಹಾಕಿ ಬರಿ ಚಡ್ಡಿಯಲ್ಲಿ ಕೂರಿಸಿದ್ದರು. ನಮ್ಮನ್ನು ನೋಡಿ ನಾಚಿಕೆಯಿಂದ ತಲೆ ತಗ್ಗಿಸಿ ಕುಳಿತಿದ್ದ. ವೃತ್ತನಿರೀಕ್ಷಕರು ಅವನನ್ನು ಹೊರಗೆ ಕರೆತರುವಂತೆ ಸೂಚಿಸಿದರು. ಪೊಲೀಸರು ಹೊರಗೆ ಕರೆತಂದು ನೆಲದಮೇಲೆ ಕುಳಿಕೊಳ್ಳಲು ಹೇಳಿದರು. ಸೂಟು, ಬೂಟು, ಟೈ ಧರಿಸಿ, ಬೆಲೆಬಾಳುವ ವಾಚ್ ಕಟ್ಟಿಕೊಂಡು, ಆಮದಾದ ಬೆಲೆಬಾಳುವ ಸೇಂಟ್ ಹಾಕಿಕೊಂಡು ಬರುತ್ತಿದ್ದ ವ್ಯಕ್ತಿ ಇವರೇ ಅನಿಸುದ್ದು ಸುಳ್ಳಲ್ಲ. ಒಮ್ಮೆಗೇ ಠಾಣಾಧಿಕಾರಿ ಇದೆಲ್ಲ ನಿಜವೇ ಎಂದು ದೂರಿನ ಪ್ರತಿ ತೋರಿಸಿ ಕೇಳಿದರು. ಎಲ್ಲವನ್ನೂ ಒಪ್ಪಿಕೊಂಡ. ಹಣ ಏನಾಯಿತು ಎಂದು ಕೇಳಿದರು. ಎಲ್ಲ ನೌಕರರ ಸಂಬಳ, ಸಾರಿಗೆ, ಕಚೇರಿ ಬಾಡಿಗೆ ಇತ್ಯಾದಿಗೆ ಖರ್ಚಾಯಿತು ಎಂದು ಹೇಳಿದ. ಅದರಲ್ಲಿ ಸ್ವಲ್ಪ ಸತ್ಯಾಂಶವಿತ್ತು. ಕೋಟಿಗಟ್ಟಲೆ ಹಣ ಈ ಬಾಬ್ತಿಗೆ ಖರ್ಚು ಮಾಡಿದೆಯಾ ಎಂದು ಗದರಿದರು. ಸ್ವಲ್ಪ ಬೇರೆಕಡೆ ತೊಡಗಿಸಿದ್ದು ಅಲ್ಲಿ ತನಗೆ ಮೋಸವಾಯಿತು ಎಂದು ಹೇಳಿದ. ನನಗೆ ಅವನನ್ನು ನೋಡಿ ಕೋಪ ಬಂದಿತ್ತು. ನಾನು ಠಾಣಾಧಿಕಾರಿ ಕುರಿತು ಸರ್ ನಮ್ಮ ಹಣದ ಸ್ವಲ್ಪ ಭಾಗ ಅವನ ತಲೆ ಮೇಲೆ ಬೆಳೆಯುತ್ತಿದೆ ಅಂದೆ. ಆಶ್ಚರ್ಯಚಕಿತರಾಗಿ ಹಾಗೆಂದರೇನು ಅಂದರು. ಅವನ ಕೂದಲು ಕಸಿ ಬಗ್ಗೆ ಮತ್ತು ಅದಕ್ಕೆ ಖರ್ಚಾದ ಹಣದ ಬಗ್ಗೆ ಹೇಳಿದೆ. ಒಮ್ಮೆ ಅವರು ನಕ್ಕರು. ಅವನೂ ನಕ್ಕ. ಕೋಪಗೊಂಡು ಪೊಲೀಸ್ ಭಾಷೆ ಬಳಸಿದರು ಮತ್ತು ಸೆಲ್ ಒಳಗೆ ಹಾಕಲು ಆದೇಶಿಸಿದರು. ಈಗ ಈ ಕೇಸಿನ ಸ್ಥಿತಿ ಏನಾಗಿದೆ ಎಂದು ತಿಳಿಯದು. ಏಕೆಂದರೆ ನಾನು ಆ ಸಂಸ್ಥೆ ಬಿಟ್ಟು ವಿಶ್ರಾಂತ ಜೀವನ ನಡೆಸುತ್ತಿದ್ದೇನೆ.

ಹಾಗಂತಾ ಬೋಳುಮಂಡೆಯವರೆಲ್ಲ ತಪ್ಪು ಮಾಡುತ್ತಾರೆಂದಲ್ಲ, ಅದು ನಾನು ಮಾಡುವ ಆರೋಪವೂ ಅಲ್ಲ. ತಪ್ಪುಗಳನ್ನು ಎಲ್ಲರೂ ಮಾಡುತ್ತಾರೆ. ಬೋಳು ಮಂಡೆಯ ಅನೇಕ ಮೇಧಾವಿಗಳನ್ನು, ಸತ್ಯಸಂದರನ್ನು ಮತ್ತು ಗುಣಶೀಲರನ್ನು

ನಾನು ನೋಡಿದ್ದೇನೆ.

ಕೂದಲು ಕಸಿ ಮಾಡಿಸಿಕೊಳ್ಳುವುದು ತಪ್ಪಲ್ಲ. ಆದರೆ ಸ್ವಂತ ಗಳಿಕೆಯ ಹಣದಿಂದ ಮಾಡಿಸಿಕೊಂಡರೆ ಬಲು ಉತ್ತಮ. ತಪ್ಪುದಾರಿ ಹಿಡಿದರೆ ಎಲ್ಲರ ನಾಲಿಗೆಯಲ್ಲಿ ನಮ್ಮ ಹೆಸರು ನಲಿಯುವುದರಲ್ಲಿ ಅನುಮಾನವಿಲ್ಲ!.

ಏನೇ ಅನ್ನಿ ಯಾವುದಕ್ಕೆ ಆಗಲಿ ಸನ್ಮಾರ್ಗದಲ್ಲಿ, ಸ್ವಂತ ದುಡಿದ ಹಣ ಖರ್ಚು ಮಾಡಿ, ಕೆಲಸ ಮಾಡಿದಾಗ ದೊರೆಯುವ ಆನಂದ ಮೋಸದ ಹಣ ಖರ್ಚು ಮಾಡಿದಾಗ ಸಿಗುವುದಿಲ್ಲ. ಆದರೆ ಹೀನ ಕೃತ್ಯದ ಪಾಪಿಗಳಿಗೆ ಅದು ಅರ್ಥವಾಗಬೇಕಲ್ಲ. ನೀವೇನಂತೀರಿ??

■

## ಓಹ್, ಈ ಸರ್ತೀನೂ ಮಿಸ್ಸಾಯ್ತು.....!

ಸುಮಾರು ಎಂಬತ್ತು ವಯಸ್ಸಿನ ವೃದ್ಧರು ಪೋಲಿಂಗ್ ಬೂತಿಗೆ ಹೋಗಿ, ಮತ ಚಲಾಯಿಸಿದ ನಂತರ ಆಚೆಗೆ ಬಂದು ಅಲ್ಲೇ ಕುಳಿತಿದ್ದ ಚುನಾವಣಾ ಸಿಬ್ಬಂದಿಯ ಹತ್ತಿರ ಹೋಗಿ – ತಮ್ಮಾ, ನನ್ನ ಹೆಂಡತಿ ಹೆಸರು ಪಂಕಜಾ ಅಂತ, ಅವಳು ಮತ ಚಲಾಯಿಸಿ ಆಯಿತಾ ? ಸ್ವಲ್ಪ ನಿನ್ನ ಲಿಸ್ಟ್ ನೋಡಿ ಹೇಳಪ್ಪಾ ಅಂತ ವಿನಂತಿಸಿದಾಗ, ಅವನು ಸಾಮಾನ್ಯವಾಗಿ ನಾವು ಇದೆಲ್ಲಾ ಹೇಳಬಾರದು, ಆದರೆ ಪಾಪ, ನೀವು ಹಿರಿಯ ನಾಗರೀಕರು ಏನೋ ಕೇಳುತ್ತಿದ್ದೀರಾ ಎಂದು ಕನಿಕರಪಟ್ಟು ಅವನಲ್ಲಿದ್ದ ಪಟ್ಟಿಯನ್ನು ಪರಿಶೀಲಿಸಿ ನಂತರ, ಸಾರ್ ಹೌದು, ನಿಮ್ಮ ಹೆಂಡತಿ ಮತ ಚಲಾಯಿಸಿ ಆಗಲೇ ಹೋಗಿ ಆಗಿದೆ, ಎಂದಾಗ ಅವರು – ಓಹ್, ಈ ಸರ್ತಿನೂ ಅವಳನ್ನು ಭೇಟಿ ಮಾಡಲಾಗಲಿಲ್ಲವೆಂದು ಪೇಚಾಡಿಕೊಂಡಾಗ....

ಅವನು – ಯಾಕೆ ಸಾರ್, ಅವರು ನಿಮ್ಮ ಮನೆಯಲ್ಲಿ ನಿಮ್ಮ ಜೊತೆಗೆ ಇಲ್ಲವಾ ? ಎಂದು ಆಶ್ಚರ್ಯವಾಗಿ ಪ್ರಶ್ನಿಸಿದಾಗ, ಆ ವೃದ್ದರು – ಅಯ್ಯೋ, ಅವಳು ಸತ್ತು ಈಗಾಗಲೇ ಹದಿನಾರು ವರ್ಷವಾಯಿತು.ಆದರೆ ಅದು ಹೇಗೋ ಎಲ್ಲಾ ಚುನಾವಣೆಯಲ್ಲಿ ಮಾತ್ರ ನಮಗೆ ಗೊತ್ತಿಲ್ಲದಂತೆ ಮೆಲ್ಲಗೆ ಬಂದು ಮತ ಚಲಾಯಿಸಿ ಹೋಗಿ ಬಿಡ್ತಾಳೆ....! ಎಂದಾಗ ಕಕ್ಕಾಬಿಕ್ಕಿಯಾಗುವ ಪರಿಸ್ಥಿತಿ ಆ ಚುನಾವಣಾ ಸಿಬ್ಬಂದಿಯದಾಯಿತು....!

**ವಿ.ವಿಜಯೇಂದ್ರ ರಾವ್**

# ಪುನರ್ಜನ್ಮ ಬೇಕೇ ಬೇಕಾ.....

**ಎಚ್.ಗೋಪಾಲಕೃಷ್ಣ**

ಪುನರ್ಜನ್ಮ ಯಾಕಪ್ಪ ಇರಬೇಕು ಅಂತ ಹೇಳ್ತೀನಿ ಅಂತ ಅಂದೆ. ನಿಮಗೆ ಪುನರ್ಜನ್ಮ ಯಾಕಿರಬೇಕು ಅಂದ್ರೆ ನಾನು ನಿಮಗೆ ಒಂದು ವಿಷಯ ಹೇಳಲೇಬೇಕು. ಇದರ ಬಗ್ಗೆ ಮಾತನಾಡೋಣ ಬನ್ನಿ ಇದನ್ನು ನನ್ನ ಗೆಳೆಯ ರಾಘಪ್ಪನ ಮಾತಿನಲ್ಲೇ ಕೇಳೋಣ ಬನ್ನಿ....

ನಮ್ ಗೆಳೆಯ ಯಾವಾಗಲೂ ಒಂದು ರೀತಿ ಓಪನ್ ಮನುಷ್ಯ ತಲೆಗೆ ಏನ್ ಬರುತ್ತೋ ಅದನ್ನು ಪಟಕ್ ಅಂತ ಬಾಯಿ ಮೂಲಕ ನಿಜ ಹೊರಗೆ ಹಾಕಿಬಿಡುತ್ತಾನೆ.

ಒಂದ್ ಸಲ ಎಂತ ತಮಾಷೆ ಆಯ್ತು ಅಂದರೆ ಇವನಿಗೆ ಯಾವುದೋ ಒಂದು ಹೊಸದಾಗಿ ಬಂದಿರೋ ಸ್ಕೂಟ್ರು ತೊಗೋಬೇಕು ಅಂತ ಆಸೆ ಹುಟ್ಟಿತು. ಕೈಯಲ್ಲಿ ಅದೆಷ್ಟೋ ಲಕ್ಷ ಝುಣಝುಣಅಂತ ಕುಣಿತ ಇತ್ತು.

ತನ್ನ ಈ ಆಸೆಯನ್ನು ತನ್ನ ಮಕ್ಕಳೆದುರು ಹೇಳ್ಕೊಂಡ. ಸಾಯುವ ಮೊದಲು ಒಂದು ಹೊಸ ಸ್ಕೂಟರ್ ತೆಗೆದುಕೊಂಡು ಅದರ ಮೇಲೆ ಕೂತು ಸವಾರಿ ಮಾಡಿಬಿಡಬೇಕು ಅಂತ ಮಕ್ಕಳ ಜೊತೆ ಮಾತಾಡುತ್ತಾ ಹೇಳುತ್ತಾ ಇದ್ದಾನೆ...

ಸರಕ್ ಅಂತ ಅವನ ಹೆಂಡತಿ ಎಲ್ಲಿಂದಲೋ ಪ್ರತ್ಯಕ್ಷ ಆದಳು.

ಸ್ಕೂಟ್ರು ಯಾವ ಸುಖಕ್ಕೆ.....? ಅಂದಳು.

ಇವನು ಇನ್ನೇನು ರಿಟೈರ್ ಆಗ್ತೀನಿ ಅವಾಗ.... ಅಂತ ಹೇಳಲು ಹೊರಟ.

ಇವನ ಮಾತನ್ನು ಅವಳು ಅರ್ಧದಲ್ಲೇ ತಡೆದು ಸ್ಕೂಟ್ರು ಬೇಡ ಪೂಟ್ರರೂ ಬೇಡ ಎಂತದ್ದೂ ಬೇಡ ಯಾವ ಸುಖಕ್ಕಾಗಿ ಈಗ ಅದಿರಬೇಕು? ನಾನ್ ಅದರ ಮೇಲೆ ಕೂತ್ಕೊಳೋದಿಲ್ಲ ಅಂದಮೇಲೆ ನೀನು ತಗೋಬೇಡ... ಅಂತ ಕೋಪದಿಂದ ಹೇಳಿ ಮೆಟ್ಟು ತಗೊಂಡು ಹೊಡೆದಂತೆ ಹೊರಗಡೆ ಹೋದಳಂತೆ. ಅವಳ ಯೌವನದಲ್ಲಿ ಅವಳನ್ನು ಸ್ಕೂಟರ್ ಮೇಲೆ ಓಡಾಡಿಸಿಲ್ಲ ಈ ಹಾಳಾದೋನು ಅಂತ ಅವಳಿಗೆ ಇವನ ಮೇಲೆ ಅಸಾಧ್ಯ ಕೋಪ. ಸಮಯ ಸಿಕ್ಕಾಗಲೆಲ್ಲ ಎದುರಿಗೆ ಯಾರಿದ್ದಾರೆ ಯಾರಿಲ್ಲ ಎನ್ನದೆ ಝಾಢಿಸುತ್ತಾಳೆ. ಅದೂ ಅವಳ ಕಡೆ ನೆಂಟರು ಇದ್ದಾರೆ ಇದು ಪೀಕ್ ಮುಟ್ಟುತ್ತೆ....

ಪಾಪ ಇವನಿಗೆ ಗರ ಹೊಡೆದ ಹಾಗೆ ಆಯ್ತು. ಇಷ್ಟು ದಿವಸ ಅವಳನ್ನ ಬಸ್ಸಿನಲ್ಲಿ ಸುತ್ತಾಡಿಸಿದ್ದೆ. ಇನ್ನು ಮೇಲಾದರೂ ಅವಳನ್ನು ಖುಷಿಯಿಂದ ಸ್ಕೂಟರ್ ನಲ್ಲಿ ಸುತ್ತಾಡಿಸಬೇಕು ಅಂತ ಇವನ ಯೋಚನೆಯಿತ್ತು.

ಆದರೆ ಆಕೆ ಇವನ ಯೋಜನೆಗೆ ಅಲ್ಲೇ ತಡೆ ಹಾಕಿಬಿಟ್ಟಳು. ಇವನು ಅವತ್ತೇ ಡಿಸೈಡ್ ಮಾಡಿದನಂತೆ ಇನ್ಮೇಲೆ ಬದುಕು ಇರುವವರೆಗೂ ಸ್ಕೂಟರ್ಬೇಡ ಅಂತ.

ಈ ಮಾತು ನಡೆದು ಹತ್ತಿರ ಹತ್ತಿರ 20 ವರ್ಷ ಆಗಿರಬಹುದು. ಈಗಲೂ ಆತನ ಬಳಿ ಸ್ಕೂಟರ್ ಇಲ್ಲ, ಸೈಕಲ್ಲು ಇಲ್ಲ, ಕಾರಂತೂ ಮೊದಲೇ ಇಲ್ಲ.

ಇದು ಒಂದಾಯಿತು....

ಈಗ ಇನ್ನೊಂದು ಸಂಗತಿಗೆ ಬನ್ನಿ. ಇದು ವಿಪರೀತ ಅಂತ ಅನಿಸುವ ವಿಚಿತ್ರ ವಿಚಿತ್ರ ಪ್ರಸಂಗ. ಇದೇ ಗೆಳೆಯನಿಗೆ ಊಟ ತಿಂಡಿ ವಿಷಯದಲ್ಲಿ ಅಪಾರವಾದ ಆಸೆ, ತುಂಬ ನಿರೀಕ್ಷೆ ಹಾಗೂ ಹೊಟ್ಟೆಬಾಕತನ.

ಈ ಮೂರು ಮೇಲೇಯ್ನಿ ಅವನಿಗೆ ಮೇಲೆ ಮೇಲೆ ಕೆಲವು ಆಸೆಗಳು ಹಠಾತ್ ಹುಟ್ಟುವುದು ಉಂಟು. ಇಂತಹ ಒಂದು ಆಸೆ ಅವನಿಗೆ ಒಮ್ಮೆ ಹುಟ್ಟಿತಂತೆ. ಅದೇನು ಅಪ್ಪ ಅಂದರೆ ದೇವಸ್ಥಾನದಲ್ಲಿ ಅದೂ ಮಠಗಳಲ್ಲಿ ಮಾಡುವ ಒಂದು ವಿಶಿಷ್ಟ ರೀತಿಯ ಹುಳಿಯನ್ನು ತಿನ್ನಬೇಕು ಅನ್ನುವುದು. ಅದೆಷ್ಟೋ ವರ್ಷಗಳ ಹಿಂದೆ ಯಾವುದೋ ಮಠದಲ್ಲಿ ತಿಂದು ಜೀರ್ಣವಾದ ಮೆಂತ್ಯಬೇಳೆ ಹುಳಿ ಈಗ ಅವನ ನೆನಪಿಗೆ ಬಂದು ನರಕ ಸೃಷ್ಟೀಮಾಡಬೇಕೇ...

ಮೆಂತ್ಯಬೇಳೆ ಹುಳಿ ಮಾಡೂ ಅಂತ ತನ್ನ ಹೆಂಡತಿಯ ಮುಂದೆ ಕೇಳಿಕೊಂಡ. ಹೆಂಡತಿ ಸರಿಯಾದ ಮೂಡ್ನಲ್ಲಿ ಇದ್ದರೆ ಸರಿಯೆಂದು ನಗುನಗುತ್ತ ಇವನು ಕೇಳಿದ್ದು ಮಾಡಿ ಬಡಿಯುತ್ತಿದ್ದಳು. ಆದರೆ ಅವತ್ತು ಅವಳ ಮೂಡ್ ಹೇಗಿತ್ತು ಅಂದರೆ ಆಗತಾನೇ ಮಂತ್ರಿ ಪದವಿ ಕಿತ್ತುಕೊಂಡು ವಿಧಾನಸೌಧದಿಂದ ಓಡಿಸಲ್ಪಟ್ಟ ಕಂತ್ರಿನಾಯಿಯ ಮನೋಸ್ಥಿತಿ ಆಗಿತ್ತು.

ಒಂದೇ ವಾಕ್ಯದ ಸಿಡಿಲಿನ ರೂಪದ ಉತ್ತರ ಕೊಟ್ಟಳಂತೆ.

ನಿನಗೆ ಬೇಕಾದ್ದು ಯಾವೋಳು ಮಾಡ್ತಾಳೋ ಅವಳ ಹತ್ರಾನೇ ಮಾಡಿಸ್ಕೋ.. ಅಂತ.

ನಾನು ನೀವು ಆಗಿದ್ರೆ ನಕ್ಕು ಹೆಂಡತಿಯ ಈ ಜೋಕನ್ನು ಅನುಭವಿಸುತ್ತ ಇದ್ದೆವು, ಪೇಪರ್‌ಗೆ ಬರೆದು ಅದು ಅಚ್ಚಾದ ಮೇಲೆ ಗೆಳೆಯರು, ಬಂಧುಗಳಿಗೆ ತೋರಿಸಿ ಅವರು ನಕ್ಕಹಾಗೆ ಮಾಡಿದಾಗ ಅವರನ್ನು ಹೋಟಲ್ ಪಾಟಲ್‌ಗೆ ಕರೆದೊಯ್ದು ಪಾರ್ಟಿ ಮಾಡ್ತಿ ಇದ್ರಿ. ಆದರೆ ಇದು ಹೆಂಡತಿ ಇವರೇ....

ಪಾಪ ಗೆಳೆಯನಿಗೆ ಅದೇನು ಹೇಳಬೇಕು ಅಂತ ತಿಳೀದೆ ಢಂಗ್ ಹೊಡೆದು ಹೋದನಂತೆ. ಮೆಂತ್ಯ ಬೇಳೆಹುಳಿ ಮುಂದೆ ಯಾವ ಹುಳಿ ಇದ್ದರೂ ನೀವಾಳಿಸಿ ತೆಗೀಬೇಕು ಎನ್ನುವ ಸ್ಕೂಲ್ ಆಫ್ ಥಿಂಕಿಂಗ್ ಗೆಳೆಯನದ್ದು. ಮೆಂತ್ಯ ಬೇಳೆಹುಳಿ ಬಗ್ಗೆ ತಿಳಿದಿರುವ ಎಲ್ಲರದ್ದೂ ಸಹ ಇದೇ ಒಪಿನಿಯನ್ನನ್ನು ಅಂತ ಇಟ್ಕೋಳಿ. ನೀವು ಮೆಂತ್ಯ ಬೇಳೆಹುಳಿ ತಿಂದಿಲ್ಲ ಅಂದರೆ ನಿಮ್ಮ ಜೀವನ ವ್ಯರ್ಥ ತಿಳಕಲಿ...

ಗೆಳೆಯ ಆ ಕೂಡಲೇ ಇನ್ನೊಂದು ಪ್ರತಿಜ್ಞೆ ಮಾಡಿಬಿಟ್ಟ..!

ಇನ್ಮುಂದೆ ಇಂಥದ್ದು ಮಾಡು ಅಂತ ಹೆಂಡತಿಗೆ ಹೇಳೋದಿಲ್ಲ, ಅವಳು ಮಾಡಿದ ಅಡಿಗೆಗೂ ಸಹ ಪ್ರತಿಕ್ರಿಯೆ ಮಾಡೋದಿಲ್ಲ.....ಅಂತ!

ಇದೇ ರೀತಿಯ ಹಲವಾರು ಪ್ರಸಂಗಗಳು ಅವನ ಜೀವನದಲ್ಲಿ ನಡೆದೂ ನಡೆದೂ ಇವನು ಪ್ರತಿಜ್ಞೆ ಮಾಡೀ ಮಾಡೀ ಈಗ ಹೇಗಾಗಿ ಬಿಟ್ಟಿದೆ ಅಂದರೆ ಇವನ ಅಥವಾ ಇವನ ರೀತಿಯ ಯಾವ ಮನುಷ್ಯ ಜೀವೀದೂ ಆಸೆಗಳು ಈಡೇರದೇ ಉಳಿತಾವೆ ಅನ್ಸದೆ.

ಪ್ರಿಯ ಓದುಗ ಮಹಾಶಯಾ, ಇವೆಲ್ಲಾ ಒಂದೇ ದಿನ ಅಥವಾ ಒಂದರ ನಂತರ ಒಂದು ದಿವಸದಲ್ಲಿ ಆಗಿದ್ದಲ್ಲ. ಓವರ್ ಎ ಪಿರಿಯಡ್ ಆಫ್ ಟೈಮ್ ಅನ್ನಾತರಲ್ಲ ಹಾಗೆ ಕಾಲಾನುಕ್ರಮದಲ್ಲಿ ನಡೆದ ಕ್ರಿಯೆಗಳು!

ಇವೆಲ್ಲದರ ಟೋಟಲ್ ಎಫೆಕ್ಟ್ ನಿಧಾನಕ್ಕೆ ಹೆಂಡತಿಗೆ ಅರಿವಾಗ ತೊಡಗಿತು. ಆದರೆ ಅದು ನಮ್ಮ ಕತೆಗೆ ನೇರ ಲಿಂಕ್ ಇಲ್ಲದ್ದು.

ಪುನರ್ಜನ್ಮ ಇರದಿದ್ದರೆ ಅದು ಇರತಕ್ಕದ್ದು ಅಂತ ಆಗಲೇ ನಿಮಗೆ ಹೇಳಿದೆ ಅಲ್ವೇ...

ಮಸಲಾ ಪುನರ್ಜನ್ಮ ಇಲ್ಲ ಅಂತ ಕೊಂಚ ಸಮಯ ಅಂದುಕೊಳ್ಳಣ...

ರಾಘಪ್ಪನ ಆತ್ಮ ಸ್ಕೂಟರ್ ಆಸೆ ಬಿಡಬೇಕು, ಮೆಂತ್ಯಬೇಳೆ ಹುಳಿ ಆಸೆ ಬಿಡಬೇಕು. ಇದೇ ರೀತಿಯ ಕೋಟಿ ಕೋಟಿ ಆಸೆಗಳನ್ನು ಮನಸ್ಸಿನಲ್ಲೇ ಇಟ್ಟುಕೊಂಡು ಜೀವ ಬಿಡಬೇಕು.

ಆಗ ಏನಾಗುತ್ತೆ ಅಂದರೆ ರಾಘಪ್ಪನಂತಹವರ ಆತ್ಮ ಆಸೆ ತೀರದೆ ಅಂತರಿಕ್ಷದಲ್ಲಿ ತಾರಾಡುತ್ತವೆ. ಇಡೀ ವ್ಯೋಮ ಇಂತಹ ಆತ್ಮಗಳಿಂದ ತುಂಬಿ ಹೋಗಿ ಬೇರೆ ಆತ್ಮಗಳಿಗೆ ಜಾಗವೆ ಇಲ್ಲದಾಗಬಹುದು. ಅಂತಹ ಪರಿಸ್ಥಿತಿ ನಮಗೆ ಬೇಕೇ..? ಅದರಿಂದಲೇ ಅಕಸ್ಮಾತ್ ಪುನರ್ಜನ್ಮ ಎನ್ನುವುದು ಇಲ್ಲ ಎಂದಾದರೆ ಪುನರ್ಜನ್ಮ ಬೇಕೇಬೇಕು ಎಂದು ನಮ್ಮ ಮಠಗಳ ಮೂಲಕ ಅಹವಾಲು ಸಲ್ಲಿಸೋಣ ಮತ್ತು ವ್ಯೋಮದಲ್ಲಿ ಆತ್ಮಗಳ ನೂಕುನುಗ್ಗಲು ತಪ್ಪಿಸೋಣ.

ರಾಘಪ್ಪನ ಸಂಪೂರ್ಣ ಕಥೆ ಮತ್ತೆ ಯಾವತ್ತಾದರೂ ಸಿಕ್ತೀರಲ್ಲಾ ಆಗ ಹೇಳ್ತೇನೆ...

ಏನೇ ಹೇಳಿ ಪುನರ್ಜನ್ಮ ಬೇಕೇ ಬೇಕು.

■



# ಒಗ್ಗರಣೆ

। **'ಗೌತಮ'**

ಈಗ್ಯೆ ಅರವತ್ತು ವರ್ಷಗಳಿಗೂ ಹಿಂದಿನ ಒಂದು ನೆನಪು. ನನಗಾಗ ಸುಮಾರು ಹತ್ತು ಹನ್ನೊಂದು ವರ್ಷ. ಬಳೇಪೇಟೆಯಲ್ಲಿ ಅಮ್ಮನ ಕೈ ಹಿಡಿದು ನಡೆಯುತ್ತಿದ್ದೆ. ನನ್ನ ತಲೆಯ ನೆರಳನ್ನು ನಾನೇ ತುಳೀತಾ ಇದ್ದೆ. ಅದೇ ಒಂದು ಖುಷಿ. ಒಂದೊಂದು ಹೆಜ್ಜೆ ಇಟ್ಟಾಗಲೂ ನೆರಳು ಪಾತಾಳಕ್ಕೆ ಹೋಗಿಬಿಡತ್ತೆ ಅನ್ನೋ ಭ್ರಮೆಯಲ್ಲಿ ಒಂದೊಂದು ಹೆಜ್ಜೆಯನ್ನೂ ಬಲವಾಗಿ ನೆಲಕ್ಕೆ ಅಪ್ಪಳಿಸುತ್ತಾ ನಡೀತಿದ್ದೆ. ಆಗ ನೋಡಿ, ಶಬ್ದ ಕೇಳಿಸದಿದ್ದರೂ ಒಗ್ಗರಣೆ ಹಾಕಿದ ಘಮಲು ಮೂಗಿಗೆ ಬಡಿಯಿತು. ಜೋರಾಗಿ ಉಸಿರನ್ನು ಎಳೆದುಕೊಂಡೆ. ಮಂತ್ರಮುಗ್ಧನಾಗಿ ಹೋದೆ ಆ ಘಮಲಿಗೆ. ಕಣ್ಣು ಮುಚ್ಚಿ ಆ ಘಮಲನ್ನು ಆಸ್ವಾದಿಸುತ್ತಿದ್ದೆ. ಅದು ಸಾರಿಗೆ ಹಾಕಿದ ಒಗ್ಗರಣೆ ಅನ್ನೋದು ಅದು ಹೇಗೋ ಮನಸ್ಸಿಗೆ ಹೊಳೆಯಿತು. ನನ್ನ ಬಲಕ್ಕಿದ್ದ ತಿರುವಿನ ಮೂರನೆಯದೋ ನಾಲ್ಕನೆಯದೋ ಮನೆಯಿಂದಲೇ ಆ ಪರಿಮಳ ಬರ್ತಾ ಇದೆ ಅನ್ನೋದನ್ನ ನನ್ನ ಮೂಗು ಗ್ರಹಿಸಿಬಿಟ್ಟಿತ್ತು. ಅಮ್ಮ ನೋಡಿದರೆ ಸೀದಾ ಹೋಗ್ತಾ ಇದ್ದಾಳೆ, ಬಲಕ್ಕೆ ತಿರುಗೋ ಲಕ್ಷಣಗಳು ಕಾಣಿಸಲಿಲ್ಲ. ನನಗೋ ಬಲಕ್ಕೆ ತಿರುಗುವಾಸೆ. ಅಷ್ಟರಲ್ಲಿ ಅಮ್ಮನೂ ಒಂದು ಕ್ಷಣ ನಿಂತು ಬಲಕ್ಕೆ ತಿರುಗಿದಳು.'ಒಗ್ಗರಣೆ'ಯ ಪರಿಮಳ ಅಮ್ಮನನ್ನೂ ಸೆಳೆದಿರಬೇಕು? ನಾನೂ ತಿರುಗಿದೆ. ಹೆಜ್ಜೆಗಳನ್ನು ಹಾಕುತ್ತಿದ್ದಂತೆ ವಾಸನೆಯೂ ಹತ್ತಿರ ಹತ್ತಿರವಾಗುತ್ತಿತ್ತು. ನಾಲ್ಕನೇ ಮನೆ ಮುಂದೆ ನಿಂತಾಗ ಇದೇ 'ಒಗ್ಗರಣೆ ಮನೆ' ಅನ್ನೋದು ಖಚಿತವಾಗಿ ಹೋಯಿತು. ಬಾಗಿಲು ತೆಗೆದೇ ಇತ್ತು. ಒಳಗೆ ಕಾಲಿಡುತ್ತಿದ್ದ ಹಾಗೇನೇ ಒಳಗಿನಿಂದ ಬಂದ ಅಜ್ಜಿ 'ಬಾಮ್ಮ ಭಾಗ್ಯ ಬಾ. ಎಷ್ಟು ದಿನ ಆಯ್ತು ನಿನ್ನನ್ನ ನೋಡಿ. ಬಾ.' ಅಂದರು. ನನ್ನನ್ನು ನೋಡಿ 'ಬಾರೋ ಮಗೂ, ಬಾ' ಅಂತ ನನ್ನ ಕೆನ್ನೆ ಸವರಿದರು. ನಗುವೇ ಮೈವೆತ್ತಂತಿದ್ದ ಬೊಚ್ಚುಬಾಯಿಯ ಆ ಮುಖವನ್ನೇ ನೋಡುತ್ತಿದ್ದೆ. 'ಏನೋ ಮರೀ ಹಾಗೆ ನೋಡ್ತೀಯಾ?' ಅಂತ ಅಜ್ಜಿ ಕೇಳಿದಾಗ ನಾನು ನಾಚಿ ತಲೆ ತಗ್ಗಿಸಿದೆ. ಅಷ್ಟರಲ್ಲಿ ಸಾರಿನ ರುಚಿ ನೋಡುವ ಆಸೆ ಚಿಗುರಿ, ಗಿಡವಾಗಿ ಹೆಮ್ಮರವಾಯಿತು. 'ಬಾಡಿಗೆ ಮನೆ ಬೇಕಾಗಿತ್ತು. ಹುಡುಕ್ತಾ ಬಂದೆ ಹೊನ್ನಮ್ಮನೋರೇ' ಅಂತ ಮಾತಿಗಿಳಿದಳು. ನನಗೋ ಅದರಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಅಷ್ಟರಲ್ಲಿ ಅಜ್ಜಿ 'ಅದೆಲ್ಲ ಆಮೇಲಾಗಲಿ. ಬಿಸಿಲಲ್ಲಿ ಬಂದಿದ್ದೀರಿ. ಮೊದಲು ಊಟ ಮಾಡೇಳಿ. ಆಮೇಲೆ ಮಿಕ್ಕಿದ್ದನ್ನ ಮಾತಾಡೋಣ' ಅಂದರೆ, ಅಮ್ಮ 'ಅಯ್ಯೋ, ನಿಮಗ್ಯಾಕೆ ಸುಮ್ಮನೆ ತೊಂದರೆ? ಮನೇಲಿ ಅಡಿಗೆ ಮಾಡಿಟ್ಟು ಬಂದಿದ್ದೀನಿ' ಅಂದಳು ಅಮ್ಮ. 'ಅಯ್ಯೋ, ನೀನು ಈ ಉರಿಬಿಸಿಲಲ್ಲಿ ನಡಕೊಂಡೂ, ಮನೇಗೆ ಹೋಗೀ . . . ಎಷ್ಟು ಹೊತ್ತಾಗುತ್ತೋ ಏನೋ.ಒಂದು ತುತ್ತು ತಿಂದುಕೊಂಡು ಹೋಗಿ' ಅಂತ ಬಲವಂತ ಮಾಡಿದ ಮೇಲೆ ಅಮ್ಮ ಬಚ್ಚಲಿಗೆ ನಡೆದಳು. ನಾನೂ ಅಮ್ಮನ ಹಿಂದೆ ಹೊರಟೆ. ಕೈ ಕಾಲು ತೊಳೆದು ಊಟಕ್ಕೆ ಕೂತೆ. ಮುತ್ತುಗದ ಎಲೆ ಹಾಕಿ, ನೀರು ಚುಮುಕಿಸಿದರು. ಎಲೆಯ ಮೇಲೆ ಬಿದ್ದ ನೀರು ಪಟಪಟ ಶಬ್ದ ಮಾಡಿತು. ಹಬೆ ಆಡುತ್ತಿದ್ದ ಬಿಸಿ ಬಿಸಿ ಅನ್ನ ಬಡಿಸಿದರು. ಒಂದು ಹಿತ್ತಾಳೆ ಪಾತ್ರೇಲಿ ಸಾರು ತಂದರು. ಅನ್ನದ ಮೇಲಿದ್ದ ನನ್ನ ಕೈಯನ್ನು ನೋಡಿ 'ಎಲ್ಲಿ ಪುಟ್ಟಾ, ಕೈ ತೆಕ್ಕೋ ಸುಡುತ್ತೆ' ಅಂತ ಕೈ ತೆಗೆಸಿ ಒಂದು ಸೌಟು ಸಾರನ್ನು ಅನ್ನದ ಮೇಲೆ

ಬಡಿಸಿದರು. ಮತ್ತೆ 'ಇರು ಸ್ವಲ್ಪ' ಅಂತ ಹೇಳಿ ಎರಡು ಮಿಳ್ಳೆ ತುಪ್ಪವನ್ನೂ ಬಡಿಸಿದರು. ಓಹೋ, ಆ ತುಪ್ಪದ ವಾಸನೆಯೋ! ವಿವರಿಸೋಕಾಗಲ್ಲ. ನಿಜ ಹೇಳಬೇಕೂಂತಂದರೆ, ಅಕ್ಷರಶಃ ನನ್ನ ಬಾಯಲ್ಲಿ ಜೊಲ್ಲು ಸುರಿದುಹೋಯಿತು. ತಿನ್ನೋ ಆತುರದಲ್ಲಿ ಅನ್ನ ಕಲೆಸಲು ಕೈ ಹಾಕಿ ಅನ್ನವನ್ನ ಮುಟ್ಟಿದೆ. ಕೈ ಸುಟ್ಟು 'ಹ್ಹಾ' ಅನ್ನುತ್ತಾ ಕೈಯ್ಯನ್ನು ಹಿಂದಕ್ಕೆಳೆದುಕೊಂಡೆ. 'ಅಮ್ಮಾ' ಅಂದೆ 'ಕಲಸಿಡು' ಅನ್ನೋ ತರಹ. 'ಹನ್ನೆರಡು ಆಗ್ತಾಬಂತು ನಿನಗೇ. ನೀನೇ ಕಲಸಿಕೊಳ್ಳೋಕಾಗಲ್ವಾ?' ಅಂತ ಯಾವಾಗಲೂ ರೇಗೋ ಹಾಗೆ ರೇಗದೆ ಕಲಸಿಟ್ಟಳು. ಒಂದು ತುತ್ತನ್ನು ಬಾಯಿಗಿಟ್ಟೆ. ಅಯ್ಯೋ, ಅದೆಂಥ ರುಚಿ ಅಂತೀರೀ! ಪ್ರಪಂಚವನ್ನೇ ಮರೆತುಬಿಟ್ಟಿದ್ದೆನೇನೋ.

ನನಗೀಗ ಎಪ್ಪತ್ತು ಪ್ಲಸ್ಸು. ಅಂತಹ ಸಾರನ್ನವನ್ನ, ಇದುವರೆವಿಗೂ ತಿಂದಿಲ್ಲ. ಭವಿಷ್ಯದಲ್ಲಿ? ನೋ ಚಾನ್ಸ್. ಈಗಲೂ 'ಸಾರು' ಪದ ಮೆದುಳಿಗೆ ಬಂದರೆ ಸಾಕು, ಹೊನ್ನಮ್ಮನವರ ಬೊಚ್ಚುಬಾಯಿಯ ಮುಖ ಕಣ್ಮುಂದೆ ಬಂದು ನಿಲ್ಲುತ್ತದೆ, ಚುಮುಕಿಸಿದ ನೀರಿಗೆ ಎಲೆ ಮಾಡಿದ ಶಬ್ದ, ಹೊನ್ನಮ್ಮನವರು ಬಡಿಸಿದ ಬಿಸಿಬಿಸಿ ಅನ್ನ, ಅದರ ಮೇಲೆ ಸುರುವಿದ ದಿವ್ಯವಾದ ಸಾರು, ಅದರ ಮೇಲೆ ಬಿದ್ದ ಘಮಘಮ ತುಪ್ಪ, ಮುಟ್ಟಿ ಕೈ ಸುಟ್ಟುಕೊಂಡದ್ದು, ಆಮೇಲೆ ಅಮ್ಮ ಕಲೆಸಿಕೊಟ್ಟದ್ದು, ನಾನು ಮೆದ್ದದ್ದು ಎಲ್ಲ ಈಗ ನಡೆಯುತ್ತಿರುವಂತೆ ಅನ್ನಿಸಿ ಆ ಪರಿಮಳ ಮೂಗಿಗೆ ಅಡರತ್ತೆ, ರುಚಿ ನಾಲಗೆಗೆ ಹತ್ತಿ ಬಾಯಲ್ಲಿ ನೀರೂರತ್ತೆ ಅಂದರೆ ನೀವು ಖಂಡಿತ ನಂಬಲ್ಲ. ಅಷ್ಟು ರುಚಿಯಾದ ಸಾರನ್ನು ಅದು ಹೇಗೆ ತಯಾರಿಸಿದರೋ! ತೂಕ ಹಾಕಲು ತ್ರಾಸಿಲ್ಲದ, ಅಳೆಯುವ ಬಟ್ಟಲಿಲ್ಲದ, ಸಮಯ ನೋಡಲು ಗಡಿಯಾರವೂ ಇಲ್ಲದಿದ್ದ ಕಾಲದಲ್ಲಿ ಕೈಯ್ಯಳತೆ, ಕಣ್ಣಳತೆಗಳಲ್ಲಿಯೇ ಅಷ್ಟು ನಿಖರವಾಗಿ ಮಾಡುವ ವಿದ್ಯೆ ಯಾವ ಪಾಕಸರಸ್ವತಿಯ ವರಪ್ರಸಾದವೋ ಕಾಣೆ. ಅಂಥ ಸೊಗಸಾದ, ದಿವ್ಯವಾದ ಸಾಟಿಯಿಲ್ಲದ ಸಾರಿನ ಘಮಲಿಗೆ ಕಿರೀಟಪ್ರಾಯದ ಈ ಒಗ್ಗರಣೆಯ ಘಮಲು ಸೇರಿ, ಪ್ರಪಂಚದಲ್ಲಿ ಇದಕ್ಕಿಂತ ರುಚಿಯಾದ ಬೇರೆ ಅಡಿಗೆಯೇ ಇಲ್ಲವೆನ್ನುವಂತೆ ಕಂಡುಹಿಡಿದ ಆ ಸೃಷ್ಟಿಕರ್ತ ಬಾಣಸಿಗನಿಗೆ ನಮೋನಮಃ.ಒಗ್ಗರಣೆಯ ಪ್ರಮಾಣ ಅಲ್ಪವಾದರೂ ಪರಿಣಾಮ ಮಾತ್ರ ಅಗಾಧವಾದದ್ದು.

ಭಗವದ್ಗೀತೆಯು,

ಆಯುಸ್ಸತ್ತ್ವ ಬಲಾರೋಗ್ಯ ಸುಖಪ್ರೀತಿವಿವರ್ಧನಾಃ ।

ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾಃ ಆಹಾರಾಃ ಸಾತ್ವಿಕಪ್ರಿಯಾಃ ॥ ಅಂತ ಹೇಳುತ್ತದೆ.

(ಆಯುಸ್ಸನ್ನೂ, ಉತ್ಸಾಹವನ್ನೂ, ಶಕ್ತಿಯನ್ನೂ, ಆರೋಗ್ಯವನ್ನೂ, ಸುಖವನ್ನೂ ಪ್ರೀತಿಯನ್ನೂ ಹೆಚ್ಚಿಸುವ, ರಸದಿಂದಲೂ, ಜಿಡ್ಡಿನಿಂದಲೂ ಕೂಡಿ ಕೆಲವು ಕಾಲ ಶರೀರದಲ್ಲಿ ಉಳಿಯುವ ಮನೋಹರವಾದ ಆಹಾರಗಳು ಸಾತ್ವಿಕರಿಗೆ ಬೇಕೆನಿಸುವುವು). ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಇಂದ್ರಿಯ ವಿಷಯುಗಳನ್ನೂ ಸಂತೃಪ್ತಿಗೊಳಿಸುವ ಇಂತಹ ಆಹಾರವನ್ನು ಸೇವಿಸುತ್ತಿದ್ದವರನ್ನು ಸಾತ್ವಿಕರೆಂದಲ್ಲದೇ ಬೇರೇನೆಂದು ತಾನೇ ಕರೆಯಬಹುದೂ?

ಬಾಲ್ಯದ ನೆನಪುಗಳೇ ಹಾಗೆ. ಮೊಗೆದಷ್ಟೂ ಮುಗಿಯದ್ದು. ಹೌದಲ್ಲವೇ? ■

# ಪಾತ್ರೆಗಳೊಂದಿಗಿನ...

**ಸವಿತಾ ನಾಗೇಶ್**

ಮೊನ್ನೆ ಒಂದಷ್ಟು ದಿನ ಮೋದಿ ಅಂಕಲ್ ಇಡೀ ದೇಶಕ್ಕೆ ರಜೆ ಕೊಟ್ಟರು. ಆದ್ರೆ ಮನೆಯೊಡತಿಗೆ, ಅವಳ ಅಡುಗೆ ಕೆಲಸಕ್ಕೆ ರಜೆಯನ್ನು ಕೊಡಲಿಲ್ಲ. ಸಂಬಳದೊಟ್ಟಿಗೆ ಕೆಲಸದವರಿಗೂ ರಜೆಯನ್ನು ಘೋಷಿಸಿಬಿಟ್ರು. ನಮ್ ಪಾಡು ಯಾರಿಗ್ಹೇಳೋಣಾ ಹೇಳಿ. ಓಟಿ ಟೈಮ್! ಮನೇಲಿದ್ರೆ ಕೇಳ್ಬೇಕಾ? ಕ್ಷಣಕ್ಷಣಕ್ಕೂ ಏನಿದೆ ತಿನ್ನೋಕೆ ಏನಿದೆ ತಿನ್ನೋಕ್ಕೆ? ಹೊರಗೇನೂ ಸಿಗ್ತಿಲ್ಲ, ಮನೇಲಿ ಮಾಡೋದೇ ಮಾಡೋಕ್ಕೇ ಸಾಕಾಗ್ತಿದೆ. ಇನ್ನು ಕುರುಕ್ಲು, ಜೊತೆಗೆ ರಣರಣ ಬಿಸ್ಲು! ಸಾಕಪ್ಪಾ ಸಾಕು ಈ ಹೌಸ್ ವೈಫ್ ಕೆಲ್ಸ! ಅದೂ ಈ ಕರ್ಫ್ಯೂ ಟೈಮಲ್ಲಿ!

ಅಪ್ಪ ಮಗಂಗೆ ಅದೇನ್ ತಿಕ್ಲು ತಿರುಗ್ತೋ ಗೊತ್ತಿಲ್ಲ ನಾಳೆ ಅಡುಗೆ ತಿಂಡಿ ನಮ್ದೇ, ನಿನಗೆ ರಜೆ ಎಂದೇಬಿಟ್ರು! ಒಂದೆಡೆಗೆ ಖುಷಿಯಾದ್ರೂ ಮತ್ತೊಂದೆಡೆಗೆ ಕೆಲಸಗಳ ಮಹಾಬೆಟ್ಟವೇ ಕಣ್ಮುಂದೆ ಬಂದು ಎದೆ ಬಡಿದುಕೊಂಡಿತು. ಒಂದು ಬೇಕಂದ್ರೆ ಇನ್ನೊಂದು ಬಿಡ್ಲೇ ಬೇಕಲ್ವಾ ಅನ್ನೋ ನಿಶ್ಚಿತತೆಗೆ ಮನಸು ಬಂತು. ಅಡುಗೆ ಮನೆಯ ಕಡೆಗೆ ಮುಖ ಮಾಡದವರು ಏನ್ ಮಾಡ್ತಾರೋ ನೋಡೋಣ ಎಂದುಕೊಂಡೆ.  ಸರಿ ನಾಳೆ ಬಂತು. ಅಪ್ಪ ಮಗ ಅಡುಗೆ ಮನೆಗೆ ದಾಳಿಯಿಟ್ಟರು. ತಾವು ಬಂದ ಕಾರ್ಯ ಯಾವ್ದು, ಅಷ್ಟು ಮಾತ್ರ ಮಾಡ್ಕೊಂಡು ಹೋಗದೆ ಏನೇನೋ ವಿಷಯಗಳಿಗೆ ತಲೆ ಹಾಕಿದ್ರು. ಸ್ಟಾರ್ಟಿಂಗ್ ಏನೇನೋ ಮಾತಾಡ್ತಾನೇ ಇದ್ರು. ಆದ್ರೂ ಯು ಟ್ಯೂಬ್ ಸಹಾಯದಿಂದ ಥೇಟ್ ಹೋಟೆಲ್ ಮೆನೂಗಳು ಲಿಸ್ಟ್‌ನಲ್ಲಿ ಬಂದವು. ಗುಲಾಬ್ ಜಾಮೂನು, ಟೊಮೇಟೋ ಸೂಪು, ಹರಬರ ಕಬಾಬ್, ಘೀ ರೈಸು, ದಾಲ್ ಜೊತೆಗೆ ನನ್ನದೂ ಕೊಸರಿರಬೇಕೆಂದು ಒಳ್ಳೇ ಟೊಮೇಟೋ ಸಾರು ಮಾಡಿ ತುಪ್ಪದಲ್ಲಿ ಇಂಗು ಒಗ್ಗರಣೆ ಹಾಕಿ ಹೊರಗೆ ಬಂದೆ. ಅಡುಗೆ ಮನೇಲಿದ್ದ ಇವರ ಚರ್ಚೆಗಳು ಜೋರಾಗಿ ನಡೆಯುತಿತ್ತು. ಬಾಣಲೆ ನೋಡೋ ಯಾವ್ ಹುಟ್ಟಿದೆ. ಮೊದ್ಲು ಬಿಸಾಡದನ್ನ, ನೋಡಿಲ್ಲಿ ಪಾತ್ರೆ ಜಿಡ್ಡು ಹೇಗ್ ಸ್ಟೋರಾಗಿದೆ, ಸ್ಪೂನ್ ಒಂದೇ ಸಮನೇ ಇಲ್ಲ! ಅಯ್ಯಪ್ಪಾ ಇಲ್ನೋಡು ಈ ಸ್ಟೀಲ್ ಡಬ್ಬಿ ಸೀಳಿದೆ ಕೈ ಚುಚ್ಚಿದ್ರೆ ಏನ್ಗತಿ ಬಿಸಾಕು. ನೀವೇನು ಅಡುಗೆ ಮಾಡ್ತಿದ್ದೀರೋ ಇಲ್ಲ ನನ್ನ ಪಾತ್ರೆಗಳ ಗುಣಗಾನ ಮಾತಾಡ್ತಿದ್ದೀರೋ ಎಂದು ಗದರಿದೆ. ನೋಡು ಅಡುಗೆ ಮನೆ ಇಟ್ಕೊಂಡಿರೋ ಹುಟ್ಟಾ ಇದು ಎಂದು ಮೂದಲಿಸಿದರು. ಅವರುಗಳು ಅಡುಗೆ ಮನೇಲಿ ನಿಂತು ಆ ಪಾತ್ರೆಗಳ ಬಗ್ಗೆ ಮಾತಾಡ್ತಿದ್ರೆ ನನ್ನ ಎದೆ ಒಡೆದುಹೋಗ್ತಿತ್ತು. ನಿಜವಾಗ್ಲೂ ಎಲ್ಲಿ ಬಿಸಾಡ್ಬಿಡ್ತಾರೋ ಅಂತ ಮನಸ್ಸೊಳಗೇ ಭಯ ಆಗ್ತಿತ್ತು. ಯಾಕಂದ್ರೆ ಪಾತ್ರೆಗಳೊಟ್ಟಿಗಿನ ನನ್ನ ಅದರ ಅವಿನಾಭಾವ ಸಂಬಂಧ ಅವರಿಗೇನು ಗೊತ್ತು! ಒಂದೊಂದರ ಹಿಂದೆಯೂ ಒಂದೊಂದು ಕಥೆ ಇದೆ. ದಿನವೂ ಅದರೊಟ್ಟಿಗೆ ನಾನು ಮಾತಾಡುತ್ತ ಅವುಗಳನ್ನು ಕಿಚಾಯಿಸುತ್ತ ಅವುಗಳನ್ನು ಮುದ್ದಿಸುತ್ತ ಹೀಗೇ ನನ್ನ ಅದರ ಬಾಂಧವ್ಯ! ಹೀಗಿರುವಾಗ ಒಂದು ದಿನ, ಅದರಲ್ಲೂ ಒಂದು ಹೊತ್ತು ಅಡುಗೆ ಮನೆಗೆ ನುಗ್ಗಿ ನನ್ನ ವಸ್ತುಗಳೊಟ್ಟಿಗೆ ಕೆಟ್ಟದಾಗಿ ಮಾತಾಡೋ ಇವರಿಗೆ ಧಿಕ್ಕಾರವಿರಲಿ. ಇವರಿಗ್ಯಾವ ಹಕ್ಕಿದೆ ಅದರ್ಮೇಲೆ! ಪರಿಸ್ಥಿತಿ ಎದುರಾದಾಗ ಸಂಭಾಳಿಸೋಣ, ಆಗಿದೆ ಇವ್ರಿಗೆ ಮಾರಿಹಬ್ಬ! ಎಂದುಕೊಂಡೆ ಮನದೊಳಗೇ!

ನನಗೆ ಮದುವೆಯಾದ ಹೊಸದು. ಈ ಬಾಣಲೆಗೂ ಹಾಗೇ 23ರ ವಯಸ್ಸು. ಅದೆಷ್ಟು ಗಟ್ಟಿ ಇದೆ. ಅದರಲ್ಲಿ ಜಾಮೂನು ಕರೆದರೆ ಹದವಾಗಿರುತ್ತೆ. ಅದನ್ನು ಅದಕ್ಕಾಗೆಂದೇ ಇಟ್ಟಿದ್ದೇನೆ. ಇನ್ನೂ ಹೆಚ್ಚು ಹೇಳ್ಬೇಕಂದ್ರೆ ನನ್ನಪ್ಪನಿಗೆ ಫ್ಯಾಕ್ಟರಿಯಲ್ಲಿ ದೀಪಾವಳಿಗೆ ಆಗ ಕೊಟ್ಟ ಗಿಫ್ಟ್ ಅದು. ಅದು ನನಗೆಂದೇ ಅಪ್ಪ ಕೊಟ್ಟಿದ್ದು. ಇಂಥ ಆಸ್ತಿ ಮೇಲೆ ಹೆಣ್ಮಕ್ಕಳಿಗಲ್ಲದೆ ಇನ್ಯಾರಿಗಾಸೆ ಇರುತ್ತೆ ಹೇಳಿ. ಇಂಥಾದ್ದನ್ನ ಬಿಸಾಕ್ತೀನಿ ಅಂಥಾರಲ್ಲ! ಅದೂ ಹ್ಯಾಂಡಲ್ಲು ಇಲ್ಲವೆನ್ನೋ ಒಂದೇ ಕಾರಣಕ್ಕೆ. ಇಕ್ಕಳ ಇಲ್ವಾ? ಇಲ್ಲಾ ಹೊಸ ಹ್ಯಾಂಡ್ಲು ಹಾಕಿಸಿದರೆ ಆಯ್ತಪ್ಪಾ! ಅಷ್ಟಕ್ಕೇ ಅದನ್ನ ಬಿಸಾಡೋದಾ. ಥೂ ಹೃದಯವಂತಿಕೆಯಿಲ್ಲದವರು!

ಇನ್ನು ಆ ಪ್ಯಾನ್. ದಪ್ಪ ತಳದ್ದು. ಅಂಥ ಮೆಟೀರಿಯಲ್ಲೇ ಈಗ ಬರೋಲ್ಲ. ಮಗ ಒಂದು ಒಂದೂವರೆ ವರುಷದ ಕೂಸದು. ನೀರಲ್ಲಿ ಆಡೋದಂದ್ರೆ ಅವನಿಗೆ ಬಲುಯಿಷ್ಟ. ಅಜ್ಜಿ ಮನೆಗೆ ಹೋದಾಗ ಅದರಲ್ಲಿ ನೀರಿಟ್ಟುಕೊಟ್ರೆ ತನ್ನೆರಡು ಕೈಗಳಿಂದ ಪಟಪಟವೆಂದು ಬಡಿಯುತ್ತಾ ಆಟವಾಡುತ್ತಿದ್ದ. ಅಜ್ಜಿ ಮನೆಯಿಂದ ಹೊರಡೋವಾಗ ಆ ಪಾತ್ರೆ ಬಿಟ್ಟು ಬರೋದಂದ್ರೆ ಪಾಪೂಗೆ ಎಲ್ಲಿಲ್ಲದ ಸಂಕಟ. ಕೆಲವೊಂದು ದಿನ ಹೊರಡೋ ಎರಡು ಗಂಟೆಗೂ ಮುಂಚೆ ಅದನ್ನು ಬಚ್ಚಿಡೋ ಪ್ಲಾನ್‌ಗಳು ನಡೀತಿದ್ವು. ಮಗುವನ್ನು ಯಾಮಾರಿಸಿ ಅಲ್ಲಿಂದ ಹೊರಟ ದಿನಗಳೆಷ್ಟೋ, ಮನೆಗೆ ವಾಪಸ್ಸಾಗಿ ಬಂದ್ಮೇಲೆ ಬಾಣಲೆ ನೆನಪಾಗಿ ರಚ್ಚೆ ಇಟ್ಟ ದಿನಗಳಿನ್ನೆಷ್ಟೋ! ನನ್ನ ಮಗನಿಗೂ ಆ ಬಾಣಲೆಗೂ ಸುಮಾರು ವರುಷಗಳ ಬಂಧ! ಕಡ್ ಕಡೆಗೇ ಅಜ್ಜಿ ಮನೇಗೆ ಹೋದ ತಕ್ಷಣ ಪುಟ್ಟ ಅಡುಗೆ ಮನೆಗೆ ಓಡ್ಹೋಗಿ ಪ್ಯಾನ್ ತಂದು ಕಾರಲ್ಲಿಟ್ಟು ನಿಟ್ಟುಸಿರು ಬಿಡುತ್ತಿದ್ದ. ಅವನಿಗೋ ಅದು ನನ್ನೊಟ್ಟಿಗೇ ಬರುತ್ತದೆಂಬ ಆತ್ಮವಿಶ್ವಾಸ! ಅವನನ್ನು ಯಾಮಾರಿಸಿ ಮತ್ತೆ ಸ್ವಸ್ಥಾನ ಸೇರಿಸೋದು ನಮ್ಮ ಗುರಿ (ಇಷ್ಟಾಗ್ಯೂ ಅತ್ತೆ ಒಮ್ಮೆಗೂ ಬಾಯ್ತುಂಬ, ಹೋಗ್ಲಿ ಮಗೂ ಆಸೆ ಪಡ್ತಿದೆ ತಗೊಂಡು ಹೋಗು ಎಂದು ಹೇಳುತ್ತಲೇ ಇರ್ಲಿಲ್ಲ!) ಕಾರಿಂದ ಇಳಿದೇಟಿಗೆ ಬಾಣಲೆ ಕಾಣದಕ್ಕೆ ಮತ್ತೆ ರಂಪ! ಕಡೆಗೊಂದು ದಿನ ಅಜ್ಜಿ ದೊಡ್ಡ ಮನಸ್ಸು ಮಾಡಿ (ಅದರ ಮೇಲಿನ ವ್ಯಾಮೋಹ ಬಿಡೋ ಹೊತ್ತಿಗೆ) ಚಿನ್ನ ಕೊಟ್ಟ ಹಾಗೆ ಅತ್ತೆ ಕೊಟ್ಟೇ ಬಿಟ್ಟರು. ಕೊಟ್ಟ ಗಳಿಗೆಯೋ ಅಥವಾ ಇವನೇ ದೊಡ್ಡವನಾಗಿದ್ದನೋ ಅಂದಿನಿಂದ ಇವ ಆ ಪ್ಯಾನ್ ಮುಟ್ಟಲೇಯಿಲ್ಲ! ಇಂಥಾದ್ದನ್ನು ಬಿಸಾಡೋಕ್ಕೆ ಆಗುತ್ತಾ. ಅದರ ಹಿಂದೆ ನನ್ನ ಮಗನ ಅಳುವಿನ ಅಧ್ಯಾಯಗಳೆಷ್ಟಿವೆ?

ಅಯ್ಯೋ ಅಯ್ಯೋ ಆ ಡಬ್ಬೀನಾ ಬಿಸಾಡೋದ. ನೋ ವೇ! ಅದರಲ್ಲಿ ಎಂಥ ವಿಸ್ಮಯ ಇದೆ ಗೊತ್ತಾ. ಅದು ನನ್ನಜ್ಜೀ ಆಗೆಲ್ಲಾ ಸ್ಟೀಲ್ ಪಾತ್ರೆಗೆ ಚೀಟಿ ಹಾಕ್ಸಿ ಕೊಡ್ಸಿದ್ದು. ಒಳ್ಳೆ ಸೇಲಂ ಸ್ಟೀಲ್ ಅದು. ಅಂಥಾದ್ದು ಬಿಸಾಡೋದ. ಸಾಧ್ಯವೇಯಿಲ್ಲ. ಹಾಂ ಆ ಸ್ಪೂನ್. ನಮ್ಮ ಗೌರಿಗೆ ಅವಳ ಫೇವರೇಟ್ ನೇತ್ರಾ ಆಂಟಿ ಮೊದಲ ಸಂಕ್ರಾಂತಿಗೆ ಕೊಟ್ಟಿದ್ದು. ಆ ಪಾತ್ರೇನಾ ನನ್ನ ಪೇವರೇಟ್ ಪದ್ಮಕ್ಕ ಕೊಟ್ಟಿದ್ದು. ನಾ ಕೊಡಲಾರೆ. ಅತ್ತೆ ಅಮ್ಮ ಅಕ್ಕ ತಂಗಿ ಪಾತ್ರೆಗಳನ್ನ ಕೊಡೋದು ಸರ್ವೇಸಾಮಾನ್ಯ. ಮಾವ ಎಲ್ಲಾನಾ ಕೊಡೋದನ್ನ ಕೇಳಿದ್ದೀರಾ. ನನ್ನ ಮಾವ ಒಳ್ಳೆ ಬಟರ್ ಪ್ಲೈ ಲೋಟಗಳೆಂದು ಅವರ ಹತ್ತಿರವಿದ್ದ 12 ಸ್ಟೀಲ್ ಲೋಟಗಳಲ್ಲಿ 2 ನ್ನು ನನಗೆ ಮದುವೆಯಾದ ಹೊಸದರಲ್ಲಿ ಕೊಟ್ರು. ಈಗದಕ್ಕೂ ವಯಸ್ಸಾಗಿ ಅಂಡಿಲ್ಲ. ಒಪ್ಕೋತೀನಿ ಆದ್ರೂ ಅದನ್ನು ಬಿಸಾಡೋ ಮನಸಿಲ್ಲ. ಈಗ್ಲೂ ಅದರಲ್ಲೇ ನಾ ಕಾಫಿ ಕುಡಿಯೋದು.

ಅಲ್ಲಿಂದ ತಟ್ಟೆ ಟ್ರಯಾಕ್‌ಗೆ ಅಪ್ಪ ಮಗನ ಕಣ್ಣು ಹಾಯಿತು. ಇದೇನೋ ಸೊಟ್ಟಂಬಟ್ಟ ಆಗ್ಹೋಗಿದೆ ಎಸಿಎಸಿ ಎಂದದ್ದೇ ತಡ. ಹೂಂ ಯಾಕ್ಹೇಳಿ....ಅದು ಎಲ್ಲೂ ಬಿಸಾಡೋ ಆಗಿಲ್ಲ. ನಿಮ್ಮ ಸಂಬಂಧಿ ನಮ್ಮ ಮದುವೇಲಿ ಅಣಕದ ಮಾತಾಡಿ ಈ ಗಿಫ್ಟ್ ನನ್ನ ಕೈಲಿಯಿತ್ತರು. ಅವರು ನೀಡಿದ ಪರಿ ನೋಡಿ ಭಾರಿ ಗಿಫ್ಟ್ ಎಂದೇ ಭಾವಿಸಿದ್ದೆ. ನೋಡಿದ್ರೆ ಈ ಸ್ಟೀಲ್ ತಟ್ಟೆ ಅದೂ ಒಂದೇ ಒಂದು! ಥೂ ಅವರಿಗೇನು ಬಂದಿತ್ತು. ಆಪಾಟಿ ಮೈತುಂಬ ವಡವೆ ಹಾಕೊಂಡು ಮೆರಿತಿದ್ರು. ನೋಡಿದ್ರೆ ಇಂಥಾ ಗಿಫ್ಟಾ. ಅವರ ನೆನಪಿಗೆ ಅದು. ನನ್ನೊಂದಿಗೇ ತಮ್ಮ ಜೀವನವನ್ನೂ ಸವೆಸುತ್ತಿರುವ ಇವುಗಳ ಜೊತೆಗಿನ ನನ್ನ ಸಂಬಂಧ ಅವರ್ಣನೀಯ. ಗೀತಾಳ ಕೋಪಕ್ಕೆ ತುತ್ತಾಗಿ ನೆಲಕ್ಕೆ ಕುಟ್ಟಿಸಿ ಕೊಳ್ತಿರುವರು, ರೇಖಾಳ ರೌಡಿಸಂಗೂ ಬಲಿಯಾಗುತ್ತಿರುವರು, ಆಗೆಲ್ಲಾ ನಿಸ್ಸಹಾಯಕಳಂತೆ ನಿಂತು ನೋಡುತ್ತಿರುವುದ ಬಿಟ್ಟು ಬೇರೆ ದಾರಿಯಿಲ್ಲ. ಅವರುಗಳಿಗೆ ಏನಾದ್ರೂ ಹೇಳಿದ್ರೆ ನಾಳೆಯಿಂದ ನಮ್ಮನೇಗೇ ಬರೋಲ್ಲ ಅಷ್ಟೇ! ಆಗ ಕೊಳಕಾದ ಅವರುಗಳಿಗೆ ಸ್ನಾನ ಮಾಡ್ಸಿ ಕ್ಲೀನ್ ಮಾಡೌರು ಯಾರು? ಒಮ್ಮೊಮ್ಮೆ ಗೀತಾಗೂ ಹೇಳಿದ್ದುಂಟು ನನ್ನ ಮುಂದಿನ ಪೀಳಿಗೆಗೆ ಇರ್ಲಿ ಕಣೇ ಎಂದೇಟಿಗೆ ಅಯ್ಯೋ ಬಿಡಿ ಸವಿತಕ್ಕ ಬರೋ ಸೊಸೆ ಇದನ್ನೆಲ್ಲಾ ಎಲ್ಲಿ ಉಪಯೋಗಿಸ್ತಾರೆ....ಇವಕ್ಕೆಲ್ಲಾ ಬೇಗ ಮುಕ್ತಿಕೊಡ್ಸಿ ಎಂದು ಮತ್ತೆ ಕುಕ್ಕುತ್ತಿದಳು! ನನ್ನ ಹೃದಯವೇ ಬಾಯಿಗೆ ಬಂದಂತಾಗುತಿತ್ತು. ಆ ದಿನದ ಕಡೆಗೆ ಒಂದು ಬೈಗಳು ಸಿಕ್ಕಿತು. ಇನ್ಮೇಲೆ ವಾಟ್ಸ್‌ಆಪ್ಪು, ಫೇಸ್ ಬುಕ್ಕಲ್ಲಿ ನಮ್ಮೇಲೆ ಅರ್ಥಾತ್ ಗಂಡಸರ ಮೇಲೆ ಕಮೆಂಟ್‌ಗಳನ್ನ ಹಾಕ್ತೀಯ. ಅದೇನದು...'ಒಂದು ದೊಡ್ಡ ಸಲ್ಯೂಟು, ರಜೆ ತೆಗೆದುಕೊಳ್ಳದ ಗೃಹಿಣಿಗೆ, ಹೊರಗಿನ ಊಟತಿಂಡಿಯಿಲ್ಲ, ಶಾಲೆಗಳಿಲ್ಲ, ಆಫೀಸಿಲ್ಲ, ಕೆಲಸದವಳು ಬರೋಹಾಗಿಲ್ಲ, ಆದ್ರೂ ಗೃಹಿಣಿಯರು ಕೆಲಸ ಮಾಡ್ತಾನೇ ಇದ್ದಾರೆ ತಮ್ಮ ಮನೇಲೇ, ಕ್ಲಾಪ್ ಮಾಡಿ ಇವರಿಗೆ'...ಇವುಗಳನ್ನ ಫಾರ್ವಡ್ ಮಾಡಿ ಬೇರೆ ಹೆಂಗಸರನ್ನು ರೊಚ್ಚಿಗೆಬ್ಬಿಸ್ತಿದ್ದೀಯಾ? ಇರುಇರು ಪಾತ್ರೆಗಳನ್ನ ಬಿಸಾಕ್ತೀನಿ ಎಂದು ಬ್ಲಾಕ್‌ಮೇಲ್ ಶುರುವಾಯ್ತು! ಇವರ ಆಟ ಆರ್ಭಟಗಳಿಗೆ ಮೂಕಳಾದೆ. ಪಾತ್ರೆಗಳ ಮೋಹದಿಂದಾಗಿ ತೆಪ್ಪಗಾದೆ!

■



# ಒಂದು ಗುಬ್ಬಚ್ಚಿಯ ನಂಬಿಕೆಯ ಕತೆ (ಮಹಾಭಾರತದ ಕಥೆಯಿಂದ...)

*ಅಪರಂಜಿಗೆ ಕಳುಹಿಸಿದವರು:*

**। ಸುಧೀಂದ್ರ ಬಾಟ್ನಿ**

ಮಹಾಭಾರತದ ಕುರುಕ್ಷೇತ್ರ ಯುದ್ಧಕ್ಕೆ ಸೈನ್ಯದ ಮತ್ತು ಆನೆಗಳ ಕುದುರೆಗಳ ರಥದ ಚಲನೆಗೆ ರಣರಂಗದ ಸಿದ್ಧತೆಯು ನಡೆಯುತ್ತಿತ್ತು. ಅದಕ್ಕಾಗಿ ಆನೆಗಳನ್ನು ದೊಡ್ಡ ದೊಡ್ಡ ಮರಗಳನ್ನು ಉರುಳಿಸಿ ನೆಲವನ್ನು ಸಮತಟ್ಟು ಮಾಡಲು ಉಪಯೋಗಿಸುತ್ತಿದ್ದರು.

ಅಲ್ಲಿಯ ಒಂದು ಮರದಮೇಲೆ ಒಂದು ಸಣ್ಣ ಗುಬ್ಬಚ್ಚಿಯು ತನ್ನ ನಾಲ್ಕು ಮರಿಗಳೊಂದಿಗೆ ವಾಸಿಸುತ್ತಿತ್ತು. ಹಾಗಿರುವಾಗ ಅದು ವಾಸವಾಗಿದ್ದ ಮರವನ್ನು ಉರುಳಿಸಲಾಗಿ ಗುಬ್ಬಚ್ಚಿಯ ಗೂಡು ತನ್ನ ಮರಿಗಳೊಂದಿಗೆ ನೆಲಕ್ಕೆ ಬಿತ್ತು.

ದೇವರ ದಯೆಯಿಂದ ಮರಿಗಳು ಬದುಕಿ ಉಳಿದವು...

ಆದರೆ ಮರಿಗಳು ಇನ್ನು ಸಣ್ಣದಾದ ಕಾರಣ ಅವುಗಳಿಗೆ ಹಾರಾಡಲು ತಿಳಿದಿರಲಿಲ್ಲ. ಬಿದ್ದ ಮರಿಗಳಿಗೆ ತೊಂದರೆ ಆಗಲಿಲ್ಲ.

ದುರ್ಬಲ ಮತ್ತು ಹೆದರಿದ ಗುಬ್ಬಚ್ಚಿಯು ಸಹಾಯಕ್ಕಾಗಿ ಸುತ್ತ ನೋಡಲು ದೂರದಲ್ಲಿ ಶ್ರೀ ಕೃಷ್ಣ, ಅರ್ಜುನನ ಜೊತೆಗೆ ಸಮರಾಂಗಣವನ್ನು ವೀಕ್ಷಿಸುವುದನ್ನು ಕಂಡಿತು

ಅದನ್ನು ನೋಡುತ್ತಲೇ ಗುಬ್ಬಚ್ಚಿಯು ತನ್ನ ಸಣ್ಣ ಸಣ್ಣ ರೆಕ್ಕೆಗಳನ್ನು ಬಡಿಯುತ್ತ ಶ್ರೀ ಕೃಷ್ಣನ ರಥದ ಬಳಿಗೆ ಹೋಗಿ,

"ಹೇ ಕೃಷ್ಣ ನನ್ನ ಕಂದಮ್ಮಗಳನ್ನು ಉಳಿಸು, ಇಲ್ಲದಿದ್ದರೆ ನಾಳೆ ಯುದ್ಧ ಆರಂಭವಾದಾಗ ನನ್ನ ಮರಿಗಳು ಕಾಲಿನಡಿಗೆ ಬಿದ್ದು ನಾಶವಾಗುತ್ತವೆ..." ಎಂದಿತು.

ಆಗ ಶ್ರೀಕೃಷ್ಣ "ನನಗೆ ನಿನ್ನ ಮಾತು ಕೇಳುತ್ತಿದೆ... ಆದರೆ ನಾನು ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ಏನನ್ನು ಮಾಡಲಾರೆ. ಮಾಡಲಾಗುವುದಿಲ್ಲ..."

ಆಗ ಗುಬ್ಬಚ್ಚಿಯು...

"ಅದು ನನಗೆ ತಿಳಿದಿದೆ, ಆದರೆ ನೀನು ಜಗದ್ರಕ್ಷಕ, ನಾನು ನನ್ನ ಮಕ್ಕಳ ಕ್ಷೇಮವನ್ನು ನಿನ್ನ ಕೈಯಲ್ಲಿಡುತ್ತಿದ್ದೇನೆ, ಅವುಗಳನ್ನು ನೀನು ನಾಶ ಪಡಿಸಬಹುದು, ಇಲ್ಲ ಪೊರೆದು ಸಲಹ ಬಹುದು. ಅದು ನಿನಗೆ ಬಿಟ್ಟಿದ್ದು."

ಆಗ ಶ್ರೀ ಕೃಷ್ಣ... "ಜನ ಸಾಮಾನ್ಯರಂತೆ... ಕಾಲಚಕ್ರವು ತನ್ನಷ್ಟಕ್ಕೆ ತಾನೇ ಸುತ್ತುತ್ತದೆ ಯಾವುದೇ ಅಡೆತಡೆಗಳಿಲ್ಲದೆ... ಹಾಗಾಗಿ ನಾನು ಏನನ್ನು ಮಾಡಲಾರೆ.."

"ಈ ಎಲ್ಲ ತತ್ವಶಾಸ್ತ್ರ ನಾನರಿಯೆ, ನಾನರಿತಿರುವುದು ನೀನೇ ಕಾಲ, ಕಾಲನಿಯಾಮಕ, ಜಗದ್ರಕ್ಷಕ. ಹಾಗಾಗಿ ನಾನು ನಿನಗೆ ಶರಣಾಗಿದ್ದೇನೆ..."

ಅದಕ್ಕೆ ಶ್ರೀಕೃಷ್ಣ "ಹಾಗಿದ್ದರೆ ಮೂರು ವಾರಕ್ಕೆ ಬೇಕಾಗುವಷ್ಟು ಆಹಾರವನ್ನು ನಿನ್ನ ಗೂಡಿನಲ್ಲಿ ಸಂಗ್ರಹಿಸಿಡು."

ಇದನ್ನು ಅರಿಯದ ಅರ್ಜುನ ಗುಬ್ಬಚ್ಚಿಯನ್ನು ನೋಡಿ ಅದನ್ನು ರಥದ ಸನಿಹದಿಂದ ಓಡಿಸುವ ಪ್ರಯತ್ನದಲ್ಲಿರಲು.. ಕೃಷ್ಣ ಗುಬ್ಬಚ್ಚಿಯತ್ತ ಒಂದು ಮುಗುಳುನಗೆ ಬೀರಲು ಅದು ತನ್ನ ರೆಕ್ಕೆ ಬಡಿದು ಧನ್ಯವಾದಗಳನ್ನು ಹೇಳಿ ಸಂತೋಷದಿಂದ ಹಾರಿ ಹೋಯಿತು.

ಮತ್ತೆರಡು ದಿನಗಳ ಬಳಿಕ ಯಾವಾಗ ಯುದ್ಧಾರಂಭದ ಶಂಖನಾದ ಕೇಳಿಸಿತೋ, ಆಗ ಕೃಷ್ಣ ಅರ್ಜುನನ ಬಳಿ ಅವನ ಬಿಲ್ಲುಬಾಣವನ್ನು ಕೇಳಲು, ಆಶ್ಚರ್ಯ ಚಕಿತನಾದ ಅರ್ಜುನ.. "ಹೌದು ನೀನು ರಣರಂಗದಲ್ಲಿ ಅಸ್ತ್ರವನ್ನು ಎತ್ತಲಾರೆ ಅಂದಿದ್ದೆ"

ಮತ್ತೇಕೆ ....

ಅಲ್ಲದೆ ತನ್ನಂತ ಮೇಧಾವಿ ಬಿಲ್ಲುಗಾರನಿರಲು ಕೃಷ್ಣನೇಕೆ ಅಸ್ತ್ರ ಹಿಡಿಯಬೇಕು ಎನ್ನುವ ಮನೋಭಾವದಿಂದ...

"ಹೇ ಕೃಷ್ಣ ಹೇಳು ಎಲ್ಲಿ ಯಾರನ್ನು ಹೊಡೆದುರುಳಿಸಬೇಕು..."

ಶ್ರೀ ಕೃಷ್ಣ ಮಾತನಾಡದೆ,

ಅರ್ಜುನನ ಕೈಯಿಂದ ಬಿಲ್ಲುಬಾಣ ತೆಗೆದುಕೊಂಡು ದೂರದಲ್ಲಿದ್ದ ಆನೆಯತ್ತ ಗುರಿಹಿಡಿದು ಅದನ್ನು ಹೊಡೆದುರುಳಿಸದೆ ಅದರ ಕುತ್ತಿಗೆಯ ಘಂಟೆಗೆ ಗುರಿಯಿಟ್ಟು ಅಲ್ಲಿ ಕಿಡಿಗಳು ಹಾರುವಂತೆ ಮಾಡಿದ. ಘಂಟೆ ಕೆಳಗೆ ಬೀಳುವಂತೆ ಮಾಡಿದ.

ಸುಲಭವಾಗಿ ಹೊಡೆಯಬೇಕಾದುದನ್ನು ಹೊಡೆಯದೆ ತಪ್ಪುಗುರಿಯಿಟ್ಟದ್ದನ್ನು ಕಂಡ ಅರ್ಜುನ...

"ನಾನು ಹೊಡೆಯಲೇ..."

ಅದಕ್ಕುತ್ತರಿಸದೆ, ಕೃಷ್ಣ ಆತನ ಬಿಲ್ಲುಬಾಣವನ್ನು ಆತನಿಗೆ ಹಿಂದಕ್ಕೆ ಕೊಟ್ಟು...

"ಅದರ ಅಗತ್ಯವಿಲ್ಲ, ನನ್ನ ಕೆಲಸವಾಯಿತು.."

"ಹೌದು, ಯಾತಕ್ಕಾಗಿ ಆನೆಗೆ ಗುರಿಯಿಟ್ಟೆ ಕೇಶವ..."

"ಈ ಆನೆಯು ಆ ಗುಬ್ಬಚ್ಚಿ ವಾಸವಾಗಿದ್ದ ಮರವನ್ನು ಉರುಳಿಸಿತ್ತು, ಆದರೆ ಗುಬ್ಬಚ್ಚಿಗೆ ಹಾನಿಯಾಗಿರಲಿಲ್ಲ ಆದ್ದರಿಂದ, ಆನೆಗೆ ಹಾನಿ ಮಾಡದೆ ಕೇವಲ ಅದರ ಕುತ್ತಿಗೆಯ ಘಂಟೆ ಹೋಯಿತು.." ಎಂದು ಹೇಳಿದ.

ಕೃಷ್ಣ, ಶಂಖವನ್ನು ಊದುವಂತೆ ಹೇಳಲು... ಶಂಖನಾದದೊಂದಿಗೆ

ಯುದ್ಧ ಆರಂಭವಾಯಿತು...ಸಹಸ್ರಾರು ಜೀವಹಾನಿಯಾಯಿತು ಆ ಕುರುಕ್ಷೇತ್ರದ 18 ದಿನದ ಯುದ್ಧದಲ್ಲಿ ಪಾಂಡವರು ವಿಜಯಶಾಲಿಗಳಾದರು.

ಮತ್ತೆ ಶ್ರೀಕೃಷ್ಣ ಅರ್ಜುನನ ಜೊತೆಗೆ ಯುದ್ಧ ಭೂಮಿಯ ವೀಕ್ಷಣೆಗೆ ಹೊರಟ..

ಹಲವು ಹೆಣಗಳು ಅವುಗಳ ಅಂತ್ಯಕ್ರಿಯೆಗೆ ಕಾಯುವಂತಿತ್ತು. ರಣರಂಗದಲ್ಲಿ ತುಂಡಾದ ಕೈಗಳು... ಜರ್ಜರಿತವಾದ ದೇಹಗಳು.. ಅರೆಬರೆ ಸತ್ತ ಆನೆಗಳು...

ಒಮ್ಮೆಲೇ ಕೃಷ್ಣ ಅಲ್ಲೇ ನಿಂತು ಅಲ್ಲಿ ಬಿದ್ದಿರುವ ಆನೆಯ ಘಂಟೆಯತ್ತ ನೋಡಿದ...

ಹೇ ಅರ್ಜುನ ನನಗಾಗಿ ಆ ಆನೆಯ ಘಂಟೆಯನ್ನು ಎತ್ತು...

ಶ್ರೀಕೃಷ್ಣನ ಆದೇಶ ವಿಶೇಷವಲ್ಲದಿದ್ದರೂ ಏನೋ ಅರ್ಥವಾದವನಂತೆ...

ಈ ಯುದ್ಧಭೂಮಿ... ವಿಶಾಲವಾದ ಕ್ಷೇತ್ರದಲ್ಲಿ ಸಾಕಷ್ಟು ಇತರ ವಿಷಯಗಳನ್ನು ತೆರವುಗೊಳಿಸುವ ಅಗತ್ಯವಿದೆ. ಹಾಗಿರುವಾಗ ಈ ಒಂದು ಸಣ್ಣ ಘಂಟೆಯನ್ನು ಯಾಕೆ ಎತ್ತಲು ಹೇಳಿದ... ಎನ್ನುವಂತೆ ಕೃಷ್ಣನತ್ತ ಪ್ರಶ್ನಿಸುವಂತೆ ನೋಡಲು...

ಹೌದು ಇದು ಅದೇ ಘಂಟೆ... ನಾನು ಆನೆಗೆ ಹೊಡೆದು ಉರುಳಿಸಿದ ಘಂಟೆ

ಅರ್ಜುನನು ಮರುಮಾತಿಲ್ಲದೆ ಘಂಟೆಯನ್ನು ಎತ್ತಲು ಬಾಗಿ ಅದನ್ನು ಎತ್ತಿದಾಗ... ಅರ್ಜುನನ ಪ್ರಪಂಚವೇ ಬದಲಾಯಿತು... ನೋಡುತ್ತಿದ್ದಂತೆ...

ಒಂದು ಎರಡು ಮೂರು ನಾಲ್ಕು... ನಾಲ್ಕು ಮರಿಗಳು ಮತ್ತು ತಾಯಿ ಗುಬ್ಬಚ್ಚಿ ಹಾರುತ್ತಲೇ ತಾಯಿ ಗುಬ್ಬಚ್ಚಿಯು ಹಾರಿ... ಸಂತಸದಲ್ಲಿ ಹಾರುತ್ತಲೇ ಶ್ರೀಕೃಷ್ಣನಿಗೆ ಸುತ್ತು ಬಂದು ತನ್ನ ಕೃತಜ್ಞತೆಯನ್ನು ತೋರಿಸಿತು..

ಆ ಒಂದು ಘಂಟೆ...

18 ದಿನ.....

ಗುಬ್ಬಚ್ಚಿ ಮತ್ತು ಸಂಸಾರಕ್ಕೆ ರಕ್ಷಣೆ ಕೊಟ್ಟಿತ್ತು.


"ಕ್ಷಮಿಸು ಕೃಷ್ಣ .. ನಿನ್ನನ್ನು ನರರೂಪದಲ್ಲಿ ಕಂಡು ಸಾಮಾನ್ಯ ಮನುಜರಂತೆ ನಾನು ನೀನಾರೆಂಬುದನು ಮರೆತೆ..."

ಮಹಾಭಾರತದ ಈ ಕಥೆ ಲಾಕ್ ಡೌನ್ ಸಮಯದಲ್ಲಿ ಉಚಿತವೆನಿಸಿತು.

ಘಂಟೆಯೊಳಗೆ ಕುಳಿತು ಜೀವ ಬದುಕಿಸಿಕೊಂಡಂತೆ...

ಮನೆಯೊಳಗಿದ್ದು ಅಮೂಲ್ಯ ಜೀವವನ್ನು ಉಳಿಸಿಕೊಳ್ಳೋಣ...

■



# ನ್ಯೂ ವರ್ಷ್‌ನ್ ಗಾದೆಗಳು.!!


। ವಾಟ್ಸಪ್‌ನಿಂದ

- ಕೈ ಕೆಸರಾದರೆ ಸೈನಟೈಜರ್ ಹಾಕಿ ತೊಳ್ಕೊ
- ಒಗ್ಗಟ್ಟಿನಲ್ಲಿ ಕರೋನ ಇದೆ!
- ಉಪ್ಪಿಗಿಂತ ರುಚಿಯಿಲ್ಲ, ವೈದ್ಯರಿಗಿಂತ ದೇವರಿಲ್ಲ
- ಮಾತು ಆಡಿದರೆ ಹೋಯ್ತು, ಮುತ್ತು ಕೊಟ್ಟರೆ ಹೊಯ್ತು
- ಕೆಟ್ಟು ಹಳ್ಳಿ ಸೇರು
- ಮಾತು ಬಲ್ಲವನಿಗೆ ಜಗಳವಿಲ್ಲ, ಮಾಸ್ಕ್ ಧರಿಸಿವನಿಗೆ ರೋಗವಿಲ್ಲ
- ಮಾತು ಮನೆ ಕೆಡುಸ್ತು, ಕರೋನ ಪ್ರಪಂಚ ಕೆಡುಸ್ತು.
- ಮನೇಲಿದ್ದೋನೆ ಮಹಾಶೂರ, ಹೊರಬಿದ್ದವ ಹರೋಹರ..
- ಬೆಂಗಳೂರಿನಿಂದ ಬಂದಾಗ ಹೋದ ಮಾನ, ಮಾಸ್ಕ್, ಸ್ಯಾನಿಟೈಸರ್ ಹಾಕ್ಕೊಂಡು ತಿರುಗಿದರೂ ಬಾರದು.
- ಮಾಸ್ಕು ಬೆಳ್ಳಿ, Distance ಬಂಗಾರ!
- ಉಪ್ಪಿಗಿಂತ ರುಚಿ ಇಲ್ಲ, ಕರೋನಗಿಂತ ರೋಗವಿಲ್ಲ!
- ಮುಖಕ್ಕೆ ಮಾಸ್ಕ್ ಇಲ್ಲ ಅಂದ್ರೂ ಕೈಗೆ ಸಾನಿಟೈಜರ್ ಬೇಕಂತೆ
- ಪ್ಲೇಗಿಗೊಂದು ಕಾಲ, ಕರೊನಕ್ಕೊಂದು ಕಾಲ
- ಕೆಮ್ಮಿದ್ದೆಲ್ಲಾ ಕೊರೋನಾ ಅಲ್ಲ, ಕೈಲಿದ್ದಿದ್ದೆಲ್ಲಾ ಸೈನಟೈಝರ್ ಅಲ್ಲ
- ಸುಮ್ಮನೆ ಇರಲಾರದೆ ಕೊರೋನಾ ಬಿಟ್ಕೋಂಡ್ರಂತೆ
- ಕರೀನಾಗೊಂದು ಕಾಲ, ಕೊರೊನಾಗೊಂದು ಕಾಲ..
- ಬೀದೀಲಿ ಕೆಮ್ಮಿ ನೋಡು, ಹಾದೀಲಿ ಸೀನಿ ನೋಡು.

■

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.




## ಉತ್ತರಭೂಪ
## ಪ್ರಶ್ನೋತ್ತರಗಳ
## ಸಂಗ್ರಹ

# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
**10%** ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**

**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**

ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಹಿಂದಿನ ದಿನಗಳಲ್ಲಿ ಮನೋರಂಜನೆ


**। ಕಮಲಾ ಸಿಡೇನೂರ**

ನಮ್ಮ ಬಾಲ್ಯದ ದಿನಗಳಲ್ಲಿ ಮಾಧ್ಯಮಿಕ ಶಾಲೆಗೆ ಹೋಗುವಾಗ್ಗೆ ಮನೋರಂಜನೆ ಅಂದರೆ ಸಿನಿಮಾ ನೋಡುವುದು, ಅದೂ ಗೆಳತಿಯರೆಲ್ಲ ಕೂಡಿಕೊಂಡು ಮಧ್ಯಾಹ್ನ ಮ್ಯಾಟಿನಿ ಶೋಗೆ ಮಾತ್ರ. ಅಷ್ಟಕ್ಕೆ ಮಾತ್ರ ನಮ್ಮ ಸ್ವಾತಂತ್ರ್ಯ ಸೀಮಿತವಾಗಿದ್ದ ಸಮಯ. ಅಂತಹುದರಲ್ಲಿ ಇಂತಹ ಒಂದು ಅವಿಸ್ಮರಣೀಯ ಸಿನಿಮಾ ಆವಾಂತರ ಘಟನೆಯನ್ನು ತಮ್ಮಲ್ಲಿ ಹಂಚಿಕೊಂಡಿದ್ದೇನೆ. ಆಗತಾನೆ ನಮ್ಮ ಪರೀಕ್ಷೆ ಮುಗಿದಿದ್ದರಿಂದ ಮನೆಯಲ್ಲಿ ಸಿನಿಮಾಕ್ಕೆ ಹೋಗಲು ಅಪ್ಪಣೆ ಸಿಗಬಹುದೆಂಬ ಆಸೆಯು. ಆದರೆ ನಮ್ಮ ಗೆಳತಿಯರ ಸಂಘದ 'ರಾಣಿ'ಗೆ ಮಾತ್ರ ಅವರ ಮನೆಯಿಂದ ಅಪ್ಪಣೆ ಸಿಕ್ಕಿದ್ದಿಲ್ಲ. ಇದಕ್ಕೆ ಕಾರಣ ಅವರ ಮನೆಯ ಅಂದಿನ ಯಜಮಾನಿ ಅವಳ ಅಜ್ಜಿಯೇ ಇದಕ್ಕೆ ಮೊಹರು ಒತ್ತಬೇಕು. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂದು ನಿಶ್ಚಯಿಸಿ, ಒಬ್ಬಳನ್ನು ಅದಕ್ಕೆ ಪುಸಲಾಯಿಸಿ ರಾಯಭಾರಿ ಮಾಡಿದೆವು. ಅವಳ ಎಲ್ಲ ಪ್ರಯತ್ನವೂ ಏನೋ ಶುರುವಾಯಿತು, ಆದರೆ ಫಲಿಸುವ ಆಸೆ ಕಾಣಲಿಲ್ಲ. ಕೊನೆಗೆ ಒಂದು ಬ್ರಹ್ಮಾಸ್ತ್ರ ಬಿಟ್ಟಿದ್ದಾಯಿತು. ಅದೇನೆಂದರೆ "ನಾವು ಹೋಗುವ ಸಿನಿಮಾದ ಹೀರೋಯಿನ್ ಥೇಟ ನಿಮ್ಮ ಮೊಮ್ಮಗಳ ಹಾಗೆಯೇ ಇದ್ದಾಳೆ. ನಾವೆಲ್ಲರೂ ಕೂಡಿ ಮೊದಲನೇ ಸಲ ಸಿನಿಮಾ ನೋಡುತ್ತಿದ್ದೇವೆ" ಎಂದು ಬಣ್ಣಿಸಿ ಅಜ್ಜಿಯನ್ನು ಒಲಿಸಿದ್ದಾಯಿತು. ಅವರ ಮನೆಯಿಂದಲೇ ನಮ್ಮೆಲ್ಲರ ದಿಬ್ಬಣ ಥಿಯೇಟರ್‌ಗೆ ಹೋಗುವುದು, ಅದೂ ಅಜ್ಜಿಯ ಸಮಕ್ಷಮ ಎಂದೂ ನಿಶ್ಚಯಿಸಲಾಯಿತು. ನಾವು ಆರಿಸಿದ ಸಿನಿಮಾ ಹಿಂದಿ ಚಲನಚಿತ್ರ "ಬೈಜು ಬಾವರಾ". ಅದರಲ್ಲಿ ಹಾಡುಗಳು ಚೆನ್ನಾಗಿವೆ ಅಲ್ಲದೆ ಐತಿಹಾಸಿಕದ್ದು ಎಂದು ಹೇಳಿ ಹೊರಟಿದ್ದಾಯಿತು.

ಧಾರವಾಡದ ಮಾರ್ಕೆಟ್‌ನಲ್ಲಿಯ ಒಂದು ಥಿಯೇಟರ್, ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಆಸನ ವ್ಯವಸ್ಥೆ– ಬೆಂಚುಗಳೇ ಆಸನ. ಎಲ್ಲ ತರಹದ ಜನರು ಅದರಲ್ಲೂ ತಾಯಂದಿರು ಮಕ್ಕಳು ಮರಿಸಹಿತ ಪ್ರತ್ಯಕ್ಷ. ಹೆಣ್ಣುಮಕ್ಕಳು ಕೈಯಲ್ಲಿ ಒಂದು, ಕಂಕುಳಲ್ಲಿ ಒಂದು ಮಕ್ಕಳ ಜೊತೆಗೆ ತಮ್ಮದೊಂದೇ ಟಿಕೆಟ್‌ನಲ್ಲಿ (ಆಗಿನ ಟಿಕೆಟ್ ದರ 5 ಆಣೆ) ಸಹಿತ ಪ್ರತ್ಯಕ್ಷ. ಅಂತೂ ಸಿನಿಮಾ ಶುರುವಾಯಿತು. ಒಂದು ತಾಸು ಆಗಿರಬೇಕು. ನಮ್ಮ ಕಾಲಿನಲ್ಲಿ ಏನೋ ಹಸಿ ಹಸಿಯಾದಂತಾಯಿತು. ಬಗ್ಗಿ ನೋಡಿದರೆ, ನೀರಿನಂತಹದು! ಹಿಂದಿರುಗಿ ನೋಡಿದಾಗ ತಾಯಂದಿರು ಮಕ್ಕಳನ್ನು ಅಲ್ಲಿಯೇ ಮೂತ್ರ ಮಾಡಿಸಿದ್ದರು. ಏನೂ ಅನ್ನುವ ಹಾಗಿಲ್ಲ. 'ಬಾಕ್ಸ್ ಆಫೀಸ್' ನಮ್ಮದು. ಕಣ್ಣುಗಳನ್ನು ಪಿಳುಕಿಸದೆ ಏಕಾಗ್ರಚಿತ್ತದಿಂದ "ಬೈಜು ಬಾವರಾ" ಚಿತ್ರದಲ್ಲಿ ತಲ್ಲೀನರಾದೆವು. ಕೊನೆಯ ದೃಶ್ಯದಲ್ಲಿ ಮೀನಾಕುಮಾರಿ ಅಂದರೆ ನಾಯಕ ನಾಯಕಿಯರೇ ಸಾವಿನ ದೃಶ್ಯ. ಅದನ್ನು ನೋಡಿ ನಮ್ಮ ಗುಂಪಿನ ಇಬ್ಬರು ಗೆಳತಿಯರು ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದರು. ಈಗ ಅವರನ್ನು ಗದರಿಸುವ ಕೆಲಸ ನಮ್ಮ ಹಿಂದೆ ಕುಳಿತ ತಾಯಂದಿರದು. "ಏನ ಇಷ್ಟು ದೊಡ್ಡಕಿ ಆಗಿ ತಿಳಿಯುದಿಲ್ಲೇನು? ಅಕ್ಕಿ ಖರೆ ಸತ್ತಿಲ್ಲ, ಸಿನಿಮಾದಾಗ ಮಾತ್ರ" ಅಂತ ನಮಗೆ ಸಮಜಾಯಿಷಿ ಹೇಳಿದರು. ನಾವು ಥಿಯೇಟರ್‌ನಿಂದ ಹೊರಗೆ ಬಂದಾಗ್ಗೆ ನನ್ನ ಕಣ್ಣೀರಧಾರೆ ಗೆಳತಿಯರ ಮುಖ ಊದಿ ಕೆಂಪಾಗಿದ್ದನ್ನು ಕಂಡು ಗೇಟ್ ಕೀಪರ್ ಮುಸಿಮುಸಿ ನಗುತ್ತಿದ್ದ.

ಅಂತೂ ಸಂಜೆಗೆ ಎಲ್ಲರೂ ಮನೆಗೆ ಹಿಂತಿರುಗುವಾಗ ನಮ್ಮ ಗೆಳತಿಯ ಅಜ್ಜಿಗೆ ವಂದನೆಗಳನ್ನು ತಿಳಿಸುತ್ತ "ಅಜ್ಜಿ ನಿಮ್ಮ ಮೊಮ್ಮಗಳು ಹೀರೋಯಿನ್‌ಕಿಂತ ಒಂದು ಕೈ ಮೇಲು" ಎಂದು ಹೇಳಿದಾಗ ಅಜ್ಜಿಯು ಮೊದಲನೇ ಸಲ ನಮ್ಮ ಜೊತೆ ಸರಿಯಾಗಿ ಮಾತನಾಡಿಸಿ ನಕ್ಕದಾಯಿತು.

ಇನ್ನು ಎರಡನೇ ಪ್ರಕರಣ ಸಿನಿಮಾದ್ದು. ನಾನು ನನ್ನ ಮಕ್ಕಳನ್ನು ಕರೆದುಕೊಂಡು ಪೌರಾಣಿಕ ಸಿನಿಮಾ (ರಾಜಕುಮಾರ ದ್ವಿಪಾತ್ರದಲ್ಲಿ ನಟಿಸಿರುವ 'ಬಬ್ರುವಾಹನ') ತೋರಿಸಲು ಕರೆದೊಯ್ದಿದ್ದೆ. ಈ ಸಲ ನಿಜವಾಗಿ ಬಾಕ್ಸ್ ಆಫೀಸ್ ಟಿಕೆಟ್ ಖರೀದಿ ಮಾಡಿದ್ದೆ. ಕೆಲವು ತಾಕೀದಗಳೊಂದಿಗೆ ಮಕ್ಕಳೊಡಗೂಡಿ ಸಿನಿಮಾ ಹಾಲಲ್ಲಿ ಕೂತಿದ್ದಾಯ್ತು. ಅಟ್ಟದ ಮೇಲಿನ ಸ್ಥಳ ಬಾಕ್ಸ್ ಆಫೀಸು ಸ್ವಲ್ಪ ಡಿಸೆಂಟ್ ಆಗಿರುವ ಜನ ಕೂಡುವ ಸ್ಥಳವಾಗಿತ್ತು. ಸಿನೆಮಾ ಶುರುವಾಯಿತು. ನನ್ನ ಮಕ್ಕಳ ಆಸನಗಳ ಎಕ್ಸ್‌ಚೇಂಜ್ ಕಾರ್ಯಕ್ರಮ ಶುರುವಾಯಿತು. ಆ ಸಿನಿಮಾದಲ್ಲಿ ಮೊದಲ ಅರ್ಧ ಭಾಗ ಪ್ರೇಮ ಸಲ್ಲಾಪಗಳಿವೆ, ಪ್ರಮುಖವಾಗಿ ಅರ್ಜುನ ಮತ್ತು ಉಲೂಪಿಯರ ಪ್ರಸಂಗ. ನನ್ನ ಮಗ ಚಿಕ್ಕವನಿದ್ದುದರಿಂದ ಅವನು, "ಅಮ್ಮ ಆಕೀ ಹಿಡಿಬ್ಯಾಡಾ ಅಂತಾಳ. ಇಂವಾ ಯಾಕ ಹಂಗ ಮಾಡ್ತಾನ?" ಪದೇ ಪದೇ ಅದೇ ಪ್ರಶ್ನೆ ಕೇಳುತ್ತಿದ್ದ. ನಮ್ಮ ಸುತ್ತಲಿನ ಕುಳಿತ ಬಾಕಿ ಪ್ರೇಕ್ಷಕರ ಎಲ್ಲರಿಗೂ ನಗೆಯೋ ನಗೆ. ನನಗೆ ಉತ್ತರವೇ ಹೊಳೆಯಲಿಲ್ಲ. ಕೊನೆಗೂ ಅವನಿಗೆ ಇಷ್ಟವಾಗುವ ದೃಶ್ಯ ಬಂದಿತು. ಅರ್ಜುನ–ಬಬ್ರುವಾಹನರ ಸಂವಾದ ಹಾಗೂ ಯುದ್ಧ. ಅದಕ್ಕೆ ನನ್ನ ಮಗ, "ಏನಮ್ಮ ಇಬ್ಬರೂ ನೋಡಲಿಕ್ಕೆ ಹಂಗss ಇದ್ದಾರ. ಹಾಡು ಹಾಡುತ್ತ ಜಗಳಾಡತಾರ ಯಾಕೆ? ಯುದ್ಧ ಅಂತೀ ಇದನ. ಹಿಂಗs ಇರ್ತದೇನು?" ಅಂತ ಅವನ ಪ್ರಶ್ನೆ ಸುರುವಾಯಿತು. ಈಗ ನನ್ನ ಮಾತು ಬಂದಾಯಿತು. ಆದರೆ ನನ್ನ ಪಕ್ಕಕ್ಕೆ ಕುಳಿತ ಇಬ್ಬರು ಅಜ್ಜ–ಅಜ್ಜಿಯರು ಅವನಿಗೆ ಹೇಳಲು ಶುರುಮಾಡಿದರು. ಅವನಿಗೆ ಏನು ತಿಳಿಯಿತೋ ಗೊತ್ತಾಗಲಿಲ್ಲ. ನನಗೆ ಮಾತ್ರ ಎಲ್ಲರೂ ಥಿಯೇಟರ್ ಬಿಟ್ಟು ಹೊರಗೆ ಹೋಗಿರಿ ಅಂತ ಅಪ್ಪಣೆ ಮಾಡಿದರು. ಹೀಗಿತ್ತು ನನ್ನ ಸಿನಿಮಾ ಪ್ರಸಂಗ.



ಅಯ್ಯೋ ಮಾರಾಯ್ತಿ...
'ಅಲಸಂದೆ' ತರೋಕ್ ಹೋಗಿ
'ಬಾಸುಂಡೆ' ತರೋ ಹಾಗಾಯ್ತು...ನೋಡು!

● **ದಂನಆ**

- ಥಾಟ್ ಫಾರ್ ಆಲ್ ಡೇಸ್: ನೊ ಒನ್ ಈಸ್ ಸೇಫ್ ಅಂಟಿಲ್ ಎವೆರಿ ಒನ್ ಈಸ್ ಸೇಫ್.
- ವಿಮರ್ಶೆ ಬೇಡ ಎನ್ನುವವರು ಚಪ್ಪಾಳೆಗೂ ಖುಷಿ ಪಡಬಾರದು.
- ಕಾರು ಗರಾಜಿನಲ್ಲಿ ಕ್ಷೇಮವಾಗಿರಬಹುದು ಆದರೆ ಅದು ಇರಬೇಕಾಗಿರುವುದು ರಸ್ತೆಯ ಮೇಲೆ.
- ಅಧ್ಯಯನಗಳ ಪ್ರಕಾರ 40 ನಿಮಿಷಗಳಗಿಂತ ಹೆಚ್ಚು ಕಾಲ ಜನರ ಮನಸ್ಸನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ ಎಂದು ವಿವರಿಸಿದ ನಮ್ಮ ಸೈಕಾಲಜಿ ಪ್ರೊಫೆಸರ್ ಮೂರು ತಾಸಿನ ಲೆಕ್ಚರ್ ಕೊಡುವುದೆ?
- ಬಿಫೋರ್ ಟೀಚರ್ಸ್ ಕೆನ್ ಟೀಚ್ ದೆ ಮಸ್ಟ್ ಲರ್ನ್.
- ಯಶಸ್ಸು ನಿಮ್ಮನ್ನು ಜಗತ್ತಿಗೆ ಪರಿಚಯ ಮಾಡಿಕೊಡುತ್ತದೆ. ಆದರೆ ಸೋಲು ಜಗತ್ತನ್ನು ನಿಮಗೆ ಪರಿಚಯ ಮಾಡಿಕೊಡುತ್ತದೆ.
- ಬಲಗೈ ನವೆಯಾದರೆ ಹಣ ಬರುತ್ತದೆ, ಎಡಗೈ ನವೆಯಾದರೆ ಜಗಳ ಆಗುತ್ತದೆ ಎಂಬ ನಂಬಿಕೆ ಇದೆ. ಎರಡೂ ಒಟ್ಟಿಗೆ ನವೆಯಾದರೆ? ಹಣಕ್ಕಾಗಿ ಜಗಳ?
- ಲುಕಿಂಗ್ ಗುಡ್ ಈಸ್ ಎ ಫುಲ್ ಟೈಂ ಜಾಬ್!
- ಪ್ರತಿಯೊಬ್ಬನೂ ಯಾರೋ ಇನ್ನೊಬ್ಬನ ದೃಷ್ಟಿಯಲ್ಲಿ ಒಬ್ಬ ಮೂರ್ಖನಾಗಿರುತ್ತಾನೆ.
- ಹಣದುಬ್ಬರದ ದಿನಗಳಲ್ಲಿ ಷಾಪಿಂಗ್‌ಗೆ ಹೋದಾಗ ನಿಮಗೆ ಬೇಕಾದ್ದು ಸಿಗದಾಗ ಖುಷಿ ಪಡಿ.
- ವೈಲ್ ವಿ ಥಿಂಕ್ ವಿ ಕೆನ್ ಆಲ್ ರೈಟ್ ಲೆಟರ್ಸ್ ನಾಟ್ ಆಲ್ ಆಫ್ ಅಸ್ ಆರ್ ಮೆನ್ ಆಫ್ ಲೆಟರ್ಸ್.
- ಬೆಟ್ಟದ ಮೇಲೆ ಕಟ್ಟಿದ ಮನೆಯನ್ನು ಮರೆಯಾಗಿಸಲು ಸಾಧ್ಯವಾಗದು.
- ಪಾಲಿಟಿಕ್ಸ್ ಈಸ್ ಎ ಲಾಟ್ ಲೈಕ್ ರಿಲಿಜನ್. ಎಕ್ಸೆಪ್ಟ್ ಇನ್ ಪಾಲಿಟಿಕ್ಸ್ ಇಟ್ ಈಸ್ ಯುವರ್ ಅಪೊನೆಂಟ್ ಹು ಕನ್‌ಫೆಸಸ್ ಯುವರ್ ಸಿನ್ಸ್.
- ನಾನು ನಿಜವಾದ ಕಾರಣ ಹೇಳುವುದಿಲ್ಲ ಆದರೆ ಅಷ್ಟೇ ಚೆನ್ನಾಗಿರುವ ಇನ್ನೊಂದು ಕಾರಣ ನೀಡಬಲ್ಲೆ.
- ಗಾಸಿಪ್: ವೆನ್ ಯು ಲೈಕ್ ಸಂಥಿಂಗ್ ಯು ಲೈಕ್ ಎಬೌಟ್ ಸಂಒನ್ ಯು ಡೋಂಟ್ ಲೈಕ್.
- ಕ್ವೆಶ್ಚನ್ ಯುವರ್ ಸೆಲ್ಫ್ ಅಂಡ್ ದಿ ಆನ್ಸರ್ ಈಸ್ ಯು.
- ಒಳ್ಳೆಯತನ ಎಂದರೇನು?

■

# ಪುಸ್ತಕ ಪರಿಚಯ

**। ಆರತಿ ಘಟಿಕಾರ್**

**ಪುಸ್ತಕ– ನಿದ್ರಾಂಗನೆಯ ಸೆಳವಿನಲ್ಲಿ**
**ಲಲಿತ ಪ್ರಬಂಧಗಳು**
ಲೇಖಕರು – **ಅಣಕು ರಾಮನಾಥ್**

ಖ್ಯಾತ ಹಾಸ್ಯ ಸಾಹಿತಿ ಶ್ರೀ ಅಣಕು ರಾಮನಾಥರ ಲಲಿತ ಪ್ರಬಂಧಗಳ ಸಂಕಲನ "ನಿದ್ರಾಂಗನೆಯ ಸೆಳವಿನಲ್ಲಿ" ಓದಿದಾಗ ಇವರು "ಹಾಸ್ಯ ಪುತ್ರ ಕಾಮೇಷ್ಟಿ ಯಾಗ" ಮಾಡಿದಾಗ ಜನಿಸಿದ ಪುತ್ರರಿರಬಹುದೆ ಎಂಬ ಅನುಮಾನ ಕಾಡಿ ಬಿಡುತ್ತದೆ.

ಕಾರಣ ಇಲ್ಲಿರುವ ಒಂದೊಂದು ಪ್ರಬಂಧಗಳು ವಿನೂತನ ಶೈಲಿಯಲ್ಲಿ ಹಾಸ್ಯ ಉಕ್ಕಿಸುವ ಪ್ರಯೋಗಗಳು ! ವಿಡಂಬನೆ, ಕಟಕಿ, ರೂಪಕಗಳಿಂದ ಕೂಡಿದ ದಂಡಿಯಾದ ಮನರಂಜನಾ ಸರಕುಗಳಿಲ್ಲಿ ಪುಟ ಪುಟಕ್ಕೂ ಪುಟಿದೇಳುತ್ತದೆ . ಜನಪ್ರಿಯ ಪತ್ರಿಕೆಯ "ನೀವು ಕೇಳಿದಿರಿ" ವಿಭಾಗದಲ್ಲಿ ಓದುಗರ ಪ್ರಶ್ನೆಗಳಿಗೆ ಉತ್ತರ ಭೂಪರಾಗಿ "ರಾಮ ಬಾಣ" ಬಿಡುವುದರಲ್ಲಿ ಇವರದು ಎತ್ತಿದ ಕೈ ! ಎಂತಾ ನಗೆ ಚಟಾಕಿ ಹರಿಸುವುದರಲ್ಲೂ ಸೈ! ಹಾಗಾಗಿ ಈ ಪುಸ್ತಕ ನನ್ನ ಕೈ ಸೇರಿ ತಿಂಗಳು ಕಳೆದರೂ ಇಲ್ಲಿ ಅಡಗಿರುವ ಹಾಸ್ಯವನ್ನು ಅಗೆದಗೆದು ಅರಗಿಸಿಕೊಂಡು ಓದಬೇಕಾದ್ದರಿಂದ ಕೊಂಚ ವಿಳಂಬವಾಯಿತು ಅನ್ನಿ !

ಲಲಿತ ಪ್ರಬಂಧಗಳಲ್ಲಿ ಕೆಲವು ಘಟನಾಧಾರಿತ ವಿಷಯಗಳ ಸುತ್ತ ಹೆಣೆದಿದ್ದರೆ ಮತ್ತೆ ಕೆಲವು ವಿಷಯಾಧಾರಿತ ಪ್ರಬಂಧಗಳಾಗಿರುತ್ತವೆ. ಯಾವುದೇ ಸನ್ನಿವೇಶ, ಪ್ರಸಂಗ, ಅನುಭವ ಕಥನಗಳಿರಲಿ ಪುಸ್ತಕದ ಓದಿನೊಂದಿಗೆ ಲೇಖಕ ನಮ್ಮೊಡನೆ ಸಂಭಾಷಿಸುತ್ತ, ನಮಗೆ ಕಂಡಿದ್ದನ್ನೇ ಹೊಸ ದೃಷ್ಟಿಕೋನದಿಂದ ಕಟ್ಟಿಕೊಡುತ್ತಾ ನಮ್ಮ ಜೊತೆಯಲ್ಲೇ ಇದ್ದಂತೆ ಭಾಸವಾಗುವುದು ಲಲಿತ ಪ್ರಬಂಧಗಳ ವಿಶೇಷತೆ ಎನ್ನಬಹುದು.

ಈ ಪ್ರಬಂಧಗಳಲ್ಲಿ ನನಗೆ ಕಂಡು ಬಂದಿದ್ದು ಅಣಕು ರಾಮನಾಥ ಅವರ ತರ್ಕಬದ್ದ ಲಘು ಶೈಲಿಯ ಬರಹ, ಪದಗಳ ಜೊತೆಗಿನ ಆಟ, ಅದಕ್ಕೆ ಹೊಸ ಅರ್ಥ ನೀಡುವ ಹಾಸ್ಯಮಯವಾದ ಚುರುಕು ನೋಟ ! ಇವೆಲ್ಲ ಒಂದು ಕಡೆಗಾದರೆ ಸಂದರ್ಭಕ್ಕೆ ಹೊಂದುವಂತೆ ಕಲ್ಪನಾತೀತ ಹಾಸ್ಯದ ವಿವರಣೆಗಳು ನಮ್ಮನ್ನು ಭೂಲೋಕ, ಪಾತಾಳ, ಕೈಲಾಸ ಎಲ್ಲಾ ಕಡೆ ಸುತ್ತಾಡಿಸಿ ನಗೆ ಚಿಮ್ಮಿಸುತ್ತಲೇ ಬೆಂಡಾಗಿಸಿಬಿಡುತ್ತವೆ. ಒಮ್ಮೊಮ್ಮೆ ಮಿಡಲ್ ಸ್ಟಂಪ್ ಮೇಲೆ ಹಾಕಿದ ಬಾಲಿಗೂ ಸಿಕ್ಸರ್ ಹೊಡೆಯುವ ನಿಪುಣ ದಾಂಡಿಗನಂತೆ ಯಾವುದೇ ವಿಷಯ ಎತ್ತಿಕೊಂಡರೂ ಅದಕೊಂದು ಸ್ವಾರಸ್ಯಕರವಾದ ಬೆರಗು ಮೂಡಿಸುವ ವ್ಯಾಖ್ಯಾನ ಸೃಷ್ಟಿ ಮಾಡುತ್ತಾರೆ. (ಆಗೆಲ್ಲ ಓದುಗರೂ ಸಹ ಬಾಲಿನೊಡನೆ ಕೇಕೆ ಹಾಕುತ್ತ ಆಗಸಕ್ಕೆ ಹಾರಿದರೂ ಹಾರಿಯಾರು) ಕೆಲವೊಮ್ಮೆ ಇವರ ಹಾಯ್ ಲೆವೆಲ್ ಚುರುಕು ಹಾಸ್ಯ ನಮ್ಮ ತಲೆ ಮೇಲೆ ಹೋಗುವುದೂ ಉಂಟು .

ಇನ್ನು ಇಲ್ಲಿನ ಎಷ್ಟೋ ಲೇಖನಗಳಲ್ಲಿ ಹಳೆಗನ್ನಡ/ಸಂಸ್ಕೃತದಲ್ಲಿ ಶ್ರೀಯುತರ ಪಾಂಡಿತ್ಯವೆ ಮೆರೆದು, ಅದನ್ನು ಸಮರ್ಥವಾಗಿ ಬಳಸಿಕೊಂಡು ಸ್ವಾರಸ್ಯಕರವಾಗಿ ಮೂಡಿಸುವ punಡಿತ್ಯವೂ ಅಮೋಘವಾಗಿದೆ. ಭರಪೂರ ಪಂಚ್ ಲೈನುಗಳು ಒಂದೊಂದು ಪ್ಯಾರದಲ್ಲೂ ಹಂಪಿನಂತೆ ಹಾಯ್ ಜಂಪ್ ಹೊಡೆಸಿದರೆ, ಚಂದವಾಗಿ ಹೊಸೆದ ಅಣಕುವಾಡುಗಳು ಸಹ ನಗೆ ಬಾಣಗಳಂತೆ ರಂಜಿಸುತ್ತದೆ .

**"ಶೋಣಿತದ ಸೆಳೆವಿನಲಿ" ಎಂಬ ಆರಂಭಿಕ ಪ್ರಬಂಧದಲ್ಲಿ :**

ಕೆಂಪು ಬಣ್ಣವನ್ನು ರಸಮಯವಾಗಿ ವರ್ಣಿಸುತ್ತ ಸಿಗ್ನಲ್ನಲ್ಲಿ ಕಾಯಿಸುವ ಕೆಂಪಿನಿಂದ ಹಿಡಿದು ಸಮುದ್ರ ಮಂಥನದಲ್ಲಿ ಲಕ್ಷ್ಮೀದೇವಿ ಉಟ್ಟ ಕೆಂಪು ಸೀರೆ ಮ್ಯಾಚಿಂಗ್ ರವಿಕೆವರೆಗೂ ಸ್ವಾರಸ್ಯಕರವಾದ ವ್ಯಾಖ್ಯಾನವಿದೆ. ಇಲ್ಲಿ ಹಳೆಗನ್ನಡದ ಮಹಾನ್ ಕವಿ ನಾಗವರ್ಮ, ಯುಗದ ಕವಿ ಬೇಂದ್ರೆ, ರತ್ನನ ಪದಗಳ ಕಾವ್ಯಗಳಲ್ಲಿ ಬರುವ ಕೆಂಪು ಕಂಪು ಮೂಡಿಸಿದರೆ, ಗಕ್ಕನೆ ಯೂ ಟರ್ನ್ ಹೊಡೆದು ಗುಟ್ಕಾ ಪ್ರಿಯರ ಪಿಚಕಾರಿಗಳಿಂದ ಮೋರಿ ಫುಟ್ಪಾತ್ ಎಲ್ಲಾ ಕೆಂಪಾದವೂ ಎನ್ನುವ ಅಣಕು ಗೀತೆ ಮೊಳಗುತ್ತದೆ !

ಪ್ರಸಿದ್ಧರ ಸನ್ಮಾನ ಸಮಾರಂಭದಲ್ಲಿ ವೇದಿಕೆಯ ಮೇಲಿದ್ದ ಗಣ್ಯರ ಪರಿಚಯ ಮಾಡಿಸುತ್ತ ( ಪರಿಚಯದ ಪರಿ ಪರಿ ಎಂಬ ಲೇಖನ ) ಪುಟ್ಟಣ್ಣ ಕಣಗಾಲ್, ಪುಟ್ಟಣ್ಣ ಕಣ್ಣಗಲರಾಗಿ, ಪ್ರಸಿದ್ಧ ಕಾದಂಬರಿಗಾರ ಚದುರಂಗರು ಚದುರ್ಬಲರಾಗಿ, ಮಾಸ್ಟರ್ ಹಿರಣ್ಣಯ್ಯ ಅವರೊಡನೆ ಶಾಲು ಹಾಕಿಸಿಕೊಳ್ಳುವ ಪ್ರಸಂಗ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತದೆ .

"ದೀಪವೂ ನಿನ್ನದೇ ಗಾಳಿಯೂ ನಿನ್ನದೇ ಆಡದಿರಲಿ ವೈರು, ಮಳೆಯೂ ನಿನ್ನದೆ ಕರೆಂಟೂ  ನಿನ್ನದೇ ಹೋಗದಿರಲಿ ಲೈಟು"

ಎಂದು ದೀಪಾವಳಿಗೆ ವಿದ್ಯುತ್ ಕಡಿತದಿಂದ ನೊಂದು ಪ್ರೇಮ ಕವಿ ಕೆಎಸ್‌ನ ಅವರ ದೀಪವೂ ನಿನ್ನದೇ ಕವನದ ಶೈಲಿಯಲ್ಲಿ ಹರಿಬಿಡುವ ಈ ಸಮರ್ಪಣ ಭಾವದ ಅಣಕುವಾಡು ಆ ಭಗವಂತನಿಗೂ ಕಚಗುಳಿ ಇಟ್ಟು ನಗು ಬರಿಸುವಂತದ್ದು?

"ನಾನು ಬಾಣಸಿಗನಾದಾಗ" ಪ್ರಬಂಧದಲ್ಲಿ ಐಸೋಲೇಶನ್‌ನಲ್ಲಿ ಇರುವ ಮಡದಿ ಮಗಳಿಗಾಗಿ ಇವರು ಮಾಡುವ ಉಪ್ಪಿಟ್ಟಿನ ತಯಾರಿ ಯಾವ ಉಪಮಾ ಅಲಂಕಾರಕ್ಕೂ ಕಮ್ಮಿಯಿಲ್ಲ ! ಅರ್ಥಾತ್ ಉಪ್ಪಿಟ್ಟು ಎಲ್ಲ ಕಡೆಯಿಂದಲೂ ಪೆಟ್ಟು ತಿಂದು ಕೊನೆಗೆ ಇವರು ಮಾಡಿದ ಘನವಾದ ಉಪ್ಪಿಟ್ಟು ಹೇಗೆ ಉಪಯೋಗಕ್ಕೆ ಬಂತು ಎನ್ನುವುದು ನೀವೇ ಓದಿ ತಿಳಿಯಬೇಕು !

"ಬೋಡ ಈಸ್ ಬ್ಯೂಟಿಫುಲ್" ಪ್ರಬಂಧದಲ್ಲಿ ಟ್ರಾಫಿಕ್ ಲೈಟಿಗೆ ರೆಫ್ಲೆಕ್ಟ್ ಆಗುವ ಬೋಡು ತಲೆಗಳ ಬುರುಡೆ ಪುರಾಣ ನಗೆ ಉಕ್ಕಿಸುತ್ತದೆ. ಕ್ರಮೇಣವಾಗಿ ಬಾಲ್ಡಾಗಿ, ಬಾಂಡ್ಲಿಯಂತಾಗುವ ಪುರುಷರ ಕೇಶ ಪಯಣವನ್ನು ಕಪ್ಪನೆಯ ಮೋಡವನ್ನು ಇನಿತಿನಿತೆ ಸರಿಸುತ್ತ ಹುಣ್ಣಿಮೆಯ ಹೊತ್ತಿಗೆ ಥಳ ಥಳ ಹೊಳೆಯುವ ಚಂದ್ರನಂತೆ ಎನ್ನುತ್ತಾ ನಿಸರ್ಗದಲ್ಲಿ ಶುಕ್ಲ ಪಕ್ಷ ಕೃಷ್ಣ ಪಕ್ಷಗಳು ನಿರಂತರವಾಗಿದ್ದರೆ , ಈ ಬಾಲ್ಡಿ ತಲೆಗಳ ಕೇಶರಾಶಿ ಮಾತ್ರ ಅವೆನ್ಯೂ ರಸ್ತೆಯಂತೆ –one way ಎನ್ನುವ ನಗೆ ಚಟಾಕಿ ಹಾರಿಸುತ್ತಾರೆ. ಇಲ್ಲಿ ಪೌರಾಣಿಕ ಪಾತ್ರಗಳೂ ಎಂಟ್ರಿ ಕೊಟ್ಟು ಬೆರಗು ಮೂಡಿಸುತ್ತದೆ.

ಈ ಸಂಕಲನದಲ್ಲಿ ಜಾಹಿರಾತಿಗೆ ಜೈ , ಹೀಗೊಂದು ಉಡುಪಿಯ ಪ್ರವಾಸ, ಸೆಲ್ ಫೋನ್ ಯೋಗಾಸನ, ಸ್ಯಾಟಲೈಟ್ ಪುರಾಣವು, ಒಕ್ಕಣ್ಣಿನ ವಯ್ಯಾರಿ ..ಮುಂತಾದ ಹಾಸ್ಯ ಪ್ರಚೋದಕ ಪಬಂಧಗಳ ಸುಗ್ಗಿಯೇ ಕಾಣಬಹುದು, ಸಾಮಾಜಿಕ ಓರೆ ಕೋರೆಗಳೂ ಸಾಮಾನ್ಯ ಸಮಸ್ಯೆಗಳೂ (ಸನ್ನಿವೇಶಗಳು) ಇವರ ಚಿಕಿತ್ಸಕ (ಹಾಸ್ಯ) ದೃಷ್ಟಿಗೆ ಗುರಿಯಾಗಿ ಚಾಟಿ ಬೀಸಿ ಕೊಳ್ಳುತ್ತವೆ . ನಾವೆಲ್ ಕೊರೊನಾ ವಕ್ಕರಿಸಿದಾಗ ಆತ್ಮ ಸ್ಥೈರ್ಯಗುಂದದೆ ನಾವೆಲ್ (novel) ಹಿಡಿದು ಕ್ವಾರೆಂಟೈನ್ ಆಗುವ ಇವರ ಸಲಹೆಯಂತೂ ಯಾವ ಕಾಲಕ್ಕೂ ಉಪಯೋಗವಾಗುವಂತಾದ್ದು! ಇನ್ನು ಹೃದಯದ ಬಡಿತ, ಮೊರೆತ, ಎದೆಯ ವೀಣೆ ....ತಂ ನಂ ತಂ ನಂ ಎಂದು ಹೇಗೆಲ್ಲಾ ಯಾವಾಗೆಲ್ಲ ಬಡಿದು ಕೊಳ್ಳುತ್ತದೆ ಎಂದು ತಿಳಿಯಲು cardiologist ಬದಲಿಗೆ ಒಬ್ಬ ಕವಿಯ ಬಳಿ ಕೇಳಿ ತಿಳಿದರೆ ಸಾಕು ಎನ್ನುವ ಇವರ ಹಾಸ್ಯ ಪ್ರಜ್ಞೆಗೆ ಇವರೇ ಸಾಟಿ.

ಏನೇ ಅನ್ನಿ "ಹಸಿರಾದುದೆನ್ನಾತ್ಮ ರಸಪಾನ ಸ್ನಾನದಲಿ" ಎಂದು ರಸ ಋಷಿ ಕುವೆಂಪು ನುಡಿದಂತೆ ಹಾಸ್ಯ ರಸವನ್ನು ವಿಚಾರವಂತಿಕೆಯಿಂದ ವೈವಿಧ್ಯಮಯವಾಗಿ ಕಟ್ಟಿ ಕೊಟ್ಟ ಈ ಪ್ರಬಂಧ ಸಂಕಲನವನ್ನು ಬರೆದ ಅಣಕು ರಾಮನಾಥ್ ಸರ್ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇನ್ನು ಹೆಚ್ಚಾಗಿ ಹೇಳುವ ಬದಲು ಈ ಪ್ರಬಂಧ ಸಂಕಲನದಲ್ಲಿ ಭರಪೂರವಾಗಿ ಉಣಬಡಿಸುವ ಹಾಸ್ಯ ರಸಯಾನ, punchಅಮೃತವನ್ನು ನೀವೂ ಸಹ ಸವಿದು ನೋಡಿ ಎನ್ನುವೆ.

ಪುಸ್ತಕ ಕೊಳ್ಳಲು ಲಿಂಕ್:
https://tejupublicationsonline.stores.instamojo.com/product/273536/nidranganeya-selavinalli-/



ಚೆಂಡು ಮತ್ತು ಚಂಡಮಾರುತ ಎರಡೂ ಸೇರಿ
ನಮ್ಮ ಜೀವನದಲ್ಲಿ 'ಚೆಂಡಾಟ' ಆಡ್ತಿವೆ...!